# ಅಧ್ಯಾಯ-5

## ಕೈಗಾರಿಕೆಗಳು

ಕೇಂದ್ರ ಸರ್ಕಾರವು ಧಾರವಾಡ ಜಿಲ್ಲೆಯನ್ನು ಕೈಗಾರಿಕೆಯಲ್ಲಿ ಅತೀ ಹಿಂದುಳಿದ ಜಿಲ್ಲೆಯೆಂದು ಘೋಷಿಸಿದೆ. ಇದರಿಂದ ಕೈಗಾರಿಕೋದ್ಯಮಿಗಳು ಜಿಲ್ಲೆಯಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೊಡುವ ಪ್ರೋತ್ಸಾಹಧನ ಮತ್ತು ರಿಯಾಯತಿಗಳ ಸೌಲಭ್ಯವನ್ನು ಪಡೆದುಕೊಳ್ಳಬಹುದಾಗಿದೆ. ಕೇಂದ್ರ ಸರ್ಕಾರವು ರಾಜ್ಯದಲ್ಲಿ ಬೆಳವಣಿಗೆ ಕೇಂದ್ರಗಳಾಗಿ ಆಯ್ದುಕೊಂಡಿರುವ ಮೂರು ಜಿಲ್ಲೆಗಳ ಪೈಕಿ ಧಾರವಾಡ ಜಿಲ್ಲೆಯೂ ಒಂದಾಗಿದೆ. (ಉಳಿದ ಬೆಳವಣಿಗೆಯ ಕೇಂದ್ರಗಳು ಹಾಸನ ಮತ್ತು ರಾಯಚೂರು). ಜಿಲ್ಲೆಯ ಬೆಳವಣಿಗೆ ಕೇಂದ್ರದ ಸಾರಿಗೆ ಸಂಪರ್ಕಗಳ ಅಭಿವೃದ್ಧಿಗೆ ಕೇಂದ್ರ ಸರ್ಕಾರವು 30 ಕೋಟಿ ರೂಪಾಯಿಗಳನ್ನು ವೆಚ್ಚಮಾಡಿದೆ. ರಾಜ್ಯ ಸರ್ಕಾರವು ಕೈಗಾರಿಕೆಗಳ ಬೆಳವಣಿಗೆಗೆ ಅತ್ಯಾವಶ್ಯಕವಾಗಿರುವ ಬಂಡವಾಳ, ಅನುದಾನ, ಹೊಸ ಘಟಕಗಳ ಅನುದಾನ, ವ್ಯಾಪಾರ ತೆರಿಗೆ ರಿಯಾಯಿತಿ ಮೊದಲಾದ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ರಾಜ್ಯದ ಎಲ್ಲಾ ಜಿಲ್ಲೆಗಳನ್ನು 1, 2, 3 ಮತ್ತು 4 ನೇ ವಲಯಗಳ ವ್ಯಾಪ್ತಿಗೆ ಸೇರಿಸಿ, ವಲಯವಾರು ಸೌಲಭ್ಯವನ್ನು ಘೋಷಿಸಿದೆ. ಧಾರವಾಡ ಜಿಲ್ಲೆಯ ಗದಗ, ರಾಣೆಬೆನ್ನೂರು ಮತ್ತು ಹುಬ್ಬಳ್ಳಿಯು ವಲಯ 2 ಕ್ಕೂ, ಹಾನಗಲ್, ಹಿರೇಕೆರೂರು, ಕುಂದಗೋಳ, ಮುಂಡರಗಿ, ನರಗುಂದ, ರೋಣ, ನವಲಗುಂದ, ಸವಣೂರು, ಶಿಗ್ಗಾಂವಿ, ಶಿರಹಟ್ಟಿ, ಹಾವೇರಿ, ಬ್ಯಾಡಗಿ ಮತ್ತು ಕಲಘಟಗಿ ಇವು ವಲಯ 3ಕ್ಕೂ, ಧಾರವಾಡ ಬೆಳವಣಿಗೆ ಕೇಂದ್ರವು ವಲಯ 4 ಕ್ಕೂ ಸೇರಿವೆ. ಹುಬ್ಬಳ್ಳಿ, ಧಾರವಾಡ, ಗದಗ, ನರಗುಂದ ಮತ್ತು ನವಲಗುಂದ ಇವು ಜಿಲ್ಲೆಯ ಪ್ರಮುಖ ಔದ್ಯೋಗಿಕ ಕೇಂದ್ರಗಳಾಗಿವೆ. ಖನಿಜ ಸಂಪತ್ತು ಜಿಲ್ಲೆಯ ಹಾನಗಲ್ಲು, ಮುಂಡರಗಿ, ರಾಣೆಬೆನ್ನೂರು ಮತ್ತು ಶಿರಹಟ್ಟಿ ತಾಲೂಕುಗಳಲ್ಲಿ ವಿರಳವಾಗಿ ದೊರೆಯುತ್ತದೆ. ಲಭ್ಯವಿರುವ ಖನಿಜ ಸಂಪತ್ತಿನಲ್ಲಿ ಕಬ್ಬಿಣದ ಅದಿರು, ಮೌಲ್ಡಿಂಗ್ ಉಸುಕು, ಜೇಡಿ ಮಣ್ಣು ಪ್ರಮುಖವಾಗಿದ್ದು ಇವುಗಳ ಉತ್ಪತ್ತಿ 1992-93 ರಲ್ಲಿ ಅನುಕ್ರಮವಾಗಿ 2,311 ಟನ್, 19,907 ಟನ್ ಮತ್ತು 2,731 ಟನ್‌ಗಳಷ್ಟಿತ್ತು. ಜಿಲ್ಲೆಯಲ್ಲಿ ಖನಿಜ ಉತ್ಪಾದನೆಯು ಅಲ್ಪ ಪ್ರಮಾಣದ್ದಾಗಿರುವುದರಿಂದ ಖನಿಜ ಆಧಾರಿತ ಕೈಗಾರಿಕೆಗಳ ಬೆಳವಣಿಗೆಗೆ ಹೆಚ್ಚು ಅವಕಾಶವಿರುವುದಿಲ್ಲ. ಕೃಷಿ ಉತ್ಪನ್ನಗಳಾದ ಹತ್ತಿ, ಎಣ್ಣೆ ಬೀಜಗಳು, ಬತ್ತ ಮೊದಲಾದವುಗಳನ್ನು ಅಧಿಕ ಪ್ರಮಾಣದಲ್ಲಿ ಉತ್ಪಾದಿಸುತ್ತಿರುವುದರಿಂದ ಇವುಗಳ ಆಧಾರಿತ ಕೈಗಾರಿಕೆಗಳು ಜಿಲ್ಲೆಯಾದ್ಯಂತ ಹಬ್ಬಿವೆ. ರಾಣೆಬೆನ್ನೂರು ಮತ್ತು ಹಾವೇರಿಗಳಲ್ಲಿ ಕುರಿ ಸಾಕಣೆ ಕೇಂದ್ರಗಳಿದ್ದು ಉಣ್ಣೆ ಕಂಬಳಿ ತಯಾರಿಕೆಗೆ ಪ್ರಸಿದ್ಧಿ ಪಡೆದಿವೆ. ಹುಬ್ಬಳ್ಳಿ ಹಾಗೂ ಗದಗಗಳಲ್ಲಿ ಹತ್ತಿ ಗಿರಣಿಗಳೂ, ನರಗುಂದ ಹಾಗೂ ಹುಲಕೋಟಿಗಳಲ್ಲಿ ನೂಲಿನ ಗಿರಣಿಗಳು ಇವೆ.

ಬಾದಾಮಿ ಚಾಲುಕ್ಯರ ಕಾಲದಲ್ಲೇ ಲಕ್ಷ್ಮೇಶ್ವರ ಹಾಗೂ ವರಗಿರಿಗಳಲ್ಲಿ ಇದ್ದ ಪಟ್ಟೇಗಾರರ (ರೇಷ್ಮೆ ನೇಯ್ಗೆ) ಉದ್ಯೋಗವನ್ನು (8 ನೇ ಶತಮಾನದಲ್ಲಿ) ಶಾಸನಗಳು ಉಲ್ಲೇಖಿಸುತ್ತವೆ. 793ರ ಲಕ್ಷ್ಮೇಶ್ವರ ಶಾಸನದಲ್ಲಿ ಪಟ್ಟೆಗಾರ ಶ್ರೇಣಿಯ ವಿಚಾರವಿದೆ. ಅಣ್ಣಿಗೇರಿಯಲ್ಲೂ 1157 ರಲ್ಲಿ ಪಟ್ಟೆಗಾರ ಶ್ರೇಣಿ ಇತ್ತೆಂದೂ ಶಾಸನ ಹೇಳುತ್ತದೆ. ಅಲ್ಲದೆ ಶಾಸನಗಳಲ್ಲಿ ಧಾರವಾಡ ಜಿಲ್ಲೆಯ ನೇಯ್ಗೆಯವರ ಅನೇಕ

ಶ್ರೇಣಿಗಳ ವಿಚಾರವೂ ಬರುತ್ತದೆ. ಅಣ್ಣಿಗೇರಿಯ 12 ನೇಯ ಶತಮಾನದ ಶಾಸನದಲ್ಲಿ 'ಸಾಲೆಸಾಸಿರ್ವರ' (1000 ನೇಕಾರರು) ಶ್ರೇಣಿಯ ಉಲ್ಲೇಖವಿದೆ. ಮುಳಗುಂದದಲ್ಲಿ (1062) 'ಸಾಲಿಗರಯ್ವದಿಂಬರು' (52) ಇದ್ದರು. ರೋಣದಲ್ಲಿ 874 ರಲ್ಲೇ ಪಟ್ಟೆಗಾರ ಸಮಯವಿತ್ತು.

1638 ರಲ್ಲಿ ಬ್ರಿಟಿಷರು ಈಗಿನ ಉತ್ತರ ಕನ್ನಡದ ಕಡವಾಡ (ಕಾರವಾರ ಬಳಿ, ಕಾಳೀನದಿ ದಂಡೆಯಲ್ಲಿ)ದಲ್ಲಿ ತಮ್ಮ ಮಳಿಗೆ ಸ್ಥಾಪಿಸಿ ಒಳನಾಡಿನ 50,000 ಮಗ್ಗಗಳಿಂದ ಬಟ್ಟೆ ಉತ್ಪಾದನೆ ಮಾಡಿಸಿ ಖರೀದಿಸುವ ಒಪ್ಪಂದ ಮಾಡಿಕೊಂಡಿದ್ದರೆಂದು ತಿಳಿಯುತ್ತದೆ. ಇದಕ್ಕಾಗಿ ಹುಬ್ಬಳ್ಳಿಯಲ್ಲೂ ಬ್ರಿಟಿಷರು ಒಂದು ಮಳಿಗೆ ತೆರೆದಿದ್ದರು. ಹುಬ್ಬಳ್ಳಿ ಪರಿಸರವೇ ಈ ಉತ್ಪಾದನೆಯ ಕೇಂದ್ರವಾಗಿತ್ತೆಂಬ ಬಗ್ಗೆ ಸಂದೇಹವಿಲ್ಲ. ಹುಬ್ಬಳ್ಳಿಯಿಂದ ಕದ್ರಾವರೆಗೆ ಎತ್ತಿನ ಹೇರಿನಲ್ಲಿ ಈ ವಸ್ತುಗಳು ಸಾಗಿ ಕಾಳಿನದಿಯಿಂದ ಕಡವಾಡ ಮೂಲಕ ಸಾಗರ ಮಾರ್ಗವಾಗಿ ರಫ್ತಾಗುತ್ತಿದ್ದವು. 1650ರಿಂದ 1660ರ ನಡುವೆ ನವಿರು ಬಟ್ಟೆ ಕಾರವಾರದಿಂದ ಅಪಾರವಾಗಿ ರಫ್ತಾಗುತ್ತಿತ್ತೆಂದು ತಿಳಿಯುತ್ತದೆ. ಇದು ಹುಬ್ಬಳ್ಳಿಯಿಂದಲೇ ಬರುತ್ತಿತ್ತು. ನವಲಗುಂದ, ಅಣ್ಣಿಗೇರಿಗಳು ನೂಲು ಉತ್ಪಾದನೆಗೆ 18ನೇಯ ಶತಮಾನದಲ್ಲೂ ಪ್ರಸಿದ್ಧವಾಗಿದ್ದು ಇಲ್ಲಿನ ನೂಲನ್ನು ಹುಬ್ಬಳ್ಳಿ ಪೇಟೆಗೂ ಒಯ್ದು ಮಾರುತ್ತಿದ್ದರು.

ಇದಲ್ಲದೆ 13ನೇಯ ಶತಮಾನದ ಪೂರ್ವದಲ್ಲಿ ಧಾರವಾಡ ಜಿಲ್ಲೆಯು ಎಣ್ಣೆ ಕೈಗಾರಿಕೆಗೆ ಪ್ರಸಿದ್ಧವಾಗಿದ್ದು ಗಾಣಿಗರು ಶ್ರೀಮಂತ ವರ್ಗಗಳಲ್ಲಿ ಪರಿಗಣಿಸಲ್ಪಟ್ಟಿದ್ದರೆಂದು ಡಾ|| ಜಿ.ಆರ್. ಕುಪ್ಪುಸ್ವಾಮಿ ಹೇಳಿದ್ದು, ಕೋಡಿಕೊಪ್ಪ, ಗುಡಗೇರಿ, ಕುಂದಗೋಳ, ಲಕ್ಷ್ಮೇಶ್ವರ, ಯಮನೂರು, ಕೋಣವತ್ತಿ (ಕೊಣತಿ), ನರೇಗಲ್, ಗದಗ, ಅಮ್ಮಿನಭಾವಿ, ಅಬ್ಬಿಗೇರಿ, ಕುಂಟೆ, ಸೊರಟೂರು, ಲಕ್ಕುಂಡಿ, ರಟ್ಟಿಹಳ್ಳಿ ಹಾಗೂ ಸಂಶಿಗಳು ಎಣ್ಣೆ ಉತ್ಪಾದನೆಯ ಗಣ್ಯ ಕೇಂದ್ರಗಳೆಂದು ಶಾಸನಗಳ ಆಧಾರದಿಂದ ತೋರಿಸಿದ್ದಾರೆ. ಗುಡಗೇರಿ, ಮುಳಗುಂದಗಳ ತೆಲ್ಲಿಗರು ಶ್ರೀಮಂತರೂ ಉದಾರಿಗಳೂ ಎಂದು ಶಾಸನಗಳು ಹೇಳಿದ್ದು ಅವರ ಶ್ರೇಣಿಗಳ ಉಲ್ಲೇಖವೂ ಇದೆ. 'ತೆಲ್ಲಿಗರೈವತ್ತೊಕ್ಕಲು' ಎಂಬ ಇವರ ಶ್ರೇಣಿಯ ಉಲ್ಲೇಖನವು ಲಕ್ಷ್ಮೇಶ್ವರ, ಗುಡಿಗೇರಿ, ಡಂಬಳ, ಹತ್ತಿಮತ್ತೂರು ಮುಂತಾದ ಅನೇಕ ಊರುಗಳಲ್ಲಿ ಕಾಣಬರುತ್ತದೆ.

ಲಕ್ಕುಂಡಿ ಹಾಗೂ ಸೂಡಿಗಳು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಾಣ್ಯಗಳ ಟಂಕಸಾಲೆಗಳನ್ನು ಹೊಂದಿದ್ದ ವಿಚಾರ ಶಾಸನಗಳಿಂದ ತಿಳಿಯುತ್ತದೆ. ಲೊಕ್ಕಿಗುಂಡಿ ಗದ್ಯಾಣ ಎಂಬ ನಾಣ್ಯದ ಹೆಸರು ಪದೇಪದೇ ಶಾಸನಗಳಲ್ಲಿ ಬರುತ್ತದೆ.

ಇದಲ್ಲದೆ ಆಹಾರ ವಸ್ತುಗಳಾದ ಬತ್ತ, ಅಡಿಕೆಗಳ ಸಂಸ್ಕರಣ, ಕಲ್ಲುಪ್ಪಿನ ಉತ್ಪಾದನೆ, ಕಂಬಳಿ ನೇಯ್ಗೆ, ಲೋಹದ (ಕಬ್ಬಿಣ, ಕಂಚು, ಬೆಳ್ಳಿ, ಬಂಗಾರ) ಸರಕುಗಳ ತಯಾರಿಕೆ, ಕುಂಬಾರಿಕೆ, ಮರಗೆಲಸ ಇವೆಲ್ಲ ಉದ್ಯೋಗಗಳಿದ್ದವು. ಇವುಗಳಿಗೆ ಗಾಣದೆರೆ, ಮಗ್ಗದೆರೆ ಮುಂತಾದ ತೆರಿಗೆಗಳಿದ್ದವು. ಇವರ ಕೊಟ್ಟಳಿ, ಶ್ರೇಣಿ, ಮುಂತಾದ ಸಂಘಟನೆಗಳು ವೃತ್ತಿಯ ಹಿತ ಕಾಪಾಡುತ್ತಿದ್ದವು. ಉಗೂರ ಮುನ್ನೂರ್ವರು ಎಂಬ ವೀಳ್ಯದೆಲೆ ಕೀಳುವವರ ಶ್ರೇಣಿಯೂ ಇತ್ತು.

ಬುಕನನ್ ಎಂಬ ಪ್ರವಾಸಿ ಬೆಂಗಳೂರಿನ ಬಗ್ಗೆ 1800 ರಲ್ಲಿ ಹೇಳಿರುವಂತೆ ಖತ್ರಿ (ಗುಜರಾತಿನ ದಕ್ಷಿಣ ಭಾಗದ ಕ್ಷತ್ರಿಯರು) ಎಂಬುವರು ರೇಷ್ಮೆ ಬಟ್ಟೆಗೆ ಬಣ್ಣ ಹಾಕುತ್ತಿದ್ದರೆಂದೂ ಇವರು ನೇಯ್ಗೆಯವರಿಗಿಂತ ಹೆಚ್ಚು ಶ್ರೀಮಂತರಾಗಿದ್ದರೆಂದೂ ಅಭಿಪ್ರಾಯಪಟ್ಟಿದ್ದಾನೆ. ಈ ಜನರು ಹುಬ್ಬಳ್ಳಿಯಲ್ಲೂ ಇನ್ನೂ ಹೆಚ್ಚಾಗಿ ನೆಲಸಿ ಜರತಾರಿ ಕೆಲಸದಲ್ಲಿ ತೊಡಗಿದ್ದರು. ಬ್ರಿಟಿಷರ ಆಗಮನ ಕಾಲದಲ್ಲಿ ಧಾರವಾಡ, ಗದಗ, ಗುತ್ತಲ, ಹುಬ್ಬಳ್ಳಿ, ಕರ್ಜಗಿ, ನವಲಗುಂದ, ರಾಣೆಬೆನ್ನೂರು ಮುಂತಾದ ಊರುಗಳಲ್ಲಿ ಕಾಗದದ ಉತ್ಪಾದನೆ ಆಗುತ್ತಿತ್ತು. ಇದು ವಿಜಯನಗರ ಮತ್ತು ಆದಿಲ್‌ಷಾಹಿಗಳ ಕಾಲದಲ್ಲಿ ಆರಂಭವಾಗಿರಬೇಕು. ತೇಗೂರಿನಲ್ಲಿ ಕಬ್ಬಿಣದ ಅದುರಿನಿಂದ ಕಬ್ಬಿಣ ಉತ್ಪಾದಿಸುತ್ತಿದ್ದರು. ಹುಲುಕೊಪ್ಪದಲ್ಲಿ (ಕಲಘಟಗಿ ತಾ||) 18ನೇಯ ಶತಮಾನದಲ್ಲಿ ಆರು ಕುಲುಮೆಗಳಿದ್ದು ಒಂದೊಂದು ಕುಲುಮೆಯೂ ವಾರಕ್ಕೆ ಒಂದು ಮಣ ಕಬ್ಬಿಣ ಉತ್ಪಾದಿಸುತ್ತಿತ್ತೆಂದು ದಾಖಲೆಗಳು ತಿಳಿಸುತ್ತವೆ. ಕಲ್ಲುಪ್ಪು ಮತ್ತು ಸೋರುಪ್ಪು (ಪೊಟ್ಯಾಶಿಯಂ ನೈಟ್ರೇಟ್) ಕೂಡ ಉತ್ಪಾದನೆಯಾಗುತ್ತಿತ್ತು. ಹಾನಗಲ್‌ನಲ್ಲಿ ಸಕ್ಕರೆ, ಕಲ್ಲುಸಕ್ಕರೆ ತಯಾರಿಸುತ್ತಿದ್ದರು. ಈ ಎಲ್ಲ ಮಾಹಿತಿ 1884ರ ಗ್ಯಾಸೆಟಿಯರ್‌ನಲ್ಲಿ ಇದೆ. ಅದೇ ಗ್ಯಾಸಿಟಿಯರ್‌ನಲ್ಲಿ ಹೇಳಿರುವಂತೆ ಸೀಮೆಎಣ್ಣೆ ಅದೇ ಆಗ ಬಂದುದರಿಂದ ದೀಪ ಉರಿಸುವ ಎಣ್ಣೆಗೆ ಬೇಡಿಕೆ ಕಡಿಮೆಯಾಗಿ ಗಾಣನಡೆಸುವ ಅನೇಕರು ಉದ್ಯೋಗ ಕಳೆದುಕೊಂಡರು.

ಕಾಸಾರರು ಅಥವಾ ಕಂಚುಗಾರರು ಕಂಚಿನ ಪಾತ್ರೆಗಳು, ವಾದ್ಯಗಳು, ಗಂಟೆಗಳು, ಕಹಳೆಗಳು, ವಿವಿಧ ಮಾದರಿಯ ದೀಪಗಳು, ಕನ್ನಡಿಗಳು, ಅನೇಕ ದೇವತೆಗಳ ಪ್ರತಿಮೆಗಳು, ಬಳಕೆ ವಸ್ತುಗಳು ಮೊದಲಾದವುಗಳನ್ನು ತಯಾರಿಸುತ್ತಿದ್ದರು ಎಂದು ಅನೇಕ ಶಾಸನಗಳು ಉಲ್ಲೇಖಿಸಿವೆ. ಅವುಗಳಲ್ಲಿ ಒಂದಾದ 8ನೇ ಶತಮಾನದ ಲಕ್ಷ್ಮೇಶ್ವರದ ಶಾಸನ ಉಲ್ಲೇಖನಾರ್ಹ. ಜಿಲ್ಲೆಯ ಗದಗ ಮತ್ತು ಹುಬ್ಬಳ್ಳಿಗಳು ತಾಮ್ರ ಮತ್ತು ಹಿತ್ತಾಳೆ ಪಾತ್ರೆಗಳ ತಯಾರಿಕೆಗೆ ಹೆಸರುವಾಸಿಯಾಗಿವೆ. ಹುಬ್ಬಳ್ಳಿಯು ಈ ಉದ್ದಿಮೆಯಲ್ಲಿ ಕರ್ನಾಟಕದಲ್ಲೇ ಪ್ರಮುಖವಾದದ್ದು. ಹುಬ್ಬಳ್ಳಿ, ಬ್ಯಾಡಗಿ, ರಾಣೆಬೆನ್ನೂರು ಮೊದಲಾದ ಕಡೆಗಳಲ್ಲಿ ಊದುಬತ್ತಿ ತಯಾರಿಕೆಯು ಒಂದು ಗೃಹ ಉದ್ಯಮವಾಗಿ ಬೆಳೆಯುತ್ತಿದೆ. ಇದು ಆದಿಲ್ ಷಾಹಿಗಳ ಕೊಡುಗೆ. ಹುಬ್ಬಳ್ಳಿ, ಗದಗ, ರಾಣೆಬೆನ್ನೂರು, ಧಾರವಾಡ ಮತ್ತು ಹಾವೇರಿ, ಇವು ಜಿಲ್ಲೆಯ ಸುಣ್ಣ ಸುಡುವ ಕೇಂದ್ರಗಳಾಗಿವೆ.

ಜಿಲ್ಲೆಯಲ್ಲಿ ಬತ್ತವನ್ನು ಅಧಿಕ ಪ್ರಮಾಣದಲ್ಲಿ ಬೆಳೆಯುವುದರಿಂದ ಬತ್ತದ ಗಿರಣಿಗಳು ಮತ್ತು ಅವಲಕ್ಕಿ ಹಾಗೂ ಮಂಡಕ್ಕಿ ತಯಾರಿಕಾ ಉದ್ಯಮಗಳು ಜಿಲ್ಲೆಯಾದ್ಯಂತ ಹರಡಿವೆ. ಧಾರವಾಡ, ಹುಬ್ಬಳ್ಳಿ, ಕಲಘಟಗಿ, ರಾಣೆಬೆನ್ನೂರು, ಹಾವೇರಿ, ಹಿರೇಕೆರೂರು, ಬ್ಯಾಡಗಿ, ಹಾನಗಲ್ಲು ಮತ್ತು ಶಿಗ್ಗಾಂವಿಗಳಲ್ಲಿ ಈ ಉದ್ಯಮವು ಪ್ರಧಾನವಾಗಿ ಕಂಡು ಬರುತ್ತದೆ. ಮಿಶ್ರಿಕೋಟಿ ಮತ್ತು ಸಂಗಮೇಶ್ವರಗಳಲ್ಲಿ ಅವಲಕ್ಕಿ ತಯಾರಿಕೆ ಅಧಿಕ ಪ್ರಮಾಣದಲ್ಲಿ ನಡೆಯುತ್ತದೆ. ಹಿರೇಕೆರೂರು, ತಡಸ, ಅಳ್ನಾವರ, ಧಾರವಾಡಗಳಲ್ಲಿ ದೊಡ್ಡ ಪ್ರಮಾಣದ ಬತ್ತದ ಗಿರಣಿಗಳಿವೆ.

ಧಾರವಾಡದ ಚಪ್ಪಲಿಗಳು ಬಾಳಿಕೆಗೆ ಹೆಸರುವಾಸಿಯಾಗಿವೆ. ರಾಣೆಬೆನ್ನೂರಿನಲ್ಲಿ ಚರ್ಮ ಹದಮಾಡುವ ಬಗ್ಗೆ ತರಬೇತಿ ನೀಡುವ ಶಾಲೆ ಇದೆ. ಡಂಬಳ, ಮೆಣ್ಸೇರಿ, ನೆಗಳೂರು, ಗದಗ, ಗರಗ, ಹುಬ್ಬಳ್ಳಿ, ಕೊಣ್ಣೂರು, ಲಕ್ಕುಂಡಿ ಮತ್ತು ರಾಣೆಬೆನ್ನೂರುಗಳಲ್ಲಿ ಚರ್ಮ ಹದಮಾಡುವ ಕಸುಬುದಾರರಿದ್ದಾರೆ. ಗದಗ, ಹಾನಗಲ್ಲು, ಹಾವೇರಿ, ಹುಬ್ಬಳ್ಳಿ, ಕಲಘಟಗಿ, ನವಲಗುಂದ, ರಾಣೆಬೆನ್ನೂರುಗಳಲ್ಲಿ ಚರ್ಮದ ಕೆಲಸ ಮಾಡುವವರಿದ್ದಾರೆ.

ಮರ ಕುಯ್ಯುವ ಉದ್ದಿಮೆ ಧಾರವಾಡ, ಹುಬ್ಬಳ್ಳಿ, ಅಳ್ನಾವರ ಹಾಗೂ ಕಲಘಟಗಿಗಳಲ್ಲಿ ವಿಶೇಷವಾಗಿದೆ. ಅಳ್ನಾವರದಲ್ಲಿ ಬಿದಿರಿನ ವಸ್ತುಗಳನ್ನು ತಯಾರಿಸುತ್ತಾರೆ. ಜಿಲ್ಲೆಯಲ್ಲಿ ಕಲಘಟಗಿಯ ಮರದ ಬಣ್ಣದತೊಟ್ಟಿಲು, ನವಲುಗುಂದದ ಮರದ ತೊಟ್ಟಿಲು ಮತ್ತು ಆಟದ ಸಾಮಾನುಗಳು ಪ್ರಸಿದ್ಧವಾದವುಗಳು. ನವಲಗುಂದದಲ್ಲಿ ಬಣ್ಣದ ಆಕರ್ಷಕ ಜಮಖಾನೆ ನೇಯುತ್ತಾರೆ. ಗದಗದಲ್ಲಿ ಬಡಗಿಗಳ ಸಹಕಾರ ಸಂಸ್ಥೆ ಇದ್ದು ಅದು ಮೋಟಾರುಗಳ ಹೊರಭಾಗಗಳನ್ನು ತಯಾರಿಸುತ್ತದೆ. ಧಾರವಾಡದಲ್ಲಿ ಪದರ ಹಲಗೆ ತಯಾರಿಸುವ ಕಾರ್ಖಾನೆ ಇದೆ.

ಜಿಲ್ಲೆಯಲ್ಲಿ ಮಣ್ಣಿನ ಸಾಮಾನುಗಳ ತಯಾರಿಕೆ ಮತ್ತು ಮೆದುಕಲ್ಲಿನ ಪಾತ್ರೆಗಳ ತಯಾರಿಕೆಯನ್ನು ಕಾಣಬಹುದು. ಧಾರವಾಡ, ಲಕ್ಷ್ಮೇಶ್ವರ, ಶಿಗ್ಗಲಿ, ಕಲಘಟಗಿ, ಬೆಳಗಲಪೇಟೆ ಮತ್ತು ಮುಗದಗಳು ಮಣ್ಣಿನ ವಸ್ತುಗಳ ತಯಾರಿಕೆಗೂ, ಬೆಳಗತ್ತಿ (ಶಿರಹಟ್ಟಿ ತಾಲೂಕು) ಕಲ್ಲಿನ ಪಾತ್ರೆಗಳ ತಯಾರಿಕೆಗೂ ಹೆಸರುವಾಸಿಯಾಗಿವೆ.

ಜಿಲ್ಲೆಯ ಧಾರವಾಡ, ಹುಬ್ಬಳ್ಳಿ, ಗದಗ, ಲಕ್ಷ್ಮೇಶ್ವರ ಶಿರಹಟ್ಟಿ, ಹಾವೇರಿ, ಸವಣೂರು ಮತ್ತು ರಾಣೆಬೆನ್ನೂರುಗಳಲ್ಲಿ ಬೀಡಿ ಸುತ್ತುವ ಉದ್ಯಮವು ಪ್ರಮುಖ ಗೃಹ ಕೈಗಾರಿಕೆಯಾಗಿದೆ. ಸವಣೂರಿನಲ್ಲಿ ತಯಾರಿಸುವ ಸಿಂಧನೂರು ಬೀಡಿಗಳು ರಾಜ್ಯದಾದ್ಯಂತ ಪ್ರಸಿದ್ಧಿಯಾಗಿವೆ. ಶಿಗ್ಗಿಯ ಶಂಕರ ಬೀಡಿ, ಹರಿಪುರ ಚಿನ್ನಪ್ಪನ ಬೀಡಿಗಳು ಜಿಲ್ಲೆಯಲ್ಲಿ ಹೆಚ್ಚು ಮಾರಾಟಗೊಳ್ಳುತ್ತವೆ. ಗದಗದ ನರಸಿಂಗಸಾ ಛಾಪ ಸಿನ್ನರ ಬೀಡಿ, ಬಾಗಿರಾಯಲ್ ಬೀಡಿ, ಸಿಂಧೂರ ಬೀಡಿಗಳನ್ನು ತಯಾರಿಸುವ ಶಾಖೆಗಳನ್ನು ಶಿರಹಟ್ಟಿ ತಾಲೂಕಿನಲ್ಲಿ ಕಾಣಬಹುದಾಗಿದೆ. ರಾಣೆಬೆನ್ನೂರಲ್ಲಿ ಫೈಜ್ ಬೀಡಿ, ಧಾರವಾಡದಲ್ಲಿ ಎ. ರಹಮಾನ ಬೀಡಿ ಉತ್ಪಾದನೆಯಾಗುತ್ತವೆ.

ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಧಾರವಾಡ ಜಿಲ್ಲೆ ಅಗ್ರಗಣ್ಯ ಪಾತ್ರವಹಿಸಿತ್ತು. 1905-06ರಲ್ಲಿ ಕಾಣಿಸಿದ ಸ್ವದೇಶೀ ಚಳವಳಿಯ ಕಾಲಕ್ಕೆ ಆಲೂರು ವೆಂಕಟರಾಯರೂ, ಅವರ ಮಿತ್ರರೂ ಬೆಂಕಿಕಡ್ಡಿ, ಪೆನ್ಸಿಲ್, ಬಳಪ, ಮಂಗಳೂರು ಹಂಚು, ಸಕ್ಕರೆ, ಸ್ವದೇಶಿ ಬಳೆ ಮುಂತಾದವುಗಳನ್ನು ಉತ್ಪಾದಿಸಲು ಕಾರ್ಖಾನೆ ಅಥವಾ ಕರ್ಮಶಾಲೆಗಳನ್ನು ತೆರೆದಿದ್ದರು. ಈ ಪ್ರಯೋಗಗಳು ಯಶ ಕಾಣಲಿಲ್ಲ. ಆದರೆ ಇದರಿಂದ ಸ್ವದೇಶ ಉತ್ಪಾದನಾ ಚಳುವಳಿಗಳಿಗೆ ಬಲಬಂತು. ಮುಂದೆ ಖಾದಿ ಗ್ರಾಮೋದ್ಯೋಗಗಳು ಭದ್ರವಾಗಿ ನೆಲೆಗೊಂಡವು. ಉಪ್ಪಿನ ಬೆಟ್ಟಗೇರಿ, ಗರಗ, ಹೊಸರಿತ್ತಿ, ಬೆಂಗೇರಿ, ಹೆಬಸೂರು, ರೋಣ, ಮುಂತಾದ ಕೇಂದ್ರಗಳಲ್ಲಿ ಈ ಉದ್ದಿಮೆ ಇಂದಿಗೂ ನೂರಾರು ಜನರಿಗೆ ಉದ್ಯೋಗ ಕೊಡುತ್ತಿದೆ.

ಗದಗ, ಧಾರವಾಡ ಮತ್ತು ಹುಬ್ಬಳ್ಳಿಗಳಲ್ಲಿ ಮುದ್ರಣಾಲಯಗಳನ್ನು ವಿಶೇಷವಾಗಿ ಕಾಣಬಹುದು. ಹುಬ್ಬಳ್ಳಿಯಲ್ಲಿ ಸಂಯುಕ್ತ ಕರ್ನಾಟಕ ಹಾಗೂ ಪ್ರಜಾವಾಣಿ ದಿನ ಪತ್ರಿಕೆಗಳ ಮುದ್ರಣಾಲಯಗಳಿವೆ. ಸರಕಾರೀ ಮುದ್ರಣಾಲಯವೂ ಸಾಕಷ್ಟು ದೊಡ್ಡದು. ಇಲ್ಲಿ ದಕ್ಷಿಣ ಮರಾಠಾ ರೈಲ್ವೆ ಕಂಪನಿಯು 1888 ರಲ್ಲಿ ಸ್ಥಾಪಿಸಿದ ರೈಲ್ವೆ ಕಾರ್ಯಾಗಾರವಿದೆ. ಈಗ ಇದು ದಕ್ಷಿಣ ರೈಲ್ವೆಯ ಅಧೀನದಲ್ಲಿದೆ. ಇದು ಲೋಕೋಮೋಟಿವ್‌ಗಳು, ಉಗಿಬಂಡಿಗಳು, ವ್ಯಾಗನ್‌ಗಳು ಮೊದಲಾದವುಗಳನ್ನು ದುರಸ್ತಿಗೊಳಿಸುವುದರ ಜೊತೆಗೆ ಬೋಗಿಗಳನ್ನು ನಿರ್ಮಿಸುತ್ತದೆ. ಹುಬ್ಬಳ್ಳಿಯಲ್ಲಿ ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಾರ್ಖಾನೆ (1966) ಏಕೆ ಇಂಡಸ್ಟ್ರೀಸ್, ಏಕೆ ಕಾಸ್ಟಿಕ್ಸ್, ಸಿಮೆಂಟ್ ಉತ್ಪನ್ನಗಳ ಘಟಕಗಳಿವೆ. ಸದರ್ನ್ ಮರಾಠಾ ಸ್ಪಿನ್ನಿಂಗ್ ಮತ್ತು ವೀವಿಂಗ್ ಜವಳಿಗಿರಣಿ 1883 ರಲ್ಲಿ ಸ್ಥಾಪನೆಗೊಂಡು ಮುಂದೆ ಭಾರತ್ ಮಿಲ್, ಕೆಲಕಾಲ ಮಹಾದೇವ್ ಟೆಕ್ಸ್‌ಟೈಲ್ಸ್ ಎಂದು ಒಡೆತನದೊಂದಿಗೆ ಹೆಸರನ್ನು ಬದಲಾಯಿಸಿತು. ಈಗ ರಾಜ್ಯ ಸರ್ಕಾರದ ಒಡತನಕ್ಕೆ ಸೇರಿದ್ದು ಜಿಲ್ಲೆಯ ಬಟ್ಟೆ ಗಿರಣಿಗಳಲ್ಲಿ ಅತ್ಯಂತ ಹಳೆಯದಾಗಿದೆ. ರಸ್ತೆ ಸಾರಿಗೆಯ ವಿಭಾಗೀಯ ಕಾರ್ಯಾಗಾರವು ಇಲ್ಲಿನ ಬೃಹತ್ ಕೈಗಾರಿಕೆಗಳಲ್ಲೊಂದಾಗಿದೆ. ಎನ್.ಜಿ.ಇ.ಎಫ್.ನ ಒಂದು ಘಟಕ 1988 ರಲ್ಲಿ ಇಲ್ಲಿ ಸ್ಥಾಪನೆಗೊಂಡಿತು. ಇಲ್ಲಿನ ಬೈರದೇವರ ಕೊಪ್ಪದ ಬಳಿಯಲ್ಲಿ ಸ್ಥಾಪನೆಗೊಂಡಿರುವ ಶಸ್ತ್ರ ಚಿಕಿತ್ಸಾಗಾರದ ಘಟಕವು ವಿಶೇಷ ಉದ್ಯಮವಾಗಿದೆ. ಬೆಲ್ಲದ್ ಅಂಡ್ ಕಂಪನಿ, ಸ್ಕೋಡಾ ಬೇರಿಂಗ್ಸ್, ಎಲ್.ವಿ.ಟಿ.ಪ್ರಾಡಕ್ಟ್ಸ್ (ಬಿಸ್ಕತ್ ಕಾರ್ಖಾನೆ), ಅಸಿಟಲೀನ್ ಅನಿಲವನ್ನು ಉತ್ಪಾದಿಸುವ ಮಹಾಂತ್ ಇಂಜಿನಿಯರಿಂಗ ವರ್ಕ್ಸ್, ತ್ರಿಜ್ಯಾಕಾರ ಗೇಟುಗಳನ್ನು, ಚಕ್ರ ಬಾಗಿಲುಗಳನ್ನು ತಯಾರಿಸುವ ಅಟೆಕ್ ಇಂಜಿನಿಯರ್ಸ್, ವಿದ್ಯುತ್ ಸಾಗಣೆ ವಾಹಕಗಳು, ಬೋಲ್ಟ್‌ನೆಟ್ಟುಗಳನ್ನು ತಯಾರಿಸುವ ಜ್ಯೋತಿ ಇಂಜಿನಿಯರ್ ವರ್ಕ್ಸ್, ಬಣ್ಣ ತಯಾರಿಸುವ ಧಾರವಾಡ ಪಾಲಿಕೋಟ್ಸ್ ಕಂಪನಿ, ಎರಕದ ವಸ್ತುಗಳನ್ನು ತಯಾರಿಸುವ ನವಲೂರಿನ ಬಿ.ವಿ. ಕೆಮಿಕಲ್ಸ್, ಲಕ್ಕಮ್ಮನಹಳ್ಳಿಯ ಸ್ಟೆಯೋಗ್ ಪ್ಲಾಸ್ಟಿಕ್ಸ್ ಅಂಡ್ ಕೆಮಿಕಲ್ಸ್, ಸತ್ತೂರ್ ಎಸ್ಟೇಟಿನ ಪ್ರಿಸಿಷನ್ ಇಂಜಿನಿಯರಿಂಗ್ ಹಾಗೂ ಅಗ್ರಾಫನ್ ಫುಡ್ಸ್ ಕಾರ್ಖಾನೆ, ಧಾನ್ಯಗಳ ಹಿಟ್ಟು ತಯಾರಿಕಾ ಘಟಕಗಳು, ಶಕ್ತಿ ಸ್ಪನ್ ಪೈಪು ಕಾರ್ಖಾನೆ ಇವು ಹುಬ್ಬಳ್ಳಿಯ ಪ್ರಮುಖ ಕಾರ್ಖಾನೆಗಳು. ಧಾರವಾಡದಲ್ಲಿ ಟೈವಾಕ್ ಗಡಿಯಾರದ ಕಾರ್ಖಾನೆ ಹಾಗೂ ರಟ್ಟು ಮತ್ತು ಕ್ಯಾಲಿಕ್ಲಾತ್ ತಯಾರಿಕಾ ಕಾರ್ಖಾನೆಗಳು ಪ್ರಸಿದ್ಧವಾಗಿವೆ. ಧಾರವಾಡ ಪೇಢೆ ಖ್ಯಾತವಾದವು.

## ಹಳೆಯ ಕೈಗಾರಿಕೆಗಳು

ಧಾರವಾಡ ಜಿಲ್ಲೆಯಲ್ಲಿ ಕೈಗಾರಿಕಾ ಬೆಳವಣಿಗೆಯು ಇತ್ತೀಚಿನ ವರ್ಷಗಳಲ್ಲಿ ಪ್ರಾರಂಭವಾಗಿದ್ದರೂ ಕೆಲವು ಉದ್ಯಮಗಳು ಬ್ರಿಟಿಷರು ಭಾರತಕ್ಕೆ ಬರುವುದಕ್ಕೂ ಪೂರ್ವದಿಂದ ಪ್ರವರ್ಧಮಾನದಲ್ಲಿದುದನ್ನು ಕಾಣಬಹುದು.

ಬ್ರಿಟಿಷರು ಬಂದ ನಂತರವೂ ಬಟ್ಟೆ ಉದ್ಯಮ ಜಿಲ್ಲೆಯಲ್ಲಿ ಬಲವಾಗಿತ್ತು. 1860 ರ ದಶಕದಲ್ಲಿ ಅಮೇರಿಕದ ಯಾದವೀ ಯುದ್ಧದ ಕಾಲಕ್ಕೆ ಹತ್ತಿ ಬೆಳೆಯ ಉಬ್ಬರ (ಕಾಟನ್ ಬೂಂ) ಕಾಣಿಸಿಕೊಂಡು ಮಾಯವಾದರೂ ಹತ್ತಿ ಬೆಳೆಯು ಹೆಚ್ಚಿನ ಪ್ರಮಾಣದಲ್ಲಿ ಮುಂದುವರಿದು ಜಿನ್ನಿಂಗ್ ಮುಂತಾದ ಘಟಕಗಳ ಹೆಚ್ಚಳಕ್ಕೆ ದಾರಿಯಾಯಿತು. ಜಿಲ್ಲೆಯ ಹುಬ್ಬಳ್ಳಿ, ಗಜೇಂದ್ರಗಡ, ಗದಗ ಮತ್ತು ಬೆಟಗೇರಿಗಳು ಹತ್ತಿ ಬಟ್ಟೆ ತಯಾರಿಕಾ ಕೇಂದ್ರಗಳಾಗಿದ್ದವು. ಗದಗ ಮತ್ತು ಬೆಟಗೇರಿಗಳಲ್ಲಿ ಹುಬ್ಬಳ್ಳಿಗಿಂತಲೂ ಉತ್ತಮವಾದ ಸೀರೆಗಳನ್ನು ತಯಾರಿಸುತ್ತಿದ್ದರು. ಬಂಕಾಪುರ ಹತ್ತಿ ಮತ್ತು ಉಣ್ಣೆ ಬಟ್ಟೆ ತಯಾರಿಕಾ ಕೇಂದ್ರವಾಗಿತ್ತು. ರಾಣೆಬೆನ್ನೂರು ಹತ್ತಿ ಉತ್ಪಾದನೆ ಮತ್ತು ಉಣ್ಣೆ ಬಟ್ಟೆ ತಯಾರಿಕೆಗೆ ಹೆಸರುವಾಸಿಯಾಗಿತ್ತು. ನರಗುಂದದಲ್ಲಿ 400 ಮಗ್ಗಗಳಿದ್ದು ಅಧಿಕ ಪ್ರಮಾಣದ ನೇಯ್ಗೆಯವರು ರೇಷ್ಮೆ ಸೀರೆಗಳನ್ನು ತಯಾರಿಸುತ್ತಿದ್ದರು. ಬ್ರಿಟಿಷರ ಬಟ್ಟೆ ಗಿರಣಿಗಳ ಜೊತೆ ಪೈಪೋಟಿ ಮಾಡಲು ಸಾಧ್ಯವಾಗದ ಭಾರತದ ಅನೇಕ ಕೈಮಗ್ಗಗಳು ಮತ್ತು ಬಟ್ಟೆ ಗಿರಣಿಗಳು ಮುಚ್ಚಲ್ಪಟ್ಟರೂ ಸಹ ಜಿಲ್ಲೆಯ ಹುಬ್ಬಳ್ಳಿ, ಬಂಕಾಪುರ, ಧಾರವಾಡ, ಹಾನಗಲ್ಲು ಮತ್ತು ರಾಣೆಬೆನ್ನೂರುಗಳಲ್ಲಿ ಹತ್ತಿ ನೂಲಿನ ಮತ್ತು ನೇಯ್ಗೆಯ ಉದ್ಯಮವು ಕಡಿಮೆಯಾಗುವುದಕ್ಕೆ ಬದಲು ಹೆಚ್ಚಾದವು. 1843 ರಲ್ಲಿ ಹುಬ್ಬಳ್ಳಿಯಲ್ಲಿದ್ದ ಮಗ್ಗಗಳ ಸಂಖ್ಯೆ 2,262. ಅವುಗಳ ಸಂಖ್ಯೆ 1875 ರಲ್ಲಿ 4,982 ಇದ್ದು ಉತ್ತಮ ದರ್ಜೆಯ ಸೀರೆ, ಖಣ ಮೊದಲಾದವುಗಳ ನೇಯ್ಗೆ ಕಾರ್ಯದಲ್ಲಿ ತೊಡಗಿದ್ದವು. 1872ರ ಜನಗಣತಿಯಂತೆ ಜಿಲ್ಲೆಯಲ್ಲಿ 1.14 ಲಕ್ಷ ಜನ ಚರಕದಿಂದ ನೂಲುತ್ತಿದ್ದರು. ನೂಲಿನ ಆಮದಿನ ಪರಿಣಾಮದಿಂದಾಗಿ ಮತ್ತು 1898 ರಲ್ಲಿ ಸ್ಥಾಪನೆಗೊಂಡ ಗದಗ ಕಾಟನ್ ಅಂಡ್ ಸ್ಪಿನ್ನಿಂಗ್ ಮಿಲ್ಲಿನಿಂದಾಗಿ ಗದಗಿನಲ್ಲಿ ಕೈಮಗ್ಗಗಳು ಕುಸಿಯಲಾರಂಭಿಸಿದವು. ರಾಣೆಬೆನ್ನೂರಿನಲ್ಲೂ ಕೈಮಗ್ಗಗಳು ಕಡಿಮೆಯಾಗತೊಡಗಿದವು. ಇವುಗಳ ಜೊತೆಗೆ ಬಣ್ಣ ಹಾಕುವ ಉದ್ದಿಮೆಗಳು ಕುಸಿಯಲಾರಂಭಿಸಿದವು.

ಹುಬ್ಬಳ್ಳಿಯಲ್ಲಿ 1881 ರಲ್ಲಿ ಒಂದು ಜಿನ್ನಿಂಗ್, ಎರಡು ಪ್ರೆಸ್ಸಿಂಗ್ ಮಿಲ್ಲುಗಳಿದ್ದವು. 1907 ರ ಸುಮಾರಿಗೆ ಇದರ ಪುರಸಭಾ ವ್ಯಾಪ್ತಿಯಲ್ಲಿ 19 ಕಾರ್ಖಾನೆಗಳಿದ್ದವು. ಇವುಗಳ ಗುಂಪಿಗೆ ಒಂದು ರೈಲ್ವೆ ಕಾರ್ಯಾಗಾರ, ಸದರನ್ ಮರಾಠಾ ಸ್ಪಿನ್ನಿಂಗ್ ಮತ್ತು ವೀವಿಂಗ್ ಕಂಪನಿ ಮತ್ತು ಒಂದು ಬೋನ್ ಮಿಲ್ ಘಟಕ ಸೇರಿವೆ. ಇಲ್ಲಿ ಹೆಸರಿಸಬಹುದಾದ ಮತ್ತೊಂದು ಉದ್ಯಮವು ಕಂಚು ಮತ್ತು ತಾಮ್ರದ ಪಾತ್ರೆಗಳನ್ನು ತಯಾರಿಸುವುದಾಗಿದೆ.

ಪ್ರಥಮ ವಿಶ್ವ ಯುದ್ಧದ ಕಾಲದಲ್ಲಿ (1914-18) ಹತ್ತಿ ಬೆಲೆಯು ಹೆಚ್ಚಿದುದರ ಪರಿಣಾಮವಾಗಿ ಜಿಲ್ಲೆಯ ಹತ್ತಿ ಉದ್ಯಮ ಕೇಂದ್ರಗಳಾದ ಗದಗ, ಹುಬ್ಬಳ್ಳಿಗಳು, ವ್ಯಾಪಾರ ಕೇಂದ್ರಗಳಾದ ನರಗುಂದ, ಹಾವೇರಿ, ರಾಣೆಬೆನ್ನೂರು ಮತ್ತು ಧಾರವಾಡಗಳು ಅಧಿಕ ಲಾಭ ಪಡೆದವು. 1921-22 ರಲ್ಲಿ ನವಲಗುಂದದ ಜಮಖಾನೆ ಉದ್ಯಮ ಕುಸಿಯಲಾರಂಭಿಸಿತು. ಆದರೆ ಇದೇ ಕಾಲಾವಧಿಯಲ್ಲಿ ಸ್ಥಾಪನೆಗೊಂಡ ಸಹಕಾರ ಸಂಘ ಇದರ ಕುಸಿತವನ್ನು ತಡೆಗಟ್ಟಿತು. ಯುದ್ಧ ಕಾಲಾವಧಿಯಲ್ಲಿ ಧಾರವಾಡ ಮತ್ತು ಬೆಳಗಾವಿಯಲ್ಲಿದ್ದ ಎರಡು ಬೆಂಕಿಕಡ್ಡಿ ಕಾರ್ಖಾನೆಗಳು ಮುಚ್ಚಲ್ಪಟ್ಟವು. (ಇವು ಸ್ವದೇಶ ಚಳುವಳಿಯ ಹಿನ್ನಲೆಯಲ್ಲಿ (1905-06) ಆರಂಭವಾಗಿದ್ದವು). ಇದಕ್ಕೆ ಬಹು ಮಟ್ಟಿನ ಕಾರಣ ಮೃದುಮರದ ಕೊರತೆ ಮತ್ತು ಸ್ಥಳೀಯ ಬಂಡವಾಳಗಾರರ ಸಹಕಾರದ ಅಭಾವ. ಇದೇ ಕಾಲಾವಧಿಯಲ್ಲಿ ಒಂದು ಬೆಂಕಿಕಡ್ಡಿ ಕಾರ್ಖಾನೆಯು ಧಾರವಾಡದಲ್ಲಿ ಬೆಂಕಿಕಡ್ಡಿ ಉತ್ಪಾದನಾ ಕಾರ್ಯವನ್ನು ಮುಂದುವರಿಸಿತ್ತು. ಜಿಲ್ಲೆಯಲ್ಲಿ ಚರ್ಮ ಹದಮಾಡುವುದು ಮತ್ತು ಚರ್ಮೋದ್ಯಮವು ಮತ್ತೊಂದು ಪ್ರಮುಖ ಉದ್ಯಮವಾಗಿತ್ತು.

ಹುಬ್ಬಳ್ಳಿಯಲ್ಲಿ ಹೆಸರಿಸಬಹುದಾದ ಮುಖ್ಯ ಕೈಗಾರಿಕೆಗಳ ಸಾಲಿಗೆ ಸಿದ್ದೇಶ್ವರ ಮತ್ತು ಕಂಪನಿ ಸೇರುತ್ತದೆ. ಇದನ್ನು ಸಿದ್ದಪ್ಪ ಚನ್ನಪ್ಪ ಮತ್ತು ನೀಲಕಂಠಪ್ಪ ಎಂಬ ಮೂರು ಕಮ್ಮಾರ ಸಹೋದರರು ಸಾಂಪ್ರದಾಯಿಕ ಯಂತ್ರದೊಂದಿಗೆ ಸ್ಥಾಪಿಸಿ ಮಾರುಕಟ್ಟೆಯ ಪೈಪೋಟಿಯನ್ನು ಎದುರಿಸಿ ಸುಭದ್ರ ಕಾರ್ಖಾನೆಯಾಗಿಸಿದರು. ಈ ಕಾರ್ಖಾನೆಯಿಂದ 1918 ರಲ್ಲಿ ಮೊಟ್ಟ ಮೊದಲ ತಿಜೋರಿ ತಯಾರಿಸಲ್ಪಟ್ಟಿತು. ಇದು ಅತ್ಯಂತ ಸುಂದರ ಮತ್ತು ಸುಭದ್ರವಾಗಿತ್ತು. ಇದರಿಂದ ಪ್ರೇರಿತರಾದ ಈ ಸಹೋದರರು ಕಾರ್ಖಾನೆಗೆ ರೋಲರ್ ಯಂತ್ರವನ್ನು ಅಳವಡಿಸಿ ಆಧುನೀಕರಿಸಿದರು. 1957 ರ ಹೊತ್ತಿಗೆ ಈ ಕಾರ್ಖಾನೆಯು 1 1/2 ಲಕ್ಷ ವೆಚ್ಚದಲ್ಲಿ ಸ್ವಂತ ಬಿಲ್ಡಿಂಗ್‌ನ್ನು ಹೊಂದಿದುದೇ ಅಲ್ಲದೆ ವಿದ್ಯುಚ್ಛಕ್ತಿ ಸಹಾಯದಿಂದ ಯಂತ್ರಚಾಲನಾ ಕಾರ್ಯ ನಿರ್ವಹಿಸುತ್ತಿತ್ತು. ಇದೇ ಕಾಲವಧಿಯಲ್ಲಿ ಈ ಕಂಪನಿಯು 6 ಲಕ್ಷ ರೂಗಳ ಉತ್ಪಾದನಾ ಬಂಡವಾಳವನ್ನು ಹೊಂದಿತ್ತು. ಕಂಪನಿಯು ತಿಜೋರಿಗಳ ತಯಾರಿಕೆಯ ಜೊತೆಗೆ ಸುರಕ್ಷಿತ ಕೊಠಡಿಗಳು, ಕುರ್ಚಿಗಳು, ಮೇಜುಗಳು, ಅಲ್ಮೆರಗಳು, ರ‍್ಯಾಕುಗಳು ಮೊದಲಾದವುಗಳನ್ನೂ ತಯಾರಿಸಿ ಮಾರಾಟ ಮಾಡುತ್ತಿತ್ತು. ಇದೇ ಕಾಲಾವಧಿಯೊಳಗೆ ಈ ಕಾರ್ಖಾನೆಯು ವಾರ್ಷಿಕ 400 ತಿಜೋರಿಗಳಂತೆ ಒಟ್ಟು 3200 ತಿಜೋರಿಗಳನ್ನು ಉತ್ಪಾದಿಸಿತ್ತು. ಇದರಲ್ಲಿ 250 ಕಾರ್ಮಿಕರು ಕಾರ್ಯನಿರತರಾಗಿದ್ದರು.

ಜಿಲ್ಲೆಯಲ್ಲಿ 1921 ರಲ್ಲಿ ಮೂರು ಹತ್ತಿ ನೂಲಿನ ಮತ್ತು ನೇಯ್ಗೆ ಗಿರಣಿಗಳಿದ್ದು ಪ್ರತಿನಿತ್ಯ 2,037 ಮಂದಿ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಇವುಗಳ ಜೊತೆಗೆ 78ಹತ್ತಿ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗಳೂ ಸಹ ಕಾರ್ಯನಿರ್ವಹಿಸುತ್ತಿದ್ದವು. 1938 ರಲ್ಲಿ ಗದಗಿನಲ್ಲಿ 100 ಕೈಮಗ್ಗದ ಘಟಕಗಳಿದ್ದು 2,000 ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಇವುಗಳ ಜೊತೆಗೆ ಇಲ್ಲಿ 1,000 ಸ್ವತಂತ್ರ ಕುಶಲ ಕಾರ್ಮಿಕರಿದ್ದರು. ಇದೇ ಕಾಲಾವಧಿಯಲ್ಲಿ ಹುಬ್ಬಳ್ಳಿಯಲ್ಲಿ 50 ಕೈಮಗ್ಗದ ಘಟಕಗಳಿದ್ದವು. ಇಲ್ಲಿಯೂ ಸಹ 1000 ಸ್ವತಂತ್ರ ಕುಶಲ ಕಾರ್ಮಿಕರಿದ್ದರು.

1948 ರ ಕಾರ್ಖಾನೆಗಳ ಕಾಯ್ದೆಗೆ ಅನುಗುಣವಾಗಿ 1952 ರ ಸುಮಾರಿಗೆ ಜಿಲ್ಲೆಯಲ್ಲಿ 114 ಹತ್ತಿ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗಳು ನೋಂದಣಿಗೊಂಡಿದ್ದವು. ಇವುಗಳ ಪೈಕಿ 44 ಕಾರ್ಖಾನೆಗಳು ಹುಬ್ಬಳ್ಳಿ ಮತ್ತು ಗದಗ ಪಟ್ಟಣಗಳಲ್ಲಿ ಕೇಂದ್ರೀಕೃತ ಗೊಂಡಿದ್ದವು. ಇವು 'ಸೀಸನಲ್' ಕಾರ್ಖಾನೆಗಳಾಗಿದ್ದು ಪ್ರತೀ ವರ್ಷದ ಮಾರ್ಚ್ ಮಾಹೆಯಿಂದ ಆಗಸ್ಟ್ ಮಾಹೆಯವರೆಗೆ ಕಾರ್ಯತತ್ಪರರಾಗಿರುತ್ತಿದ್ದವು. ಉಳಿದ ಕಾಲಾವಧಿಯಲ್ಲಿ ಇವುಗಳ ಪೈಕಿ ಕೆಲವು ಕಾರ್ಖಾನೆಗಳು ಕಡಲೆಕಾಯಿ (ಶೇಂಗಾ)ಸಿಪ್ಪೆ ತೆಗೆಯುವ ಮತ್ತು ಎಣ್ಣೆ ತೆಗೆಯುವ ಕಾರ್ಯದಲ್ಲಿ ತೊಡಗಿಸಲ್ಪಡುತ್ತಿದ್ದವು. ಧಾರವಾಡ ಮತ್ತು ಹುಬ್ಬಳ್ಳಿ ತಾಲೂಕುಗಳು ಹತ್ತಿ ಉತ್ಪಾದನೆಗೆ ಹೆಸರುವಾಸಿಯಾಗಿದ್ದವು. ಈ ಭಾಗದಲ್ಲಿ ಕೈಮಗ್ಗಗಳು ಮತ್ತು ಅವುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರ ಸಂಖ್ಯೆ ಅಧಿಕ ಪ್ರಮಾಣದಲ್ಲಿತ್ತು. 1948 ರ ಕಾರ್ಖಾನೆಗಳ ಕಾಯ್ದೆಯನ್ವಯ ಇಲ್ಲಿ ಏಳು ಕಾರ್ಖಾನೆಗಳು ನೋಂದಣಿಗೊಂಡವು. ಇವುಗಳ ಪೈಕಿ ಮೂರು ಕಾರ್ಖಾನೆಗಳು ಬೃಹತ್ ಪ್ರಮಾಣದ ಸಂಯುಕ್ತ ಗಿರಣಿಗಳಾಗಿದ್ದು ನೂಲು ತೆಗೆಯುವ ಮತ್ತು ಬಟ್ಟೆ ನೇಯುವ ಕಾರ್ಯದಲ್ಲಿ

ತೊಡಗಿದ್ದವು. ಉಳಿದ ನಾಲ್ಕು ಗಿರಣಿಗಳು ವಿದ್ಯುತ್ ಗಿರಣಿಗಳಾಗಿದ್ದು ನೇಯ್ಗೆ ಕಾರ್ಯದಲ್ಲಿ ಮಾತ್ರ ತೊಡಗಿದ್ದವು. ಸಂಯುಕ್ತ ಗಿರಣಿಗಳ ಪೈಕಿ ಎರಡು ಗಿರಣಿಗಳು ಹುಬ್ಬಳ್ಳಿಯಲ್ಲೂ ಮತ್ತೊಂದು ಗಿರಣಿಯು ಗದಗಿನಲ್ಲೂ ಕಾರ್ಯ ನಿರ್ವಹಿಸುತ್ತಿದ್ದವು. ವಿದ್ಯುತ್ ಗಿರಣಿಗಳು ಹುಬ್ಬಳ್ಳಿ, ಗದಗ, ಬ್ಯಾಡಗಿ ಮತ್ತು ಕರ್ಜಗಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವು. 1951 ರಲ್ಲಿ ಕಾರ್ಯನಿರ್ವಹಿಸುತ್ತಿದ್ದ ಜಿಲ್ಲೆಯ ಏಳು ಗಿರಣಿಗಳಲ್ಲಿ ಕಾರ್ಯನಿರತರಾಗಿದ್ದ ಕಾರ್ಮಿಕರ ಸಂಖ್ಯೆ 2,428. ವಿದ್ಯುತ್ ಗಿರಣಿಗಳಲ್ಲಿ ಕಾರ್ಯ ನಿರತರಾಗಿದ್ದವರ ಸಂಖ್ಯೆ 108.

ಜಿಲ್ಲೆಯಲ್ಲಿ 1951 ರಲ್ಲಿ 14 ಸಾಮಾನ್ಯ ಇಂಜಿನಿಯರಿಂಗ್ ಉದ್ದಿಮೆಗಳಿದ್ದವು. ಇವುಗಳ ಪೈಕಿ 13 ಉದ್ದಿಮೆಗಳಲ್ಲಿ ಪ್ರತಿನಿತ್ಯ 471 ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದರು. ಜಿಲ್ಲೆಯ 14 ಇಂಜಿನಿಯರಿಂಗ್ ಉದ್ದಿಮೆಗಳ ಪೈಕಿ ಎಂಟು ಉದ್ದಿಮೆಗಳು ಹುಬ್ಬಳ್ಳಿಯಲ್ಲೂ, ಉಳಿದವುಗಳು ಗದಗಿನಲ್ಲೂ ಇದ್ದು ಕಬ್ಬಿಣ ಮತ್ತು ಉಕ್ಕಿನ ಸಾಮಾನುಗಳನ್ನು ಉತ್ಪಾದಿಸುವುದರ ಜೊತೆಗೆ ರಿಪೇರಿ ಕಾರ್ಯವನ್ನು ಮಾಡುತ್ತಿದ್ದವು. ಹುಬ್ಬಳ್ಳಿಯಲ್ಲಿ ಒಂದು ರಾಸಾಯನಿಕ ಕಾರ್ಖಾನೆ ಹಾಗೂ ಒಂದು ಸಿದ್ಧ ಉಡುಪನ್ನು ತಯಾರಿಸುವ ಉದ್ಯಮ ಕಾರ್ಯನಿರ್ವಹಿಸುತ್ತಿದ್ದವು. ಧಾರವಾಡದಲ್ಲಿ ನಯಹಲಗೆ ಮತ್ತು ಟೀ ಪೆಟ್ಟಿಗೆಗಳನ್ನು ತಯಾರಿಸುವ ಕಾರ್ಖಾನೆಯಿತ್ತು. 1949 ರಲ್ಲಿ ಮುದ್ರಣ ಮತ್ತು ಪುಸ್ತಕಗಳಿಗೆ ಕವಚವನ್ನು ತಯಾರಿಸುವ 9 ಮುದ್ರಣಾಲಯಗಳಿದ್ದು ಪ್ರತಿನಿತ್ಯ 176 ಮಂದಿ ಕೆಲಸಗಾರರಿಗೆ ಉದ್ಯೋಗವನ್ನೊದಗಿಸಿದ್ದವು. 1951 ರಲ್ಲಿ ಜಿಲ್ಲೆಯ ಅಳ್ನಾವರ, ಆಲೂರು, ಹಾನಗಲ್ಲು ಮತ್ತು ಕಲಘಟಗಿಗಳಲ್ಲಿ ನಾಲ್ಕು ಬತ್ತದ ಗಿರಣಿಗಳಿದ್ದವು. ಇವುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರ ಸಂಖ್ಯೆ 26. ಇದೇ ಕಾಲಾವಧಿಯಲ್ಲಿ ಎರಡು ಮರಸೀಳುವ ಗಿರಣಿಗಳು ಹುಬ್ಬಳ್ಳಿ ಮತ್ತು ಅಳ್ನಾವರಗಳಲ್ಲಿದ್ದು ಪ್ರತಿನಿತ್ಯ 57 ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಹೊಳೆ ಆಲೂರಿನಲ್ಲಿ ಸ್ಥಾಪನೆಗೊಂಡಿದ್ದ ರೇಷ್ಮೆ ನೂಲು ತೆಗೆಯುವ ಕಾರ್ಖಾನೆಯು ಪ್ರತಿನಿತ್ಯ 25 ಕಾರ್ಮಿಕರಿಗೆ ಉದ್ಯೋಗವನ್ನೊದಗಿಸುತ್ತಿತ್ತು. ಜಿಲ್ಲೆಯಲ್ಲಿ 16 ಎಣ್ಣೆ ಗಿರಣಿಗಳಿದ್ದು ಪ್ರತಿನಿತ್ಯ 374 ಮಂದಿಗೆ ಉದ್ಯೋಗ ದೊರಕಿಸಿಕೊಟ್ಟಿದ್ದವು. ಈ 16 ಗಿರಣಿಗಳ ಪೈಕಿ 11 ಗಿರಣಿಗಳು ಗಜೇಂದ್ರಗಡ, ಗದಗ ಮತ್ತು ಹುಬ್ಬಳ್ಳಿಗಳಲ್ಲಿ ಕೇಂದ್ರೀಕೃತಗೊಂಡಿದ್ದವು.

ಜಿಲ್ಲೆಯ ಸಣ್ಣ ಕೈಗಾರಿಕೆಗಳ ಸಾಲಿನಲ್ಲಿ ಬಿದಿರಿನ ಉದ್ಯಮವು ಪ್ರಮುಖವಾದದ್ದು. ಧಾರವಾಡ, ಅಳ್ನಾವರ, ರಾಣೆಬೆನ್ನೂರು, ಕಲಘಟಗಿ ಮತ್ತು ಗದಗ ಈ ಉದ್ದಿಮೆಯ ಪ್ರಮುಖ ಕೇಂದ್ರಗಳಾಗಿದ್ದು ವಿವಿಧ ಬಗೆಯ ಚಾಪೆಗಳು, ಪೀಠೋಪಕರಣಗಳು ಮೊದಲಾದವುಗಳು ತಯಾರಿಸಲ್ಪಡುತ್ತಿದ್ದವು. 1951 ರಲ್ಲಿ ಜಿಲ್ಲೆಯಲ್ಲಿ 1900 ಬೀಡಿ ತಯಾರಿಕಾ ಘಟಕಗಳಿದ್ದು 5,800 ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಇದೇ ಕಾಲಾವಧಿಯಲ್ಲಿ ಕಮ್ಮಾರಿಕೆಯಲ್ಲಿ 1799 ಮಂದಿ ಕಾರ್ಮಿಕರು ವ್ಯವಸಾಯೋಪಕರಣಗಳ ತಯಾರಿಕೆ ಮತ್ತು ರಿಪೇರಿ ಕೆಲಸಗಳಲ್ಲಿ ತೊಡಗಿದ್ದರು. ಬಡಗಿ ವೃತ್ತಿಯಲ್ಲಿ 6,100 ಮಂದಿ ಹಾಗೂ ಇಟ್ಟಿಗೆ ಮತ್ತು ಹಂಚಿನ ಉದ್ದಿಮೆಯಲ್ಲಿ 162 ಮಂದಿಯೂ ಕಾರ್ಯನಿರ್ವಹಿಸುತ್ತಿದ್ದರು. 1946 ರಲ್ಲಿ ತಾತ್ಕಾಲಿಕ ಜವಳಿ ನಿಯಂತ್ರಕರು (ಪ್ರೊವಿಜನಲ್ ಟೆಕ್ಸ್‌ಟೈಲ್ಸ್ ಕಂಟ್ರೋಲರ್) ಕೈಗೊಂಡ ಕೈಮಗ್ಗಗಳ ಗಣತಿಯಂತೆ ಜಿಲ್ಲೆಯಲ್ಲಿ 12,965 ಕೈಮಗ್ಗಗಳು 5,220 ಘಟಕಗಳ ವಶದಲ್ಲಿದ್ದವು. ಜಿಲ್ಲೆಯಲ್ಲಿ ಸಹಕಾರಿ ಆಂದೋಲನವು ಕೈಮಗ್ಗದ ಉದ್ಯಮಗಳನ್ನು ಪ್ರಗತಿ ಪಥದಲ್ಲಿ ಸಾಗಿಸಿದೆ. 1952 ರಲ್ಲಿ ಜಿಲ್ಲೆಯಲ್ಲಿ 34 ಹತ್ತಿ ಕೈಮಗ್ಗ ನೇಯ್ಗೆ ಸಹಕಾರ ಸಂಘಗಳಿದ್ದವು. ಅವುಗಳಲ್ಲಿ ತೊಡಗಿಸಿದ್ದ ಷೇರು ಬಂಡವಾಳ ಮತ್ತು ಪುದುವಟ್ಟುಗಳು (ರಿಸರ್ವ್ ಫಂಡ್) ಅನುಕ್ರಮವಾಗಿ ರೂ.1,24,341 ಮತ್ತು ರೂ.1,95,840 . ಬಹುಸಂಖ್ಯಾತ ಸಹಕಾರ ಸಂಘಗಳು ತಮ್ಮ ಸದಸ್ಯರಿಗೆ ಹತ್ತಿ ನೂಲನ್ನು ಹಂಚಿಕೆ ಮಾಡುತ್ತಿದ್ದರೆ ಮತ್ತೆ ಕೆಲವು ಸಹಕಾರ ಸಂಘಗಳು ತಮ್ಮ ಸದಸ್ಯರು ಉತ್ಪಾದಿಸುವ ಸರಕುಗಳನ್ನು ಮಾರಾಟ ಮಾಡುವ ಕಾರ್ಯದಲ್ಲಿ ತೊಡಗಿದ್ದವು. 1950 ರಲ್ಲಿ ಜಿಲ್ಲೆಯ ಹೊಸರಿತ್ತಿ ಮತ್ತು ಶಿರೋಳಗಳಲ್ಲಿ ಸರ್ಕಾರಿ ನೇಯ್ಗೆ ಶಾಲೆಗಳು, ಹೆಬಸೂರಿನಲ್ಲಿ ಸರ್ಕಾರಿ ಹತ್ತಿ ನೇಯ್ಗೆ ಪ್ರದರ್ಶನ ತಂಡ ಮತ್ತು ಗದಗ ಬೆಟಗೇರಿಯಲ್ಲಿ ಬಣ್ಣ ಹಾಕುವ ಮತ್ತು ಛಾಪಹಾಕುವ (ಪ್ರಿಂಟಿಂಗ್) ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದವು.

ಧಾರವಾಡ ಜಿಲ್ಲೆಯು ಕೈಮಗ್ಗದ ಉತ್ಪಾದನೆಯಲ್ಲಿ ರಾಜ್ಯದಲ್ಲಿಯೇ ಪ್ರಥಮ ಸ್ಥಾನದಲ್ಲಿತ್ತು. 1951 ರ ಸಣ್ಣ ಕೈಗಾರಿಕೆಗಳ ಗಣತಿಯಂತೆ ಜಿಲ್ಲೆಯಲ್ಲಿ 5,042 ಕೈ ಮಗ್ಗದ ಘಟಕಗಳಿದ್ದು 17,794 ಮಂದಿಗೆ ಉದ್ಯೋಗವನ್ನೊದಗಿಸಿದ್ದವು. ಜಿಲ್ಲೆಯ ಒಟ್ಟು 5,042 ಕೈಮಗ್ಗದ ಘಟಕಗಳ ಪೈಕಿ 2,008 ಘಟಕಗಳು ಗ್ರಾಮಾಂತರ ಪ್ರದೇಶದಲ್ಲೂ 3,034 ಘಟಕಗಳು ನಗರ ಪ್ರದೇಶಗಳಲ್ಲೂ ಇದ್ದವು. ಜಿಲ್ಲೆಯಲ್ಲಿದ್ದ 17,794 ಮಂದಿ ಉದ್ಯೋಗಿಗಳ ಪೈಕಿ 4,077 ಗಂಡಸರು, 2,366 ಮಹಿಳೆಯರು ಮತ್ತು 149 ಮಂದಿ

ಮಕ್ಕಳು ಗ್ರಾಮಾಂತರ ಪ್ರದೇಶದಲ್ಲೂ; 7,756 ಮಂದಿ ಪುರುಷರು, 3,061 ಮಹಿಳೆಯರು ಮತ್ತು 365 ಮಕ್ಕಳು ನಗರ ಪ್ರದೇಶಗಳ ಉದ್ಯಮದಲ್ಲೂ ಇದ್ದರು. ಅಗಡಿ, ಧಾರವಾಡ, ಗದಗ, ಬೆಟಗೇರಿ, ಗಜೇಂದ್ರಗಡ, ಹಲಗೇರಿ, ಹೆಬ್ಬೂರು, ಹುಬ್ಬಳ್ಳಿ, ನರಗುಂದ, ನವಲಗುಂದ, ರಾಣೆಬೆನ್ನೂರು, ಶಿರೋಳ, ಶಿಗ್ಗಿ ಮತ್ತು ತುಮ್ಮಿನ ಕಟ್ಟಿ ಇವು ಜಿಲ್ಲೆಯ ಕೈಮಗ್ಗದ ಬಟ್ಟೆ ತಯಾರಿಕೆಯ ಪ್ರಮುಖ ಕೇಂದ್ರಗಳು.

ಇದಲ್ಲದೆ ಖಾದಿ ಕ್ಷೇತ್ರದಲ್ಲಿ ಜಿಲ್ಲೆಯ ರೋಣ ತಾಲೂಕಿನ ಆಸೂಟಿ ಮತ್ತು ರೋಣಗಳಲ್ಲಿ, ನವಲಗುಂದ ತಾಲೂಕಿನ ನವಲಗುಂದ, ಗೊಬ್ಬರ ಗುಂಪಿ ಮತ್ತು ಮೊರಬಗಳಲ್ಲಿ, ನರಗುಂದ ತಾಲೂಕಿನ ನರಗುಂದದಲ್ಲಿ, ಧಾರವಾಡ ತಾಲೂಕಿನ ಉಪ್ಪಿನ ಬೆಟಗೇರಿಯಲ್ಲಿ, ಹುಬ್ಬಳ್ಳಿ ತಾಲೂಕಿನ ಬ್ಯಾಹಟ್ಟಿಯಲ್ಲಿ ಮತ್ತು ಹಾವೇರಿ ತಾಲೂಕಿನ ಮೋಟೆಬೆನ್ನೂರಿನಲ್ಲಿ ಕೈಯಿಂದ ನೂಲು ತೆಗೆಯುವವರಿದ್ದರು. 1951 ರಲ್ಲಿ ಇವರ ಸಂಖ್ಯೆ 5000 ಕ್ಕೂ ಹೆಚ್ಚು ಇತ್ತು. ಇವರು ಉತ್ಪಾದಿಸುತ್ತಿದ್ದ ನೂಲು ಸುಮಾರು 190 ಮಗ್ಗಗಳಿಗೆ ಸಾಕಾಗವಷ್ಟಿದ್ದು ಪ್ರತಿವರ್ಷವೂ 20,000 ಗಜಗಳಷ್ಟು ಖಾದಿ ಬಟ್ಟೆ ತಯಾರಿಕೆಗೆ ಪೂರಕವಾಗಿತ್ತು.

ಉಣ್ಣೆ ಕಂಬಳಿಯ ಉತ್ಪಾದನೆಯಲ್ಲಿ ಧಾರವಾಡ ಜಿಲ್ಲೆಯು ಹೆಸರುವಾಸಿಯಾಗಿದೆ. ಮೆಣ್ಸೇರಿಯ ಕಂಬಳಿಗಳು ದಕ್ಷಿಣ ಇಂಡಿಯಾದಲ್ಲೇ ಪ್ರಸಿದ್ಧಿ ಪಡೆದವುಗಳಾಗಿದ್ದವು. 1951 ರ ಸಣ್ಣ ಕೈಗಾರಿಕೆಗಳ ಗಣತಿಯ ಪ್ರಕಾರ ಜಿಲ್ಲೆಯಲ್ಲಿ 403 ಉಣ್ಣೆ ಘಟಕಗಳಿದ್ದು, 1,011 ಮಂದಿಗೆ ಉದ್ಯೋಗವನ್ನೊದಗಿಸಿದ್ದವು. ಕೈಗಾರಿಕಾ ಮತ್ತು ಆರ್ಥಿಕ ಸಮೀಕ್ಷಾ ಸಮಿತಿಯ (1938-40) ವರದಿಯ ಪ್ರಕಾರ ಮೆಣ್ಸೇರಿಯಲ್ಲಿ 150 ಮಗ್ಗಗಳಿದ್ದವು ಮತ್ತು ಇದು ಕಂಬಳಿ ತಯಾರಿಕೆಯ ದೊಡ್ಡಕೇಂದ್ರವೆನಿಸಿಕೊಂಡಿತ್ತು. ಐರಣಿ, ಡಂಬಳ, ಗುತ್ತಲ, ಕೊಣ್ಣೂರು, ಕೊಟಬಾಗಿ, ಲಕ್ಕುಂಡಿ, ಮೋಟೆಬೆನ್ನೂರು, ನಾಗಲೂರು ಮತ್ತು ರಾಣೆಬೆನ್ನೂರು ಇವು ಜಿಲ್ಲೆಯ ಇತರ ಕೇಂದ್ರಗಳು. ಜಿಲ್ಲೆಯಿಂದ ಪ್ರತೀವರ್ಷ ಸುಮಾರು 100 ವ್ಯಾಗನ್‌ಗಳಷ್ಟು ಉಣ್ಣೆಯು ಬೊಂಬಾಯಿ, ಮಂಗಳೂರು ಮತ್ತು ಮದರಾಸುಗಳಿಗೆ ರವಾನೆಯಾಗುತ್ತಿತ್ತು.

ಹಿತ್ತಾಳೆ ಮತ್ತು ತಾಮ್ರದ ಪಾತ್ರೆಗಳ ತಯಾರಿಕೆಯಲ್ಲಿ ಹುಬ್ಬಳ್ಳಿಯು ಕರ್ನಾಟಕದಲ್ಲೇ ಹೆಸರುವಾಸಿಯಾದ ಕೇಂದ್ರವೆನಿಸಿದೆ. ಗದಗವು ಜಿಲ್ಲೆಯ ಮತ್ತೊಂದು ಕೇಂದ್ರ. ಹುಬ್ಬಳ್ಳಿಯಲ್ಲಿ 1951 ರಲ್ಲಿ ತಾಮ್ರ ಮತ್ತು ಹಿತ್ತಾಳೆ ಪಾತ್ರೆಗಳನ್ನು ತಯಾರಿಸುವ ಉದ್ದಿಮೆಗಳಿದ್ದು 1,500 ಕುಶಲಕರ್ಮಿಗಳಿಗೆ ಉದ್ಯೋಗವನ್ನೊದಗಿಸಿದ್ದವು. ಇದಲ್ಲದೆ ಹುಬ್ಬಳ್ಳಿಯಲ್ಲಿ ಕಬ್ಬಿಣದ ತಿಜೋರಿ ಹಾಗೂ ಕುರ್ಚಿ ಮುಂತಾದವುಗಳನ್ನು ತಯಾರಿಸುವ ಸಿದ್ದೇಶ್ವರ ಕಂಪನಿ (1918) ಬಹಳ ಪ್ರಸಿದ್ಧವಾಗಿತ್ತು.

ಎಣ್ಣೆ ತೆಗೆಯುವ ಉದ್ಯಮದಲ್ಲಿ ಜಿಲ್ಲೆಯು ರಾಜ್ಯದಲ್ಲಿಯೇ ಪ್ರಮುಖಸ್ಥಾನವನ್ನು ಪಡೆದಿದೆ. 1951 ರ ಗಣತಿಯ ಪ್ರಕಾರ ಜಿಲ್ಲೆಯಲ್ಲಿ 64 ಉದ್ಯಮಗಳು 361 ಮಂದಿಗೆ ಉದ್ಯೋಗವನ್ನೊದಗಿಸಿದ್ದವು. ಅಣ್ಣಿಗೇರಿ, ಗದಗ, ಹುಬ್ಬಳ್ಳಿ, ಲಕ್ಷ್ಮೇಶ್ವರ ಮತ್ತು ನರಗುಂದ ಇವು ಜಿಲ್ಲೆಯ ಈ ಉದ್ಯಮದ ಪ್ರಮುಖ ಕೇಂದ್ರಗಳಾಗಿದ್ದವು.

ಜಿಲ್ಲೆಯ ಸಣ್ಣ ಕೈಗಾರಿಕೆಗಳ ವ್ಯಾಪ್ತಿಗೆ ಕುಂಬಾರಿಕೆ, ಮಂಡಕ್ಕಿ ಮತ್ತು ಅವಲಕ್ಕಿ ತಯಾರಿಕೆ, ಚರ್ಮೋದ್ಯಮ, ಮರಗೆಲಸ ಮುಂತಾದವುಗಳು ಸೇರುತ್ತವೆ. 1951 ರ ಗಣತಿಯಂತೆ ಜಿಲ್ಲೆಯಲ್ಲಿ 1,275 ಮಂದಿ ಕುಶಲಕರ್ಮಿಗಳು ಕುಂಬಾರಿಕೆಯಲ್ಲೂ, 109 ಮಂದಿ ಮಂಡಕ್ಕಿ ಮತ್ತು ಅವಲಕ್ಕಿ ತಯಾರಿಕೆಯಲ್ಲೂ, 2,803 ಮಂದಿ ಚರ್ಮೋದ್ಯಮದಲ್ಲೂ ಕಾರ್ಯನಿರತರಾಗಿದ್ದರು. ಸುಮಾರು 100 ಸಂಸಾರಗಳು ಮರಗೆಲಸ ಮತ್ತು ಬಣ್ಣ ಹಾಕುವ ಉದ್ಯಮದಲ್ಲಿ ತೊಡಗಿದ್ದವು. ಇವರು ಮರದ ಬೊಂಬೆಗಳು, ದೇವರುಗಳು, ಪಾಲಕಿಗಳು, ತೊಟ್ಟಿಲುಗಳು, ಮಂಚಗಳು, ಮೊದಲಾದವುಗಳನ್ನು ತಯಾರಿಸುತ್ತಿದ್ದರು. ಜಿಲ್ಲೆಯ ವಾಯುಗುಣವು ರೇಷ್ಮೆ ಕೃಷಿಗೆ ಅನುಕೂಲವಾಗಿದ್ದು ರೇಷ್ಮೆ ಕೈಗಾರಿಕೆಗೆ ನೆರವನ್ನೊದಗಿಸುತ್ತಿದೆ. 1951 ರಲ್ಲಿ ಸುಮಾರು 20 ರೈತರು ರೇಷ್ಮೆ ಗೂಡುಗಳ ಉತ್ಪಾದನಾ ಕಾರ್ಯದಲ್ಲಿ ತೊಡಗಿದ್ದರು. ಇವರ ಪೈಕಿ 15 ರೈತರು ಸ್ವಂತ ಹಿಪ್ಪು ನೇರಳೆ ಕೃಷಿಕರಾಗಿದ್ದರು. ಉಳಿದ ಐವರಲ್ಲಿ ಮೂರು ಮಂದಿ ರಾಜ್ಯ ಸರ್ಕಾರದ ನೆರವಿನಿಂದಲೂ, ಇಬ್ಬರು ಬೊಂಬಾಯಿ ಸಿಲ್ಕ ಫಿಲೇಚರ್ ಲಿಮಿಟೆಡ್ ನೆರವಿನಿಂದಲೂ ಕಾರ್ಯ ನಿರ್ವಹಿಸುತ್ತಿದ್ದರು.

## ಕೋಷ್ಟಕ 5.1

ಧಾರವಾಡ ಜಿಲ್ಲೆಯಲ್ಲಿ 1956 ರಲ್ಲಿದ್ದ ಪ್ರಮುಖ ಉದ್ದಿಮೆಗಳು ಮತ್ತು ಅವುಗಳಲ್ಲಿ ದಿನನಿತ್ಯ ಕಾರ್ಯ ನಿರ್ವಹಿಸುತ್ತಿದ್ದ ಕಾರ್ಮಿಕರ ಸಂಖ್ಯೆ ಹೀಗಿದೆ.

| ಕ್ರ.ಸಂ. | ಉದ್ದಿಮೆಯ (ಕೈಗಾರಿಕೆಯ) ಹೆಸರು | ಘಟಕಗಳ ಸಂಖ್ಯೆ | ದಿನನಿತ್ಯದ ಕಾರ್ಮಿಕರ ಸಂಖ್ಯೆ |
|---|---|---|---|
| ಅ) | ಸರ್ವಕಾಲಿಕ ಉದ್ಯಮಗಳು | | |
| 1. | ಬಟ್ಟೆ ತಯಾರಿಕೆ | 6 | 2,275 |
| 2. | ಇಂಜಿನಿಯರಿಂಗ್ | 16 | 685 |
| 3. | ಆಹಾರ, ಪಾನೀಯ ಮತ್ತು ತಂಬಾಕು | 13 | 955 |
| 4. | ಖನಿಜಗಳು ಮತ್ತು ಅದಿರುಗಳು | 1 | 17 |
| 5. | ಕಾಗದ ಮತ್ತು ಮುದ್ರಣ | 8 | 249 |
| 6. | ಮರಮಟ್ಟು, ಕಲ್ಲು ಮತ್ತು ಗಾಜು ತಯಾರಿಕೆ | 2 | 38 |
| 7. | ಇತರೆ | 3 | 75 |
| | ಒಟ್ಟು ಸರ್ವಕಾಲಿಕ ಉದ್ಯಮಗಳು | 49 | 4294 |
| ಆ) | ಋತುಮಾನ ಉದ್ಯಮಗಳು | | |
| 1 | ಆಹಾರ, ಪಾನೀಯ ಮತ್ತು ತಂಬಾಕು | 24 | 623 |
| 2 | ಜನ್ನಿಂಗ್ ಮತ್ತು ಪ್ರೆಸ್ಸಿಂಗ್ | 104 | 5176 |
| | ಒಟ್ಟು ಋತುಮಾನದ ಉದ್ಯಮಗಳು | 128 | 5799 |
| | ಒಟ್ಟು (ಅ+ಆ) | 177 | 10,093 |

ಆಧಾರ: ಮೈಸೂರು ರಾಜ್ಯದಲ್ಲಿ 1956 ರಲ್ಲಿದ್ದ ಬೃಹತ್ ಕೈಗಾರಿಕೋದ್ಯಮಗಳು, ಸರ್ಕಾರಿ ಮುದ್ರಣಾಲಯ, ಬೆಂಗಳೂರು.

### ಪ್ರಸ್ತುತ ಸ್ಥಿತಿ

ಧಾರವಾಡ ಜಿಲ್ಲೆಯಲ್ಲಿ 1993-94 ರಲ್ಲಿ ಒಟ್ಟು 47 ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಘಟಕಗಳಿದ್ದು, 17,533.80 ಲಕ್ಷ ರೂಪಾಯಿ ಬಂಡವಾಳದೊಂದಿಗೆ 27,477 ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿವೆ. ಇದೇ ಕಾಲಾವಧಿಯಲ್ಲಿ 13,826 ಸಣ್ಣ ಪ್ರಮಾಣದ ಕೈಗಾರಿಕೆಗಳಿದ್ದು 9,436.89 ಲಕ್ಷ ರೂಪಾಯಿ ಬಂಡವಾಳದೊಂದಿಗೆ 76,441 ಮಂದಿ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸಿದ್ದವು. ಜಿಲ್ಲೆಯಲ್ಲಿ 140 ಸಹಕಾರ ಸಂಘಗಳು 80 ನೋಂದಾಯಿತ ಸಂಸ್ಥೆಗಳು ಮತ್ತು 650 ವೈಯಕ್ತಿಕ ಫಲಾನುಭವಿಗಳು ಖಾದಿ ಮತ್ತು ಗ್ರಾಮೋದ್ಯೋಗ ಕಾರ್ಯದಲ್ಲಿ ತೊಡಗಿದ್ದವು. 1993-94 ರ ಗಣತಿಯಂತೆ ಜಿಲ್ಲೆಯಲ್ಲಿ 2,164 ವಿದ್ಯುತ್ ಮಗ್ಗಗಳಿದ್ದು, 1,040 ಮಂದಿಗೆ ಉದ್ಯೋಗವನ್ನೊದಗಿಸಿದ್ದವು. 1987-88 ರ ಗಣತಿಯಂತೆ ಜಿಲ್ಲೆಯಲ್ಲಿ 10,006 ಕೈಮಗ್ಗಗಳಿದ್ದವು. 1993-94 ರಲ್ಲಿ ಜಿಲ್ಲೆಯಲ್ಲಿ 54,260 ಕುಶಲಕರ್ಮಿಗಳಿದ್ದು (ಇವರಲ್ಲಿ ನೇಕಾರರೂ ಸೇರಿದ್ದಾರೆ) ವಿವಿಧ ಗೃಹ ಮತ್ತು ಕರಕುಶಲ ಉದ್ಯಮದಲ್ಲಿ ನಿರತರಾಗಿದ್ದರು. ಇದೇ ಕಾಲಾವಧಿಯಲ್ಲಿ ಜಿಲ್ಲೆಯಲ್ಲಿ ನಾಲ್ಕು ಕೈಗಾರಿಕಾ ವಸಾಹತುಗಳಿದ್ದು (ಗೋಕುಲ ಕೈಗಾರಿಕಾ ವಸಾಹತು, ಲಕಮನಹಳ್ಳಿ ಕೈಗಾರಿಕಾ ವಸಾಹತು, ಗದಗ ಕೈಗಾರಿಕೆ ವಸಾಹತು ಮತ್ತು ರಾಣೆಬೆನ್ನೂರು ಕೈಗಾರಿಕಾ ವಸಾಹತು) 430 ಮಳಿಗೆಗಳನ್ನು ಹೊಂದಿದ್ದವು. ಜಿಲ್ಲೆಯ ಲಕಮನಹಳ್ಳಿ, ಸತ್ತೂರ, ರಾಯಾಪುರ, ಕೆಲಗೇರಿ, ಗೋಕುಲ, ತಾರಿಹಾಳ ಮತ್ತು ಬೇಲೂರಗಳಲ್ಲಿ ಕೈಗಾರಿಕಾ ವಲಯಗಳಿದ್ದು 429 ನಿವೇಶನಗಳನ್ನು ನಿರ್ಮಿಸಲಾಗಿತ್ತು.

## ವಿದ್ಯುಚ್ಛಕ್ತಿ

ಸ್ವಾತಂತ್ರ್ಯಪೂರ್ವದಲ್ಲಿ ಡೀಜಲ್ ಬಳಸಿ ವಿದ್ಯುತ್ತನ್ನು ಪೂರೈಸುವ ಖಾಸಗಿ ಕಂಪನಿಗಳು ಜಿಲ್ಲೆಯ ಏಳು ಪಟ್ಟಣಗಳಲ್ಲಿದ್ದವು. ಹುಬ್ಬಳ್ಳಿ (ಆಮಟೆ ಮತ್ತು ಕಂಪನಿ, 1924), ಧಾರವಾಡ (ದೇಸಾಯಿ ಮತ್ತು ಕಂಪನಿ, 1933), ಗದಗ (ಮಾನ್ವಿ ಎಲೆಕ್ಟ್ರಿಕಲ್ ಪವರ್ ಸಪ್ಲಯರ್ಸ್, 1926), ರಾಣೆಬೆನ್ನೂರು (1935), ಬ್ಯಾಡಗಿ (1937), ಶಿರಹಟ್ಟಿ ಹಾಗೂ ಕುಂದಗೋಳಲ್ಲಿ ಇವು ಕಾರ್ಯನಿರ್ವಹಿಸುತ್ತಿದ್ದವು. 1944 ರಲ್ಲಿ ಹುಬ್ಬಳ್ಳಿಯ ಕಂಪನಿಯನ್ನು ರಾಷ್ಟ್ರೀಕರಿಸಲಾಯಿತು. ಈ ವಿದ್ಯುತ್ತು ತೀರ ತುಟ್ಟಿಯಾಗಿದ್ದು ಕೈಗಾರಿಕೆಗಳಲ್ಲಿ ಬಳಸುವುದು ಅಷ್ಟೊಂದು ಲಾಭದಾಯಕವಾಗಿರಲಿಲ್ಲ. ಧಾರವಾಡ ಜಿಲ್ಲೆಯು ಏಕೀಕರಣ ಪೂರ್ವದಲ್ಲಿ ಮುಂಬೈ ರಾಜ್ಯದ ಮೂರು ವಿದ್ಯುತ್ ವಿಭಾಗಗಳಲ್ಲಿ ಒಂದಾದ ಪುಣೆ ವಿಭಾಗಕ್ಕೆ ಸೇರಿತ್ತು.

ಏಕೀಕರಣದ ನಂತರ ಜಲವಿದ್ಯುತ್ ಪೂರೈಕೆ ಆರಂಭವಾಯಿತು. 1957 ರಲ್ಲಿ ಕರ್ನಾಟಕ ವಿದ್ಯುತ್ ಮಂಡಲಿ ಅಸ್ತಿತ್ವಕ್ಕೆ ಬಂತು. ಆಗ ಖಾಸಗಿ ಕಂಪನಿಗಳು ರಾಷ್ಟ್ರೀಕರಣಗೊಂಡವು. ಜಿಲ್ಲೆಯಲ್ಲಿ ಶರಾವತಿಯಿಂದ ಜಲ ವಿದ್ಯುತ್ ವಿತರಣೆ 1961 ರಿಂದ ಆರಂಭವಾಯಿತು.

ಹುಬ್ಬಳ್ಳಿಯಲ್ಲಿ ಒಂದು ಅಭಿಗ್ರಾಹಿ ಕೇಂದ್ರವಿದ್ದು (ರಿಸೀವಿಂಗ್ ಸ್ಟೇಶನ್) ಕಾಳೀ ಯೋಜನೆಯ ಅಂಬಿಕಾನಗರ ಬಳಿಯ ನಾಗಝರಿ ಕೇಂದ್ರದಿಂದ ಹೆಚ್ಚು ವೋಲ್ಟೇಜ್‌ನ ಲೈನ್‌ಗಳ ಮೂಲಕ ಹುಬ್ಬಳ್ಳಿಗೆ ತಂದು ವಿದ್ಯುತ್ತನ್ನು ವಿತರಿಸಲಾಗುತ್ತದೆ. ಜಿಲ್ಲೆಯಲ್ಲಿ ನಾಲ್ಕು ವಿದ್ಯುತ್ ವಾಹಕ ಲೈನುಗಳು ವಿದ್ಯುತ್ತಿನ ಸಾರಿಗೆಗೆ ನೆರವಾಗುತ್ತಿವೆ.

ಶರಾವತಿಯಿಂದ ಅಗ್ಗದ ವಿದ್ಯುತ್ ಬಂದನಂತರ ಕೈಗಾರಿಕೆಗಳಿಗೆ ಹೆಚ್ಚಿನ ಬೆಂಬಲ ದೊರೆಯಿತು. ಬೆಳಕುಕಾಣದ ಹಳ್ಳಿಗಳು, ಮನೆಗಳಿಗೆ ವಿದ್ಯುತ್ತು ಪ್ರವಹಿಸಿತು. ಅನೇಕ ಹೊಸ ಉದ್ದಿಮೆಗಳು ಆರಂಭಗೊಂಡವು. ಧಾರವಾಡ ಜಿಲ್ಲೆಯಲ್ಲಿ 1990-91 ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಒಂದು ವೃತ್ತ ಕಛೇರಿ, ನಾಲ್ಕು ವಿಭಾಗೀಯ ಕಛೇರಿಗಳು ಮತ್ತು 20 ಉಪ ವಿಭಾಗೀಯ ಕಛೇರಿಗಳು ವಿದ್ಯುತ್ ಪೂರೈಕೆ ಮತ್ತು ಉಸ್ತುವಾರಿ ಕಾರ್ಯದಲ್ಲಿ ತೊಡಗಿದ್ದವು. ವೃತ್ತ ಕಛೇರಿ ಮತ್ತು ವಿಭಾಗೀಯ ಕಛೇರಿ 1 ಮತ್ತು 2 ಇವುಗಳ ಕೇಂದ್ರಸ್ಥಾನ ಹುಬ್ಬಳ್ಳಿಯಲ್ಲಿಯೂ ಉಳಿದೆರಡು ವಿಭಾಗೀಯ ಕಛೇರಿಯ ಕೇಂದ್ರಸ್ಥಾನಗಳು ಗದಗ ಮತ್ತು ಹಾವೇರಿಯಲ್ಲಿಯೂ ಇದ್ದವು. ಹುಬ್ಬಳ್ಳಿಯ ವಿಭಾಗೀಯ ಕಛೇರಿ 1 ರ ವ್ಯಾಪ್ತಿಯಲ್ಲಿ ಹುಬ್ಬಳ್ಳಿಯ ಉಪವಿಭಾಗೀಯ ಕಛೇರಿ-1 ಮತ್ತು 2, ಧಾರವಾಡ ನಗರ ಉಪ ವಿಭಾಗೀಯ ಕಛೇರಿ ಮತ್ತು ಧಾರವಾಡ ಗ್ರಾಮಾಂತರ ಉಪ ವಿಭಾಗೀಯ ಕಛೇರಿಗಳು ಸೇರಿದ್ದವು. ಹುಬ್ಬಳ್ಳಿಯ ವಿಭಾಗೀಯ ಕಛೇರಿ-2 ರ ವ್ಯಾಪ್ತಿಗೆ ಕಲಘಟಗಿ, ಕುಂದಗೋಳ, ಶಿಗ್ಗಾಂವಿ, ಸವಣೂರು ಮತ್ತು ಲಕ್ಷ್ಮೇಶ್ವರ ಉಪವಿಭಾಗೀಯ ಕಛೇರಿಗಳು ಸೇರಿದ್ದವು. ಗದಗ ವಿಭಾಗೀಯ ಕಛೇರಿಯ ವ್ಯಾಪ್ತಿಗೆ ಗದಗ ನಗರ, ಗದಗ ಗ್ರಾಮಾಂತರ, ಮುಂಡರಗಿ, ನರಗುಂದ, ರೋಣ ಮತ್ತು ನವಲಗುಂದ ಉಪ ವಿಭಾಗೀಯ ಕಛೇರಿಗಳು ಸೇರಿದ್ದವು. ಹಾವೇರಿಯ ವಿಭಾಗೀಯ ಕಛೇರಿಯ ಆಡಳಿತ ವ್ಯಾಪ್ತಿಯಲ್ಲಿ ಹಾವೇರಿ, ಹಾನಗಲ್, ರಾಣೆಬೆನ್ನೂರು, ಹಿರೇಕೆರೂರು ಮತ್ತು ಬ್ಯಾಡಗಿ ಇವುಗಳ ಉಪವಿಭಾಗೀಯ ಕಚೇರಿಗಳಿದ್ದವು.

### ಕೋಷ್ಟಕ 5.2

1991 ರ ಮಾರ್ಚ್ ಅಂತ್ಯದವರೆಗೂ ಜಿಲ್ಲೆಯಲ್ಲಿದ್ದ ವಲಯವಾರು
ಮತ್ತು ಘಟಕವಾರು ಒಟ್ಟು ಅಭಿಗ್ರಾಹಿ ಕೇಂದ್ರಗಳು

| ಕ್ರಸಂ. | ವಿಭಾಗದ ಹೆಸರು | 220 ಕೆವಿ. | 110 ಕೆವಿ | 66 ಕೆವಿ | 33 ಕೆವಿ | ಒಟ್ಟು |
|---|---|---|---|---|---|---|
| 1. | ಹುಬ್ಬಳ್ಳಿ-1 | 1 | 1 | - | 6 | 8 |
| 2. | ಹುಬ್ಬಳ್ಳಿ-2 | - | - | - | 6 | 6 |
| 3. | ಗದಗ | - | 2 | - | 5 | 7 |
| 4. | ಹಾವೇರಿ | - | 2 | 1 | 6 | 9 |
| | ಒಟ್ಟು | 1 | 5 | 1 | 23 | 30 |

ಆಧಾರ: ವಾರ್ಷಿಕ ವರದಿ 1990-91 (ಪುಟ 31), ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ವೃತ್ತ ಕಚೇರಿ, ಹುಬ್ಬಳ್ಳಿ.

## ಕೋಷ್ಟಕ 5.3

ಧಾರವಾಡ ಜಿಲ್ಲೆಯಲ್ಲಿ 1994 ಮಾರ್ಚ್ ಅಂತ್ಯದವರೆಗೂ ಇದ್ದ ತಾಲೂಕುವಾರು ವಿವಿಧ ವಿದ್ಯುತ್ ವಿತರಣಾ ಜಾಲ ಮತ್ತು ಅವುಗಳ ಉದ್ದ (ಕಿ.ಮೀ.)ವನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.

| ಕ್ರ.ಸಂ. | ತಾಲೂಕು | ಹೈಟೆನ್ಷನ್ | ಲೋಟೆನ್ಷನ್ | ಕ್ರ.ಸಂ. | ತಾಲೂಕು | ಹೈಟೆನ್ಷನ್ | ಲೋಟೆನ್ಷನ್ |
|---|---|---|---|---|---|---|---|
| 1. | ಧಾರವಾಡ | 633.320 | 1,079.290 | 10. | ಶಿಗ್ಗಾಂವಿ | 327.850 | 581.125 |
| 2. | ಹುಬ್ಬಳ್ಳಿ | 421.920 | 1,354.111 | 11. | ಕಲಘಟಗಿ | 416.359 | 672.570 |
| 3. | ಗದಗ | 490.499 | 1,194.439 | 12. | ಹಾನಗಲ್ | 638.046 | 1,062.043 |
| 4. | ರೋಣ | 537.925 | 1,304.511 | 13. | ಹಿರೇಕೆರೂರು | 556.037 | 1,211.883 |
| 5. | ನರಗುಂದ | 135.850 | 200.950 | 14. | ಹಾವೇರಿ | 488.090 | 1,217.772 |
| 6. | ನವಲಗುಂದ | 303.735 | 349.470 | 15. | ಬ್ಯಾಡಗಿ | 275.765 | 714.819 |
| 7. | ಮುಂಡರಗಿ | 404.922 | 712.764 | 16. | ರಾಣೆಬೆನ್ನೂರು | 657.353 | 1,576.801 |
| 8. | ಶಿರಹಟ್ಟಿ | 429.650 | 711.290 | 17. | ಕುಂದಗೋಳ | 287.731 | 300.334 |
| 9. | ಸವಣೂರು | 317.270 | 537.350 | | ಒಟ್ಟು | 7,322.322 | 14,781.522 |

## ಕೋಷ್ಟಕ 5.4

ಧಾರವಾಡ ಜಿಲ್ಲೆಯಲ್ಲಿ 1994 ರ ಮಾರ್ಚ್ ಅಂತ್ಯದವರೆಗೂ ಇದ್ದ ತಾಲೂಕುವಾರು ವಿವಿಧ ವಿದ್ಯುತ್ ಘಟಕಗಳ ವಿದ್ಯುತ್ ಪೂರೈಕೆಯ ವಿವರ.

| ಕ್ರ. ಸಂ. | ತಾಲೂಕು | ಗ್ರಾಮಗಳು | | ಗೃಹಗಳು | ಸರ್ವವಿದ್ಯುತ್ ಗೃಹಗಳು | ವಾಣಿಜ್ಯ | ಉದ್ದಿಮೆ (ಎಲ್.ಟಿ.) | ನೀರಾವರಿ ಪಂಪ್ ಸೆಟ್ | ಕುಡಿಯುವ ನೀರು | ಬೀದಿದೀಪ | ಹೆಚ್.ಟಿ. ಅನುಭವಿಗಳು | ಭಾಗ್ಯ ಜ್ಯೋತಿ |
|---|---|---|---|---|---|---|---|---|---|---|---|---|
| 1. | ಧಾರವಾಡ | 110 | (2) | 31,749 | 11,378 | 6,074 | 1,829 | 2,530 | 180 | 7,255 | 40 | 3,102 |
| 2. | ಹುಬ್ಬಳ್ಳಿ | 58 | | 51,378 | 19,508 | 13,568 | 4,529 | 1,482 | 147 | 3,361 | 48 | 2,735 |
| 3. | ಗದಗ | 54 | (6) | 26,125 | 2,923 | 3,515 | 1,648 | 2,235 | 186 | 6,120 | 22 | 5,068 |
| 4. | ರೋಣ | 91 | (16) | 13,340 | 321 | 532 | 706 | 4,823 | 136 | 4,128 | - | 5,276 |
| 5. | ನರಗುಂದ | 33 | - | 7,345 | 228 | 772 | 351 | 828 | 57 | 2,683 | 2 | 2,683 |
| 6. | ನವಲಗುಂದ | 58 | - | 15,631 | 432 | 1,410 | 414 | 969 | 132 | 1,622 | 3 | 2,744 |
| 7. | ಮುಂಡರಗಿ | 48 | (2) | 6,057 | 165 | 556 | 175 | 2,670 | 54 | 6,390 | 3 | 1,463 |
| 8. | ಶಿರಹಟ್ಟಿ | 76 | (8) | 12,089 | 242 | 1,363 | 482 | 2,061 | 97 | 2,583 | 2 | 3,697 |
| 9. | ಸವಣೂರು | 62 | (1) | 7,714 | 257 | 592 | 305 | 2,606 | 120 | 1,720 | 2 | 4,000 |
| 10. | ಶಿಗ್ಗಾಂವಿ | 92 | (1) | 9,911 | 182 | 1,468 | 353 | 1,130 | 95 | 1,650 | - | 3,453 |
| 11. | ಕಲಘಟಗಿ | 82 | - | 8,728 | 116 | 787 | 347 | 1,542 | 92 | 2,740 | 2 | 3,145 |
| 12. | ಹಾನಗಲ್ | 143 | | 14,235 | 343 | 815 | 466 | 2,724 | 109 | 1,684 | 1 | 4,265 |
| 13. | ಹಿರೇಕೆರೂರು | 125 | - | 15,762 | 297 | 934 | 422 | 3,967 | 114 | 3,935 | - | 4,229 |

| ಕ್ರ. ಸಂ. | ತಾಲೂಕು | ಗ್ರಾಮಗಳು | | ಗೃಹಗಳು | ಸರ್ವವಿದ್ಯುತ್ ಗೃಹಗಳು | ವಾಣಿಜ್ಯ | ಉದ್ದಿಮೆ (ಎಲ್.ಟಿ.) | ನೀರಾವರಿ ಪಂಪ್ ಸೆಟ್ | ಕುಡಿಯುವ ನೀರು | ಬೀದಿದೀಪ | ಹೆಚ್.ಟಿ. ಅನುಭವಿಗಳು | ಭಾಗ್ಯ ಜ್ಯೋತಿ |
|---|---|---|---|---|---|---|---|---|---|---|---|---|
| 14. | ಹಾವೇರಿ | 88 | | 17,266 | 1,350 | 2,298 | 833 | 4,012 | 107 | 4,004 | 5 | 4,145 |
| 15. | ಬ್ಯಾಡಗಿ | 63 | - | 8,492 | 293 | 893 | 236 | 2,183 | 111 | 1,468 | - | 2,742 |
| 16. | ರಾಣೆಬೆನ್ನೂರು | 103 | - | 19,756 | 959 | 2,217 | 908 | 6,158 | 158 | 3,153 | 14 | 4,296 |
| 17. | ಕುಂದಗೋಳ | 57 | (1) | 11,463 | 175 | 893 | 248 | 205 | 25 | 1,733 | - | 2,132 |
| | ಒಟ್ಟು | 1344 | (37) | 2,77,041 | 39,169 | 38,687 | 14,252 | 42,125 | 1,920 | 52,229 | 144 | 59,175 |

ವಿ.ಸೂ.: ಆವರಣದಲ್ಲಿ ಕೊಟ್ಟಿರುವುದು ಉಪಗ್ರಾಮಗಳ ಸಂಖ್ಯೆ

ಆಧಾರ: ಕ.ವಿ.ಮಂಡಳಿ ವೃತ್ತಕಚೇರಿ, ಹುಬ್ಬಳ್ಳಿ.

## ಕೋಷ್ಟಕ 5.3

### ಧಾರವಾಡ ಜಿಲ್ಲೆಯಲ್ಲಿ 1994 ರ ಮಾರ್ಚ್ ಅಂತ್ಯದವರೆಗೂ ಇದ್ದ ತಾಲೂಕುವಾರು ವಿವಿಧ ಘಟಕಗಳ ವಿದ್ಯುತ್ ಬೇಡಿಕೆಯ ವಿವರ (ಮೆ.ವ್ಯಾಗಳಲ್ಲಿ)

| ಕ್ರಸಂ. | ತಾಲೂಕು | ಗೃಹಗಳು | ಸರ್ವವಿದ್ಯುತ್ ಗೃಹಗಳು | ವಾಣಿಜ್ಯ | ಕೈಗಾರಿಕೆ (ಎಲ್.ಟಿ) | ನೀರಾವರಿ ಪಂಪು ಸೆಟ್ಟುಗಳು | ಕುಡಿಯುವ ನೀರು ಯೋಜನೆ | ಹೆಚ್.ಟಿ. ಉದ್ದಿಮೆ | ಒಟ್ಟು |
|---|---|---|---|---|---|---|---|---|---|
| 1. | ಧಾರವಾಡ | 7.92 | 28.45 | 6.75 | 5.48 | 11.38 | 1.01 | 7.64 | 68.63 |
| 2. | ಹುಬ್ಬಳ್ಳಿ | 12.85 | 50.95 | 15.65 | 15.59 | 6.70 | 0.97 | 13.65 | 116.36 |
| 3. | ಗದಗ | 6.53 | 8.76 | 1.41 | 7.42 | 8.38 | 1.39 | 6.21 | 40.10 |
| 4. | ರೋಣ | 3.33 | 0.96 | 0.21 | 2.12 | 14.08 | 1.00 | - | 21.7 |
| 5. | ನರಗುಂದ | 1.80 | 0.68 | 0.30 | 0.87 | 3.10 | 0.40 | 1.50 | 8.65 |
| 6. | ನವಲಗುಂದ | 3.90 | 1.29 | 0.56 | 0.98 | 3.63 | 0.99 | 0.65 | 12.00 |
| 7. | ಮುಂಡರಗಿ | 1.51 | 0.50 | 0.20 | 0.46 | 10.01 | 0.40 | 1.60 | 14.68 |
| 8. | ಶಿರಹಟ್ಟಿ | 3.02 | 0.72 | 0.54 | 1.09 | 7.50 | 0.74 | 0.76 | 14.37 |
| 9. | ಸವಣೂರು | 1.81 | 0.72 | 0.17 | 1.85 | 11.72 | 0.55 | 0.50 | 7.32 |
| 10. | ಶಿಗ್ಗಾಂವಿ | 1.98 | 0.41 | 0.35 | 1.02 | 5.08 | 0.41 | - | 9.25 |
| 11. | ಕಲಘಟಗಿ | 1.72 | 0.28 | 0.27 | 1.56 | 6.93 | 0.45 | 0.48 | 11.69 |
| 12. | ಹಾನಗಲ್ | 1.58 | 0.82 | 0.38 | 1.40 | 11.50 | 0.52 | 0.25 | 16.45 |
| 13. | ಹಿರೇಕೆರೂರು | 2.98 | 2.01 | 1.38 | 1.41 | 14.72 | 0.52 | - | 23.02 |
| 14. | ಹಾವೇರಿ | 3.45 | 3.38 | 1.25 | 1.92 | 13.55 | 0.49 | 0.20 | 24.24 |
| 15. | ಬ್ಯಾಡಗಿ | 1.69 | 2.10 | 1.32 | 0.78 | 8.92 | 0.52 | - | 15.33 |
| 16. | ರಾಣೆಬೆನ್ನೂರು | 5.12 | 2.98 | 1.27 | 2.72 | 18.47 | 8.00 | - | 38.56 |
| 17. | ಕುಂದಗೋಳ | 2.25 | 0.43 | 0.45 | 0.82 | 0.92 | 0.12 | - | 4.99 |
| | ಒಟ್ಟು | 63.44 | 105.44 | 32.46 | 47.49 | 156.59 | 18.48 | 33.44 | 447.34 |

ಆಧಾರ: ಕ.ವಿ.ಮಂ. ವೃತ್ತ ಕಚೇರಿ, ಹುಬ್ಬಳ್ಳಿ

### ಕೈಗಾರಿಕಾ ಪ್ರಕಾರಗಳು

ಧಾರವಾಡ ಜಿಲ್ಲೆಯಲ್ಲಿರುವ ಕೈಗಾರಿಕೆಗಳನ್ನು ಪ್ರಧಾನವಾಗಿ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು, ಸಣ್ಣ ಪ್ರಮಾಣದ ಕೈಗಾರಿಕೆಗಳು, ಖಾದಿ ಮತ್ತು ಗ್ರಾಮೋದ್ಯೋಗ, ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳು, ಗೃಹ ಕೈಗಾರಿಕೆ ಮತ್ತು ಕರಕುಶಲ ಕೈಗಾರಿಕೆಗಳು ಹಾಗೂ ರೇಷ್ಮೆ ಕೈಗಾರಿಕೆ ಎಂದು ಆರು ಗುಂಪುಗಳಾಗಿ ವಿಂಗಡಿಸಬಹುದು.

**ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು:** ಜಿಲ್ಲೆಯಲ್ಲಿ 1993-94ರಲ್ಲಿ ಒಟ್ಟು 47 ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿದ್ದವು. ಇವುಗಳಲ್ಲಿ ತೊಡಗಿಸಿದ್ದ ಬಂಡವಾಳ 17,533.80 ಲಕ್ಷ ರೂಪಾಯಿ. ಇವುಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಸಂಖ್ಯೆ 27,477. ಜಿಲ್ಲೆಯಲ್ಲಿ ಒಂಬತ್ತು ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಅನುಷ್ಠಾನದ ವಿವಿಧ ಹಂತದಲ್ಲಿದ್ದವು. ಇವುಗಳ ಮೇಲೆ ತೊಡಗಿಸಿರುವ ಬಂಡವಾಳ 3,875 ಲಕ್ಷ ರೂಪಾಯಿ. ಇವು 2,335 ಮಂದಿಗೆ ಉದ್ಯೋಗವನ್ನೊದಗಿಸಲಿವೆ.

### ಮಹದೇವ ಜವಳಿ ಗಿರಣಿ

ಮಹದೇವ ಜವಳಿ ಗಿರಣಿಯು 1898ರಲ್ಲಿ ಹುಬ್ಬಳ್ಳಿಯಲ್ಲಿ ಸ್ಥಾಪನೆಗೊಂಡಿತು. ಫೋರ್ಬಸ್ ಮತ್ತು ಫೋರ್ಬಸ್ ಎಂಬ ಬ್ರಿಟಿಷ್ ಕಂಪೆನಿಯವರಿಂದ ಸ್ಥಾಪಿಸಲ್ಪಟ್ಟಿದ್ದ ಇದು ಕಾಲಾನಂತರ ಭಾರತ್ ಮಿಲ್, ಮಹಾದೇವ ಟೆಕ್ಸ್‌ಟೈಲ್ಸ್ ಎಂದು ಮುಂತಾದ ಬೇರೆ ಬೇರೆ ಮಾಲೀಕತ್ವದಲ್ಲಿ ನಡೆಸಲ್ಪಟ್ಟಿತು. ಕೇಂದ್ರ ಸರ್ಕಾರವು ಇದನ್ನು 1979ರಲ್ಲಿ ತನ್ನ ಸ್ವಾಧೀನಕ್ಕೆ ತೆಗೆದುಕೊಂಡು 1986ರಲ್ಲಿ ರಾಜ್ಯ ಸರ್ಕಾರದ ಆಡಳಿತ ವ್ಯಾಪ್ತಿಗೊಳಪಡಿಸಿತು. ನೂಲು ತಯಾರಿಕೆ, ಬಟ್ಟೆ ನೇಯ್ಗೆ, ಬಣ್ಣ ಹಾಕುವುದು, ಪ್ರಿಂಟಿಂಗ್ ಮತ್ತು ಜಿನ್ನಿಂಗ್ ಹಾಗೂ ಪ್ರೆಸ್ಸಿಂಗ್ ವಿಭಾಗಗಳ ಮೂಲಕ ಕಾರ್ಯನಿರ್ವಹಿಸುತ್ತಿದ್ದ ಈ ಗಿರಣಿ ಕರ್ನಾಟಕ ರಾಜ್ಯ ಜವಳಿ ಸಂಸ್ಥೆಯ ಸ್ವಾಮ್ಯಕ್ಕೆ ಒಳಪಟ್ಟಿದೆ. ಈ ಗಿರಣಿಯಲ್ಲಿ 1994ರ ಮಾರ್ಚ್ ಅಂತ್ಯದ ವೇಳೆಯಲ್ಲಿ 12,000 ಕದಿರುಗಳು ಕಾರ್ಯನಿರ್ವಹಿಸುತ್ತಿದ್ದು 20 ಕೌಂಟಿನ ನೂಲನ್ನು ತಯಾರಿಸಲಾಗುತ್ತಿತ್ತು. ಇದು ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ವಿಭಾಗದಲ್ಲಿಯು ಕಾರ್ಯತತ್ಪರವಾಗಿತ್ತು. ಇದಕ್ಕೆ ಬೇಕಾಗುವ ಕಚ್ಚಾ ಸರಕುಗಳಾದ ಹತ್ತಿ ಮತ್ತು ಅರಳೆಯನ್ನು ಒಕ್ಕಲುತನ ಹುಟ್ಟುವಳಿ ಮಾರುಕಟ್ಟೆ ಸಮಿತಿ, ಹುಬ್ಬಳ್ಳಿ, ಇದರಿಂದ ಕೊಳ್ಳಲಾಗುತ್ತದೆ. ಇದರಲ್ಲಿ 534 ಮಂದಿ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದರು. ಇದು 1993-94ರಲ್ಲಿ 522.90 ಲಕ್ಷ ರೂಪಾಯಿಗಳ ಮೌಲ್ಯದ 11.07 ಲಕ್ಷ ಕೆ.ಜಿ.ಗಳಷ್ಟು ಸರಕನ್ನು ಉತ್ಪಾದಿಸಿತ್ತು. ಇಲ್ಲಿ ಉತ್ಪಾದನೆಗೊಂಡ ಸರಕು ಕರ್ನಾಟಕ ರಾಜ್ಯದ ಜೊತೆಗೆ ನೆರೆಯ ರಾಜ್ಯಗಳಾದ ಮಹಾರಾಷ್ಟ್ರ, ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳಲ್ಲಿ ಮಾರಾಟಗೊಳ್ಳುತ್ತದೆ.

### ಸಂಗಂ ಎಕ್ಸ್‌ಟ್ರ್ಯಾಕ್ಟ್ಸ್

ಸಂಗಂ ಎಕ್ಸ್‌ಟ್ರ್ಯಾಕ್ಟ್ಸ್ ನಿಯಮಿತವು ಧಾರವಾಡ ಜಿಲ್ಲೆಯ ಕುಮಾರಪಟ್ಟಣದಲ್ಲಿ 1978ರಲ್ಲಿ ಸ್ಥಾಪಿತಗೊಂಡಿತು. 1994ರ ಮಾರ್ಚ್ ಅಂತ್ಯದ ವೇಳೆಗೆ ಇದರಲ್ಲಿ ತೊಡಗಿಸಿದ್ದ ಬಂಡವಾಳವು 18.45 ಲಕ್ಷ ರೂ.ಗಳಷ್ಟಿತ್ತು ಮತ್ತು ಈ ಕಾರ್ಖಾನೆಯು 126 ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿತ್ತು. ಈ ಕಾರ್ಖಾನೆಯು ಉಪಯೋಗಿಸುವ ಕಚ್ಚಾ ಸರಕುಗಳಾದ ಬತ್ತದ ಹೊಟ್ಟು, ಹಿಂಡಿ ಮೊದಲಾದವುಗಳನ್ನು ಧಾರವಾಡ ಜಿಲ್ಲೆಯಿಂದ ಮತ್ತು ನೆರೆಯ ರಾಜ್ಯಗಳಾದ ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳಿಂದ ಪಡೆಯಲಾಗುತ್ತಿದೆ. ಈ ಕಾರ್ಖಾನೆಯಲ್ಲಿ 1993-94ರಲ್ಲಿ 1027.49 ಲಕ್ಷ ರೂ.ಗಳ ಮೌಲ್ಯದ 5,366 ಮೆ.ಟನ್ ಎಣ್ಣೆಯನ್ನು ಉತ್ಪಾದಿಸಲಾಗಿತ್ತು. ಇಲ್ಲಿ ಉತ್ಪಾದಿಸಲ್ಪಟ್ಟ ಎಣ್ಣೆಯು ಬೊಂಬಾಯಿ, ಹೈದರಾಬಾದು, ಇಂದೂರು ಮೊದಲಾದ ಕಡೆಗಳಲ್ಲಿ ಮಾರಾಟಗೊಳ್ಳುತ್ತದೆ. ಇದರಲ್ಲಿ ಉತ್ಪಾದಿಸಿದ ಎಣ್ಣೆ ತೆಗೆದ ಆಹಾರ ಪದಾರ್ಥಗಳು ಪಶು ಹಾಗೂ ಕೋಳಿಗಳ ಆಹಾರಗಳಾಗಿ ರಾಜ್ಯದಲ್ಲಿ ಹಾಗೂ ನೆರೆ ರಾಜ್ಯಗಳಾದ ತಮಿಳುನಾಡು, ಮಹಾರಾಷ್ಟ್ರ ಮತ್ತು ಕೇರಳಗಳಲ್ಲಿ ಮಾರಾಟವಾಗುತ್ತವೆ.

### ಎ.ಪಿ.ಎಸ್.ಸ್ಟಾರ್ ಇಂಡಸ್ಟ್ರೀಸ್

ಎ.ಪಿ.ಎಸ್.ಸ್ಟಾರ್ ಇಂಡಸ್ಟ್ರೀಸ್, ನಿಯಮಿತ, ಇದರ ಎರಡನೇಯ ಘಟಕವು ಧಾರವಾಡದ ಕೆಲಗೇರಿ ಕೈಗಾರಿಕಾ ವಸಾಹತಿನಲ್ಲಿ 1988ರಲ್ಲಿ ಸ್ಥಾಪನೆಗೊಂಡಿತು. ಇದು ಅಲ್ಯೂಮಿನಿಯಂ ಫ್ಲಂಬ್ ಮಾದರಿಯ ಸ್ಪಿಂಡಲ್ಸ್ ಮತ್ತು ಟೆಕ್ಸ್‌ಟೈಲ್ ಮಿಲ್ಲುಗಳಲ್ಲಿ ಉಪಯೋಗಿಸುವ ಟ್ವಿಸ್ಟರ್ ಸ್ಪಿಂಡಲ್ಸ್ ಉತ್ಪಾದಿಸುತ್ತದೆ. ಇದಕ್ಕೆ ಬೇಕಾಗುವ ಕಚ್ಚಾ ಸರಕುಗಳಾದ ಎನ್ ಸ್ಟೀಲ್ ರಾಡ್ಸ್, ಬಾಲ್ ಬೇರಿಂಗ್ ಸ್ಟೀಲ್, ಅಲ್ಯೂಮಿನಿಯಂ ಎಕ್ಸ್‌ಟ್ರೂಡೆಡ್ ರಾಡ್ಸ್ ಮೊದಲಾದವುಗಳನ್ನು ಬೊಂಬಾಯಿ, ಬರೋಡ, ರೇಣಿಗುಂಟ, ನಾಸಿಕ್ ಕಲಾಮಸ್ಸೆರಿ ಇವುಗಳಿಂದ ಕೊಳ್ಳುತ್ತದೆ. 1994ರ ಮಾರ್ಚ್ ಅಂತ್ಯದಲ್ಲಿ ಇದು 914.41 ಲಕ್ಷ ರೂ.ಗಳ ಬಂಡವಾಳ ಹೊಂದಿದ್ದು 125 ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿತ್ತು. ಇದು 1993-94ರಲ್ಲಿ 261.03 ಲಕ್ಷ ರೂ.ಗಳ ಮೌಲ್ಯದ 1,56,052 ಸ್ಪಿಂಡಲ್‌ಗಳನ್ನು ಉತ್ಪಾದಿಸಿತ್ತು.

### ಜಿ.ಎಚ್. ಅಸೋಸಿಯೇಟ್ಸ್ ಪ್ರೈ.ಲಿ.

ಜಿ.ಎಚ್. ಅಸೋಸಿಯೇಟ್ಸ್ ಪ್ರೈ.ಲಿ. ಕಾರ್ಖಾನೆಯು ಅಲ್ಯೂಮಿನಿಯಂ ಎಲೆಕ್ಟ್ರೋ ಲಿತಿಕ್ ಕೆಪ್ಯಾಸಿಟರ್ಸ್‌ಗಳನ್ನು ಉತ್ಪಾದಿಸುವ ಗುರಿಯೊಂದಿಗೆ 1989ರಲ್ಲಿ ಕಲಘಟಗಿ ತಾಲೂಕಿನ ಬಾಲಮಟ್ಟಿಯಲ್ಲಿ ಪ್ರಾರಂಭಗೊಂಡಿತು. 1994ರ ಮಾರ್ಚ್ ಅಂತ್ಯದ ವೇಳೆಯಲ್ಲಿ ಇದರಲ್ಲಿ ತೊಡಗಿಸಲ್ಪಟ್ಟಿದ್ದ ಬಂಡವಾಳ 1.10 ಕೋಟಿ ರೂ.ಗಳಷ್ಟಿದ್ದು 28 ಮಂದಿ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿತ್ತು. ಇದಕ್ಕೆ ಬೇಕಾಗುವ ಕಚ್ಚಾ ಸರಕುಗಳನ್ನು ಸ್ಥಳೀಯ ಮಾರುಕಟ್ಟೆಯ ಜೊತೆಗೆ ಜಪಾನ್, ಕೊರಿಯ, ಟೈವಾನ್, ಇಟಲಿ, ಮೊದಲಾದ ದೇಶಗಳಿಂದ ಕೊಳ್ಳುತ್ತವೆ. 1993-94ರಲ್ಲಿ ಈ ಕಾರ್ಖಾನೆಯಿಂದ ಉತ್ಪಾದನೆಯಾದ ಕೆಪ್ಯಾಸಿಟರುಗಳ ಸಂಖ್ಯೆ 1.23 ಕೋಟಿಗಳಷ್ಟಿದ್ದು 1.19 ಕೋಟಿ ರೂ.ಗಳ ಮೌಲ್ಯದಷ್ಟಿತ್ತು. ಇಲ್ಲಿ ಉತ್ಪಾದಿಸಲ್ಪಟ್ಟ ಕೆಪ್ಯಾಸಿಟರುಗಳನ್ನು ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತದೆ.

### ಭೊರುಕಾ ಟೆಕ್ಸ್‌ಟೈಲ್ಸ್ ನಿಯಮಿತ

ಭೊರುಕಾ ಟೆಕ್ಸ್‌ಟೈಲ್ಸ್ ನಿಯಮಿತವು ಸಿಂತೆಟಿಕ್ ಬಟ್ಟೆಯನ್ನು ತಯಾರಿಸುವುದಕ್ಕಾಗಿ 1981ರಲ್ಲಿ ಜಿಲ್ಲೆಯ ಸತ್ತೂರು ಕೈಗಾರಿಕಾ ಕ್ಷೇತ್ರದಲ್ಲಿ ಪ್ರಾರಂಭಗೊಂಡಿತು. ಇದಕ್ಕೆ ಬೇಕಾಗುವ ಪ್ರಮುಖ ಕಚ್ಚಾ ಸರಕನ್ನು ಬೊಂಬಾಯಿ ಮತ್ತು ನಾಗದಾಗಳಿಂದ ಕೊಳ್ಳಲಾಗುತ್ತದೆ. 1994ರ ಮಾರ್ಚ್ ಅಂತ್ಯದ ವೇಳೆಗೆ ಇದರಲ್ಲಿ ತೊಡಗಿಸಿದ್ದ ಬಂಡವಾಳ 2.25 ಕೋಟಿ ರೂ.ಗಳು. ಇದೇ ಕಾಲಾವಧಿಯಲ್ಲಿ ಇದು 1,480 ಮಂದಿಗೆ ಉದ್ಯೋಗವನ್ನೊದಗಿಸಿತ್ತು. 1993-94ರಲ್ಲಿ ಇದು ಸುಮಾರು 30 ಕೋಟಿ ರೂ.ಗಳ ಮೌಲ್ಯದ 2,414 ಮೆ.ಟನ್‌ಗಳಷ್ಟು ಸರಕನ್ನು ಉತ್ಪಾದಿಸಿತ್ತು. ಇದರಲ್ಲಿ ಉತ್ಪಾದಿಸಲ್ಪಡುವ ಸರಕುಗಳು ಬೊಂಬಾಯಿ, ಬಿಲ್ವಾರ, ಕಾನ್‌ಪುರ, ಅಹಮದಾಬಾದ್, ಸೂರತ್, ದೆಹಲಿ ಮೊದಲಾದವುಗಳಲ್ಲಿ ಮಾರಾಟಗೊಳ್ಳುತ್ತವೆ.

### ದಿ ಫಾರ್ಮರ್ಸ್ ಕೋ-ಆಪ್ ಸ್ಪಿನ್ನಿಂಗ್ ಮಿಲ್ಸ್

ದಿ ಫಾರ್ಮರ್ಸ್ ಕೋ ಆಪ್ ಸ್ಪಿನ್ನಿಂಗ್ ಮಿಲ್ಸ್ 1982ರಲ್ಲಿ ಗದಗ ತಾಲೂಕಿನ ಹುಲಕೋಟಿಯಲ್ಲಿ ಪ್ರಾರಂಭಗೊಂಡಿತು. ಇದಕ್ಕೆ ಬೇಕಾಗುವ ಕಚ್ಚಾ ಸರಕನ್ನು ಸದಸ್ಯರಿಂದ, ಸದಸ್ಯ ಸಹಕಾರಿ ಸಂಸ್ಥೆಗಳಿಂದ ಮತ್ತು ಇತರ ರಾಜ್ಯ ಸಹಕಾರಿ ಮಾರಾಟ ಮಂಡಳಿಗಳಿಂದ ಕೊಳ್ಳುತ್ತದೆ. 1994ರ ಮಾರ್ಚ್ ಅಂತ್ಯದ ವೇಳೆಯಲ್ಲಿ ಇದಕ್ಕೆ ತೊಡಗಿಸಿದ್ದ ಒಟ್ಟು ಬಂಡವಾಳ 437.18 ಲಕ್ಷ ರೂ.ಗಳು. ಇದೇ ವೇಳೆಯಲ್ಲಿ ಇದರಲ್ಲಿ ಕೆಲಸಮಾಡುತ್ತಿದ್ದ ಕಾರ್ಮಿಕರ ಸಂಖ್ಯೆ 680. ಇದು 1993-94ರಲ್ಲಿ 1032.89 ಲಕ್ಷ ರೂಪಾಯಿ ಮೌಲ್ಯದಷ್ಟು ಸರಕನ್ನು ಉತ್ಪಾದಿಸಿತ್ತು. ಇದರಲ್ಲಿ ಉತ್ಪಾದಿಸಲ್ಪಟ್ಟ ಸರಕು ಕರ್ನಾಟಕ ಹ್ಯಾಂಡಲೂಂ ಡೆವಲಪ್‌ಮೆಂಟ್ ಕಾರ್ಪೋರೇಷನ್, ಕರ್ನಾಟಕ ಟೆಕ್ಸ್‌ಟೈಲ್ಸ್ ಮತ್ತು ತಮಿಳುನಾಡು, ಮಹಾರಾಷ್ಟ್ರ, ಪಶ್ಚಿಮ ಬಂಗಾಳ ಹಾಗೂ ಇತರ ರಾಜ್ಯಗಳಲ್ಲಿ ಮಾರಾಟಗೊಳ್ಳುತ್ತದೆ. ದಿ ಗದಗ ಕೋ.ಆಪ್ ಟೆಕ್ಸ್‌ಟೈಲ್ಸ್ ಮಿಲ್ ನಿಯಮಿತ (1972), ಹುಲಕೋಟಿ, ದಿ ಫಾರ್ಮರ್ಸ್ ಕೋ-ಆಪ್ ಆಯಿಲ್ಸ್ ನಿಯಮಿತ (1973) ಬಿಂಕದಕಟ್ಟಿ, ಗದಗ ತಾಲೂಕು, ಶ್ರೀ ವೆಂಕಟೇಶ್ ಕೋ.ಆ.ಟೆಕ್ಸ್‌ಟೈಲ್ ಮಿಲ್, ಅಣ್ಣಿಗೇರಿ (1981) ಹಾಗೂ ಇತರ ಕೋ.ಆಪ್. ವ್ಯಾಪ್ತಿಗೊಳ್ಳಪಟ್ಟಿರುವ ಕಾರ್ಖಾನೆಗಳ ಪೂರ್ಣ ಮಾಹಿತಿಯನ್ನು ಈ ಸಂಪುಟದ ಅಧ್ಯಾಯ 6 ರಲ್ಲಿ ಒದಗಿಸಿದೆ.

## ರಾಮ್ಕೊ ಇಂಡಸ್ಟ್ರೀಸ್ ಲಿಮಿಟೆಡ್

ರಾಮ್ಕೊ ಇಂಡಸ್ಟ್ರೀಸ್ ಲಿಮಿಟೆಡ್ ಅನ್ನು ಎಸಿ ರೂಫಿಂಗ್ ಶೀಟುಗಳನ್ನು ಉತ್ಪಾದಿಸುವ ಉದ್ದೇಶದಿಂದ 1974ರಲ್ಲಿ ರಾಣೆಬೆನ್ನೂರು ತಾಲೂಕಿನ ಕರೂರ್‌ನಲ್ಲಿ ಸ್ಥಾಪಿಸುಲಾಗಿದೆ. ಇದಕ್ಕೆ ಬೇಕಾಗುವ ಸಿಮೆಂಟನ್ನು ಬಾಗಲಕೋಟೆ, ಮಳಖೇಡಗಳಿಂದಲೂ ಫ್ಲೈಯ್‌ಆಶ್‌ನ್ನು ಅಣುಶಕ್ತಿ ಕೇಂದ್ರಗಳಿಂದಲೂ ಪಡೆಯುತ್ತದೆ. ಅಸ್ಬೆಸ್ಟೋಸ್ ಫೈಬರನ್ನು ಕೆನಡ ಮತ್ತು ಅಮೇರಿಕ ಸಂಯುಕ್ತ ಸಂಸ್ಥಾನಗಳಿಂದ ಆಮದು ಮಾಡಿಕೊಳ್ಳುತ್ತದೆ. ಇದು 1994 ಮಾರ್ಚ್ ಅಂತ್ಯದ ವೇಳೆಯಲ್ಲಿ 495 ಲಕ್ಷ ರೂ.ಗಳ ಖಾಯಂ ಆಸ್ತಿ ಹೊಂದಿತ್ತು ಮತ್ತು ಇದರಲ್ಲಿ 180 ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಇದು 1993-94ರಲ್ಲಿ 1842 ಲಕ್ಷ ರೂ.ಗಳ ಮೌಲ್ಯದ 38,042 ಮೆ.ಟನ್‌ಗಳಷ್ಟು ಸರಕನ್ನು ಉತ್ಪಾದಿಸಿತ್ತು. ಇದರಲ್ಲಿ ಉತ್ಪಾದಿಸಲ್ಪಟ್ಟ ಸರಕು ಕಾರ್ಖಾನೆಯ ಮಾರಾಟ ಮಳಿಗೆಗಳ ಮೂಲಕ ಹಾಗೂ ನಿಗದಿತ ಡೀಲರುಗಳ ಮೂಲಕ ಮಾರಾಟಗೊಳ್ಳುತ್ತದೆ.

## ಕರ್ನಾಟಕ ಆಟೋಮೆಟಿವ್ ಟ್ಯೂಬ್ಸ್ ಲಿಮಿಟೆಡ್

ಕರ್ನಾಟಕ ಆಟೋಮೆಟಿವ್ ಟ್ಯೂಬ್ಸ್ ಲಿಮಿಟೆಡ್ ಕಾರ್ಖಾನೆಯು ಹುಬ್ಬಳ್ಳಿಯ ತಾರಿಹಾಳ ಕೈಗಾರಿಕಾ ಕ್ಷೇತ್ರದಲ್ಲಿ 1990ರಲ್ಲಿ ಪ್ರಾರಂಭಗೊಂಡಿತು. 1994ರ ಮಾರ್ಚ್ ಅಂತ್ಯದಲ್ಲಿ ಇದು 183 ಲಕ್ಷ ರೂ.ಗಳಷ್ಟು ಬಂಡವಾಳವನ್ನು ಹೊಂದಿದ್ದು 82 ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿತ್ತು. ಈ ಕಾರ್ಖಾನೆಯಲ್ಲಿ ಉಪಯೋಗಿಸುವ ಮುಖ್ಯ ಕಚ್ಚಾ ಸರಕಾರದ ಬ್ಯೂಟೈಲ್ ರಬ್ಬರ್ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ದೊರಕದೇ ಇರುವುದರಿಂದ ಹೊರದೇಶದಿಂದ ಆಮದು ಮಾಡಿಕೊಳ್ಳಲಾಗುತ್ತದೆ. ಉಳಿದವುಗಳನ್ನು ಸ್ಥಳೀಯ ಮಾರುಕಟ್ಟೆಯಿಂದ ಪಡೆದುಕೊಳ್ಳಲಾಗುತ್ತದೆ. 1993-94ರಲ್ಲಿ ಇದು 28 ಲಕ್ಷ ರೂಪಾಯಿ ಮೌಲ್ಯದ 9,293 ಟ್ಯೂಬ್ಸ್‌ಗಳನ್ನು ಉತ್ಪಾದಿಸಿತ್ತು. ಇದರಲ್ಲಿ ಉತ್ಪಾದಿಸಲ್ಪಟ್ಟ ಸರಕನ್ನು ಪ್ರಧಾನವಾಗಿ ರಾಜ್ಯದ ಸಾರಿಗೆ ಸಂಸ್ಥೆಗಳಿಗೂ ಉಳಿದವುಗಳನ್ನು ತೆರೆದ ಮಾರುಕಟ್ಟೆಗಳ ಮೂಲಕವೂ ಮಾರಾಟ ಮಾಡುತ್ತದೆ.

### ಕೋಷ್ಟಕ 5.6

ಧಾರವಾಡ ಜಿಲ್ಲೆಯಲ್ಲಿ 1993-94 ರಲ್ಲಿದ್ದ ಮಧ್ಯಮ ಮತ್ತು ಬೃಹತ್ ಪ್ರಮಾಣದ ಕೈಗಾರಿಕೆಗಳು ಮತ್ತು ಅವುಗಳ ವಿವರಣೆಯನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.

| ಕ್ರಮ ಸಂಖ್ಯೆ | ಘಟಕದ ಹೆಸರು ಮತ್ತು ವಿಳಾಸ | ಸಂಘಟನೆ | ಉತ್ಪಾದನೆ | ಬಂಡವಾಳ (ರೂ. ಲಕ್ಷಗಳಲ್ಲಿ) | ಉದ್ಯೋಗ ಸಂಖ್ಯೆ | ಉತ್ಪಾದನಾ ಸಾಮರ್ಥ್ಯ | |
|---|---|---|---|---|---|---|---|
| | | | | | | ನೋಂದಣಿಗೊಂಡಾಗ | ಸ್ಥಾಪಿತ |
| 1 | 2 | 3 | 4 | 5 | 6 | 7 | 8 |
| 1 | ಗದಗ ಕೋ.ಆ.ಟೆಕ್ಸ್‌ಟೈಲ್ ಮಿಲ್ ಲಿ; ಹುಲಕೋಟಿ, ತಾ. ಗದಗ (1972) | ಸಹಕಾರಿ | ನೂಲಿನ ತಯಾರಿಕೆ | 325.34 | 1,220 | 25,056 ಸ್ಪಿಂಡಲ್ಸ್ | 25,056 ಸ್ಪಿಂಡಲ್ಸ್ |
| 2 | ಮಹಾದೇವ ಟೆಕ್ಸ್‌ಟೈಲ್ ಮಿಲ್, ಹುಬ್ಬಳ್ಳಿ (1898) | ಸಹಕಾರಿ | ನೂಲುಬಟ್ಟೆ | 52.00 | 1,294 | 12,000 ” | 12,000 ಸ್ಪಿಂಡಲ್ಸ್ |
| 3 | ಫಾರ್ಮರ್ಸ್ ಕೋ.ಆ.ಸ್ಪಿನ್ನಿಂಗ್ ಮಿಲ್, ಹುಲಕೋಟ (1982) | ಸಹಕಾರಿ | ನೂಲು | 763.00 | 164 | 26.056 ” | 968 ಸ್ಪಿಂಡಲ್ಸ್ |
| 4 | ನಂದಿ ಟೆಕ್ಸ್‌ಟೈಲ್ಸ್, ನರಗುಂದ | ಸಾರ್ವಜನಿಕ ಷೇರು | ನೂಲು | 166.26 | 585 | 24,234 ” | 24,234 ಸ್ಪಿಂಡಲ್ಸ್ |
| 5 | ರೈತ ಟೆಕ್ಸ್‌ಟೈಲ್ಸ್, ಹುಲಕೋಟ | ಸಹಕಾರಿ | ನೂಲು | 234.00 | 250 | 25,000 ” | 1,367 ಸ್ಪಿಂಡಲ್ಸ್ |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 6 | ದಾವಣಗೆರೆ ಕಾಟನ್ ಮಿಲ್ಸ್, ಗದಗ (1936) | ಸಾರ್ವಜನಿಕ | ನೂಲು | 88.58 | 660 | 20,400 " | 20,400 ಸ್ಪಿಂಡಲ್ಸ್ |
| 7 | ಕೃಷ್ಣ ಸ್ಪಿನ್ನಿಂಗ್ ಮಿಲ್, ಹುಬ್ಬಳ್ಳಿ | ಪ್ರೈ.ಲಿ. | ನೂಲು | 100.00 | 250 | 12,000 " | 12,000 ಸ್ಪಿಂಡಲ್ಸ್ |
| 8 | ಫಾರ್ಮರ್ಸ್ ಆಯಿಲ್ ಸೀಡ್ ಪ್ರೋಸಸಿಂಗ್ ಸೊಸೈಟಿ, ಬಿಂಕದಕಟ್ಟಿ, ತಾ ಗದಗ (1973) | ಸಹಕಾರಿ | ಶೇಂಗಾಎಣ್ಣೆ ಮತ್ತು ಸಾಲ್ವೆಂಟ್ ಎಕ್ಸ್ಟ್ರಾಕ್ಷನ್ | 93.70 | 100 ಮೆ.ಟ | 257 ಮೆ.ಟ | 257 ಮೆ.ಟ |
| 9 | ಸಂಗಮ ಸಾಲ್ವೆಂಟ್ ಎಕ್ಸ್‌ಟ್ರಾಕ್ಷನ್ ಪ್ರೈ.ಲಿ. ಕುಮಾರ ಪಟ್ಟಣಂ ತಾ। ರಾಣೆಬೆನ್ನೂರು (1978) | | ರೈಸ್‌ಬ್ರಾನ್ ಎಕ್ಸ್‌ಟ್ರಾಕ್ಷನ್ | 56.46 | 665 | 2,700 ಮೆ.ಟ | 2,700 ಮೆ.ಟ |
| 10 | ಇಂಡಿಯನ್ ಪ್ಲೈವುಡ್ ಮ್ಯಾನು ಫ್ಯಾಕ್ಚರಿಂಗ್ ಕಂ, ಧಾರವಾಡ (1954) | ಪಬ್ಲಿಕ್.ಲಿ, | ಪ್ಲೈವುಡ್ ಬಾಕ್ಸ್ ಬೋರ್ಡ್ | 115.00 | 600 | - | - |
| 11 | ಹರಿಹರ ಪಾಲಿಫೈಬರ್ಸ್ ಲಿ, ತಾ। ರಾಣೆಬೆನ್ನೂರು (1969) | " | ರೆಯಾನ್ ಪಲ್ಪ್ | 2,622.47 | 2,462 | 48,000 ಮೆ.ಟ | 48,000 ಮೆ.ಟ |
| 12 | ಗ್ವಾಲಿಯರ್ ರೆಯಾನ್ ಸಿಲ್ಕ್ ವೀವಿಂಗ್ ಕಂ, ಕುಮಾರ ಪಟ್ಟಣಂ ರಾಣೆಬೆನ್ನೂರು | " | ಪೊಲಿಶಾಸಿಕ್ ಹೈಫಾರ್ಮಾಸರ್ ಫೈಬರ್ಸ್ | 1,217.26 | 1,279 | 38,500 " | 30.220 " |
| 13 | ಎ.ಕಿ. ಇಂಡಸ್ಟ್ರೀಸ್, ಹುಬ್ಬಳ್ಳಿ | ಪ್ರೈ.ಲಿ | ಸೆಂಟ್ರಿಫ್ಯೂಗಲ್ ಪಂಪ್ಸ್ ಬಾಲವಾಲ್‌ವ್ಸ್ | 117.88 | 602 | 21,600 | 17,600 |
| 14 | ಕಿರ್ಲೋಸ್ಕರ್ ಎಲೆಕ್ಟ್ರಿಕಲ್ಸ್ ಹುಬ್ಬಳ್ಳಿ (1966) | ಪಬ್ಲಿಕ್.ಲಿ | ಎಲೆಕ್ಟ್ರಿಕ್ ಮೋಟಾರ್ಸ್ | · 120.00 | 650 | - | - |
| 15 | ಮೈಸೂರು ಕಿರ್ಲೋಸ್ಕರ್ (ಘಟಕ 1) ಹುಬ್ಬಳ್ಳಿ (1961) | " | ಮಶಿನ್‌ಟೂಲ್ಸ್ | 602.82 | 630 | 1,800 | 1,800 |
| 16 | ಟೈವಾಕ್ ಇಂಡಸ್ಟ್ರೀಸ್, ಧಾರವಾಡ | " | ಅಲರಾಮಕ್ಲಾಕ್ಸ್ | 58.43 | 221 | 1,50,000 | 1,50,000 |
| 17 | ಭೋರುಕಾ ಟೆಕ್ಸ್‌ಟೈಲ್ಸ್ ಧಾರವಾಡ (1981) | " | ಸಿಂಥಟಿಕ್ ಯಾರ್ನ್ಸ್ | 617.47 | 1,056 | 25,000 | 13,888 |
| 18 | ಮೈಸೂರು ಕಿರ್ಲೋಸ್ಕರ್ (ಘಟಕ-2: ಸತ್ತೂರು, ಧಾರವಾಡ) | " | ಕ್ಯಾಸ್ಟ್‌ಯಾರ್ನ್ಸ್ ಕ್ಯಾಸ್ಟಿಂಗ್ಸ್ | 340.00 | 630 | 4,200 ಮೆ.ಟ | 4,200 ಮೆ.ಟ |
| 19 | ಪ್ರಿಸಿಜನ್ ಟೂಲ್ ಫ್ಯಾಕ್ಟರಿ ಸತ್ತೂರು, ಧಾರವಾಡ (1969) | ಪಬ್ಲಿಕ್ ಲಿ | ಮೈಕ್ರೊಬೋರಿಂಗ್ ಬಾರ್ಸ್ | 82.40 | 139 | 27,400 | 27,400 |
| 20 | ಕರ್ನಾಟಕ ಪಾಲಿ ಪ್ರಾಡಕ್ಟ್ಸ್ ಅಮರಗೋಳ, ಹುಬ್ಬಳ್ಳಿ (1983) | ಜಂಟಿಷೇರು | ಪಾಲಿಥಿನಿಕ್ ಲೈನಿಂಗ್ ಸೀಟ್ | 90.00 | 23 | - | - |
| 21 | ಸೌಥ್ ಸೆಂಟರ್ ರೈಲ್ವೆ ವರ್ಕ್ ಶಾಪ್, ಹುಬ್ಬಳ್ಳಿ (1888) | ಕೇಂದ್ರ ಸರ್ಕಾರ | ಲೋಕೋಮೋಟಿವ್ | 205.00 | 4320 | - | - |
| 22 | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವರ್ಕ್‌ಶಾಪ್, ಹುಬ್ಬಳ್ಳಿ (1956) | ರಾಜ್ಯ ಸರ್ಕಾರ | ಬಾಡಿಬಿಲ್ಡಿಂಗ್ | 96.49 | 1758 | - | |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 23 | ಕರ್ನಾಟಕ ರಬ್ಬರ್ಸ್, ಕಾಡನ್‌ಕೊಪ್ಪ ತಾ. ಕಲಘಟಗಿ | ಜಂಟಿವಲಯ | ರಬ್ಬರ್‌ಕಾಂಪೊನೆಂಟ್ಸ್ | 135.00 | 71 | - | - |
| 24 | ನ್ಯೂಗವರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ, ರಾಯಾಪುರ, ಧಾರವಾಡ (1988) | ಸರ್ಕಾರಿಸ್ವಾಮ್ಯ | ಎಲೆಕ್ಟ್ರಿಕ್ ಮೋಟಾರ್ಸ್ | 125.00 | 93 | - | - |
| 25 | ಹಿಂದೂಸ್ಥಾನ್ ಪೆಟ್ರೋಲಿಯಂ ಕಾರ್ಪೊರೇಷನ್, ಬೇಲೂರು, ಧಾರವಾಡ | ಕೇಂದ್ರ ಸರ್ಕಾರ | ಲಿಕ್ವಿಡ್‌ಗ್ಯಾಸ್ | 150.00 | 150 | - | - |
| 26 | ಕರ್ನಾಟಕ ಮಿಲ್ಕ್ ಫೆಡರೇಷನ್ ಲಕಮನಹಳ್ಳಿ, ಧಾರವಾಡ (1984) | ಸಹಕಾರಿ ಫೆಡರೇಷನ್ | ಹಾಲಿನ ಉತ್ಪಾದನೆ | 740.00 | 130 | - | - |
| 27 | ಸ್ಟಾರ್‌ವಾಕ್‌ಮನ್, ಧಾರವಾಡ | ಪಬ್ಲಿಕ್ ಲಿ; | ಟೆಸ್ಟರ್ಸ್ | 106.00 | 50 | 180 | 100 |
| 28 | ಅಸೋಸಿಯೇಟ್ಸ್ ಸ್ಪಿಂಡಲ್ಸ್, ಕೆಲಗೇರಿ, ಧಾರವಾಡ | ” | ಟೆಕ್ಸ್‌ಟೈಲ್ಸ್ ಸ್ಪೇರ್ಸ್ | 150.00 | - | - | - |
| 29 | ಸದರ್ನ್ ಎಸ್‌ಬೆಸ್ಟೋಸ್ ಸಿಮೆಂಟ್ ಕಂ. ಕರೂರು, ತಾ. ರಾಣೆಬೆನ್ನೂರು | ಪಬ್ಲಿಕ್ ಲಿ; | ರೂಫಿಂಗ್ ಟೈಲ್ಸ್ | 150.70 | 2452 | 48,000 | 48,000 |
| 30 | ತುಂಗಭದ್ರಾ ಕೋ.ಅ.ಸ್ಪಿನ್ನಿಂಗ್ ಮಿಲ್, ರಾಣೆಬೆನ್ನೂರು | ಸಹಕಾರಿ | ನೂಲು | 1050.00 | 1000 | - | - |
| 31 | ಕರ್ನಾಟಕ ಸಕ್ಕರೆ ಕಾರ್ಖಾನೆ, ಸಂಗೂರು, ತಾ: ಹಾವೇರಿ | ” | ಸಕ್ಕರೆ | 507.42 | 100 | - | - |
| 32 | ಮುರಡೇಶ್ವರ ಸಿರ್‍ಯಾಮಿಕ್ಸ್, ಹುಬ್ಬಳ್ಳಿ | ಸಾರ್ವಜನಿಕ | ಗ್ಲೇಜಫ್ಲೋರಿಂಗ್ ಟೈಲ್ಸ್ | 1450.00 | 200 | - | - |
| 33 | ಜೆ.ಎಚ್.ಅಸೋಸಿಯೇಟ್ಸ್, ಬಾಲನಮಟ್ಟಿ ತಾ:ಕಲಘಟಗಿ(1989) | ಪಬ್ಲಿಕ್ ಲಿ. - | ಕೆಪ್ಯಾಸಿಟರ್ಸ್ | 160.00 | 50 | - | - |
| 34 | ಕಿರ್ಲೋಸ್ಕರ್ ವಾರ್ನರ್ಸ್, ತಾರಿಹಾಳ, ಹುಬ್ಬಳ್ಳಿ | ” | ಸಿ ಎನ್‌ಜಿ ಟರ್ನಿಂಗ್ ಮೆಶಿನ್ | 570.00 | 50 | - | - |
| 35 | ಗದಗ ಕೋ.ಆಯಿಲ್ಸ್, ಗದಗ (1959) | ಸಹಕಾರಿ | ಹತ್ತಿ ಕಾಳು ಎಣ್ಣೆ | 141.00 | 122 | - | - |
| 36 | ಫೈನ್ ಬ್ಲಾಂಕಿಂಗ್ ಪ್ರೈಲಿ., ಹುಬ್ಬಳ್ಳಿ | ಪ್ರೈ.ಲಿ. | ಬಿಡಿಭಾಗ | 92.00 | 75 | - | - |
| 37 | ಪ್ರಿಂಟರ್ಸ್ ಮೈಸೂರು ಲಿ, ಬೇಲೂರು (1990) | ” | ವರ್ತಮಾನ ಪತ್ರಿಕೆ | 150.00 | 50 | - | - |
| 38 | ಗಾರ್ಡನ್ ಸಿಟಿ ಇಂಜನಿಯರ್ಸ್, ಹುಬ್ಬಳ್ಳಿ | ” - | ಇಂಡಸ್ಟ್ರಿಯಲ್ಸ್ ಸಿಯಾಮಿಕ್ಸ್ ಕಾಂಪೊನೆಂಟ್ಸ್ | 150.00 | 50 | - | - |
| 39 | ವೆಂಕಟೇಶ್ವರ ರೋಲರ್ ಫ್ಲೋರ್ ಮಿಲ್, ನವಲಗುಂದ | ಪ್ರೈ.ಲಿ. | ರವಾಹಿಟ್ಟು | 150.00 | 50 | - | - |
| 40 | ಕರ್ನಾಟಕ ಆಟೋಮೆಟಿವ್ ಟ್ಯೂಬ್ಸ್, ಹುಬ್ಬಳ್ಳಿ (1990) | ಸರ್ಕಾರಿ ಭಾಗಿತ್ವ | ಬ್ಯೂಟೈಲ್ಸ್ ರಬ್ಬರ್ ಟ್ಯೂಬ್ | 105.00 | 140 | - | - |
| 41 | ಸೋಮೇಶ್ವರ ಸ್ಪಿನ್ನಿಂಗ್ ಮಿಲ್, ಲಕ್ಷ್ಮೇಶ್ವರ, ತಾ. ಶಿರಹಟ್ಟಿ | ಸಹಕಾರ | ನೂಲು | 1050.00 | 1200 | - | - |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 42 | ಕಾನಜಿ ದೇವಜಿ ಆಯಿಲ್ ರೀಫೈನರಿ, ಹುಬ್ಬಳ್ಳಿ | ಪ್ರೈ.ಲಿ. | ರೀಫೈನ್ಡ್ ಆಯಿಲ್ | 98.00 | 50 | - | - |
| 43 | ಕುಂತಲ್‌ಗ್ರೆನೈಟ್ಸ್, ಬೇಲೂರು | ” | ಗ್ರೆನೈಟ್ ಟೈಲ್ಸ್ | 248.00 | 44 | - | - |
| 44 | ವೆಂಕಟೇಶ್ ಕೋ.ಆ.ಟೆಕ್ಸ್‌ಟೈಲ್ಸ್ ಮಿಲ್, ಅಣ್ಣಿಗೇರಿ | ಸಹಕಾರ | ಹತ್ತಿನೂಲು | 1050.00 | 1200 | - | - |
| 45 | ಲಿಪ್ಟನ್ ಇಂಡಿಯಾ ಲಿ. ಬೇಲೂರು | ಪಬ್ಲಿಕ್ ಲಿ. | ಚಹಾ ಪ್ಯಾಕಿಂಗ್ | 300.00 | 150 | - | - |
| 46 | ಸ್ಪಿಷನ್ ಕೆಮಿಕಲ್ಸ್, ಬೇಲೂರು, ಧಾರವಾಡ | ” | ಡಿಟರ್ಜಂಟ್ ಪೌಡರ್ | 203.75 | 50 | - | - |
| 47 | ಬ್ರೂಕ್ ಬಾಂಡ್ ಪ್ರೈಲಿ, ಬೇಲೂರು | ಪ್ರೈ.ಲಿ. | ಚಹಾಪುಡಿ ಮಿಶ್ರಣ | 158.81 | 22 | - | - |

ಆಧಾರ: 1993-94ನೇ ಸಾಲಿನ ಪ್ರಗತಿ ವರದಿ, ಜಿಲ್ಲಾ ಕೈಗಾರಿಕಾ ಕೇಂದ್ರ, ಧಾರವಾಡ.

## ಕೋಷ್ಟಕ 5.7

ಧಾರವಾಡ ಜಿಲ್ಲೆಯಲ್ಲಿ 1993-94 ರಲ್ಲಿ ಸ್ಥಾಪನೆಯ ವಿವಿಧ ಹಂತದಲ್ಲಿದ್ದ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ವಿವರ.

| ಕ್ರ.ಸಂ | ಕೈಗಾರಿಕೆಯ ಹೆಸರು | ಉತ್ಪಾದನೆ | ಬಂಡವಾಳ (ರೂ. ಲಕ್ಷಗಳಲ್ಲಿ) | ಉದ್ಯೋಗಾವಕಾಶ |
|---|---|---|---|---|
| 1 | ಕರ್ನಾಟಕ ಬೆಲ್ಲದ್ ಆಟೋಮೊಬೈಲ್ಸ್, ಜೋಡಿಹಳ್ಳಿ, ತಾ: ಕಲಘಟಗಿ | ಆಟೋಮೊಬೈಲ್ ಪಾರ್ಟ್ಸ್ | 200.00 | 50 |
| 2 | ಸ್ಟಾರ್ ಆಗ್ರೊ ಇಂಡಸ್ಟ್ರೀಸ್, ಕೆಲಗೇರಿ, ಧಾರವಾಡ | ಡಿಸ್ಟಿಕಲ್ಸ್, ಆಗ್ರೋ ಹಾಗೂ ಎನಿಮಲ್‌ವೇಸ್ಟ್ ಫುಡ್ಸ್ | 475.00 | 150 |
| 3 | ಸಂಜಯ ಕೋ.ಆಪರೇಟಿವ್ ಸ್ಪಿನ್ನಿಂಗ್ ಮಿಲ್ಸ್, ಧಾರವಾಡ | ನೂಲು | 1050.00 | 1200 |
| 4 | ಕೆ. ಜೀವನಶೆಟ್ಟಿ, ಅಶೋಕ ನಗರ, ಹುಬ್ಬಳ್ಳಿ | ಸಿರಾಮಿಕ್ಸ್, ಗ್ರಾನೈಟ್ ಟೈಲ್ಸ್ | 450.00 | 150 |
| 5 | ರುರೀಜ ಟೆಕ್ನಿಕಲ್ ಎಂಟರ್ ಪ್ರೈಜಸ್ ಪ್ರೈ.ಲಿ; ಹುಬ್ಬಳ್ಳಿ | (ತಿಳಿದಿಲ್ಲ) | 200.00 | 50 |
| 6 | ಲಂಬೋದರ ಗ್ರೆನೈಟ್ಸ್, ಬೇಲೂರು ಧಾರವಾಡ | ಗ್ರೇನೈಟ್ಸ್ | 300.00 | 25 |
| 7 | ಪೆರೂ ಕಾಂಕ್ರಿಟ್ ಕಂ. (ಸ್ಟೀಲ್) ಇಂಡಿಯಾ ಪ್ರೈ.ಲಿ; ಹುಬ್ಬಳ್ಳಿ | ಮಿನಿಸ್ಟೀಲ್ ಪ್ಲಾಂಟ್ | 300.00 | 50 |
| 8 | ಸ್ಪಿವನ್ ಪಾಲ್ಯರ್ಸ್ (ಇಂಡಿಯಾ) ಪ್ರೈ.ಲಿ, ಹುಬ್ಬಳ್ಳಿ | ಸಾಲ್ವೆಂಟ್ ಎಕ್ಸ್‌ಟ್ರಾಕ್ಷನ್ ಮೆಶಿನ್ | 200.00 | 500 |
| 9 | ನಂದಿ ಸಾಲವರ್ಸ್ ಸಾಲ್ವೆಂಟ್ಸ್, ಬೇಲೂರು | ಸಾಲವೆಂಟ್ಸ್, ಎಕ್ಸ್‌ಟ್ರಾಕ್ಷನ್ ಎಡಿಬಲ್ ಆಯಿಲ್ | 700.00 | 150 |

### ಸಣ್ಣ ಪ್ರಮಾಣದ ಕೈಗಾರಿಕೆಗಳು

ಧಾರವಾಡ ಜಿಲ್ಲೆಯಲ್ಲಿ 1994ರ ಮಾರ್ಚ್ ಅಂತ್ಯದ ವೇಳೆಯವರೆಗೆ ನೋಂದಣಿಗೊಂಡ ಒಟ್ಟು ಸಣ್ಣ ಪ್ರಮಾಣದ ಕೈಗಾರಿಕೆಗಳ ಸಂಖ್ಯೆ 13,826. ಇವುಗಳಲ್ಲಿ ಒಟ್ಟು 9,436.89 ಲಕ್ಷ ರೂಪಾಯಿ ಬಂಡವಾಳ ಹೂಡಲಾಗಿದ್ದು 76,441 ಮಂದಿಗೆ ಉದ್ಯೋಗ ಕಲ್ಪಿಸಲಾಗಿದೆ.

**ಕೋಷ್ಟಕ 5.8**

ಜಿಲ್ಲೆಯಲ್ಲಿ 31.3.94 ರಲ್ಲಿದ್ದ ತಾಲೂಕುವಾರು ಸಣ್ಣ ಪ್ರಮಾಣದ ಕೈಗಾರಿಕೆಗಳು.

| ಕ್ರ.ಸಂ. | ತಾಲೂಕು | ಘಟಕ ಸಂಖ್ಯೆ | ಕ್ರ.ಸಂ. | ತಾಲೂಕು | ಘಟಕ ಸಂಖ್ಯೆ | ಕ್ರ.ಸಂ. | ತಾಲೂಕು | ಘಟಕ ಸಂಖ್ಯೆ |
|---|---|---|---|---|---|---|---|---|
| 1 | ಧಾರವಾಡ | 1924 | 7 | ರೋಣ | 596 | 13 | ಸವಣೂರು | 407 |
| 2 | ಹುಬ್ಬಳ್ಳಿ | 3342 | 8 | ನರಗುಂದ | 314 | 14 | ಶಿಗ್ಗಾಂವಿ | 395 |
| 3 | ಕಲಘಟಗಿ | 377 | 9 | ಹಾವೇರಿ | 861 | 15 | ಶಿರಹಟ್ಟಿ | 552 |
| 4 | ನವಲಗುಂದ | 292 | 10 | ರಾಣೆಬೆನ್ನೂರು | 1125 | 16 | ಹಾನಗಲ್ | 377 |
| 5 | ಗದಗ | 1874 | 11 | ಬ್ಯಾಡಗಿ | 310 | 17 | ಕುಂದಗೋಳ | 280 |
| 6 | ಮುಂಡರಗಿ | 405 | 12 | ಹಿರೇಕೇರೂರು | 395 | | | |
| | | | | | | | ಒಟ್ಟು | 13,826 |

ಆಧಾರ: ಆ್ಯಕ್ಷನ್ ಪ್ಲ್ಯಾನ್, 1993-94 ರ ಜಿಲ್ಲಾ ಪ್ರಗತಿಚಿತ್ರ

### ಸಣ್ಣ ಪ್ರಮಾಣದ ಕೈಗಾರಿಕೆಗಳ ಪ್ರಕಾರಗಳು:

ಜಿಲ್ಲೆಯಲ್ಲಿರುವ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಪ್ರಧಾನವಾಗಿ ಎಂಟು ಪ್ರಕಾರಗಳಾಗಿ ವಿಂಗಡಿಸಬಹುದು.

**1. ಕೃಷಿ ಆಧಾರಿತ ಕೈಗಾರಿಕೆಗಳು:** ಜಿಲ್ಲೆಯಲ್ಲಿ ಕೃಷಿ ಆಧಾರಿತ ಕೈಗಾರಿಕೆಗಳ ವ್ಯಾಪ್ತಿಗೆ ಹತ್ತಿ ಗಿರಣಿ, ಅಕ್ಕಿಗಿರಣಿ, ಎಣ್ಣೆ ತೆಗೆಯುವುದು, ಮೆಣಸಿನ ಪುಡಿ ತಯಾರಿಕೆ, ಎಣ್ಣೆ ಬೀಜಗಳ ಸಂಸ್ಕರಣೆ, ಬೇಕರಿ ಪದಾರ್ಥಗಳು ಮೊದಲಾದ ಉತ್ಪಾದನೆಗಳು ಸೇರಿರುತ್ತವೆ. 1988 ರ ಏಪ್ರಿಲ್ ಆದಿಭಾಗದಿಂದ 1994 ರ ಮಾರ್ಚ್ ಅಂತ್ಯದವೇಳೆಗೆ ಜಿಲ್ಲೆಯಲ್ಲಿ ಸುಮಾರು 1,046 ಕೃಷಿ ಆಧಾರಿತ ಕೈಗಾರಿಕೆಗಳು ನೋಂದಣಿಗೊಂಡಿದ್ದು 4,588 ಮಂದಿಗೆ ಉದ್ಯೋಗವನ್ನು ಒದಗಿಸಿದ್ದವು. ಇವುಗಳಲ್ಲಿ ತೊಡಗಿಸಲಾಗಿದ್ದ ಬಂಡವಾಳ ಸುಮಾರು 1420.80 ಲಕ್ಷ ರೂ.ಗಳು. ಇವುಗಳ ಜೊತೆಗೆ ಪ್ರತಿಶತ 10 ರಷ್ಟು ಸಣ್ಣ ಪ್ರಮಾಣದ ಕೈಗಾರಿಕೆಗಳು ನೋಂದಣಿಗೊಳ್ಳದೆ ಕಾರ್ಯನಿರ್ವಹಿಸುತ್ತವೆಯೆಂದು ಅಂದಾಜು ಮಾಡಲಾಗಿದೆ.

**2. ಅರಣ್ಯ ಆಧಾರಿತ ಕೈಗಾರಿಕೆಗಳು:** ಜಿಲ್ಲೆಯಲ್ಲಿ ಅರಣ್ಯ ಆಧಾರಿತ ಕೈಗಾರಿಕೆಗಳ ವ್ಯಾಪ್ತಿಗೆ ಗೃಹೋಪಕರಣಗಳು, ಮರದ ಪೆಟ್ಟಿಗೆಗಳು, ಕೃಷಿ ಉಪಕರಣಗಳು ಮೊದಲಾದ ಸಣ್ಣ ಪ್ರಮಾಣದ ಕೈಗಾರಿಕೆಗಳು ಸೇರಿರುತ್ತವೆ. 1988 ರ ಏಪ್ರಿಲ್ ಆದಿಭಾಗದಿಂದ 1994 ರ ಮಾರ್ಚ್ ಅಂತ್ಯದ ವೇಳೆಗೆ ಜಿಲ್ಲೆಯಲ್ಲಿ ನೋಂದಣಿಗೊಂಡ 495 ಅರಣ್ಯ ಆಧಾರಿತ ಸಣ್ಣ ಪ್ರಮಾಣದ ಕೈಗಾರಿಕೆಗಳಿದ್ದು 2,012 ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಇವುಗಳಲ್ಲಿ ತೊಡಗಿಸಿದ್ದ ಬಂಡವಾಳ 73.84 ಲಕ್ಷ ರೂ.ಗಳು. ಇವುಗಳಲ್ಲದೆ ಸುಮಾರು ಪ್ರತಿಶತ 10 ರಷ್ಟು ಸಣ್ಣ ಪ್ರಮಾಣದ ಕೈಗಾರಿಕೆಗಳು ಜಿಲ್ಲೆಯಲ್ಲಿ ನೋಂದಣಿಗೊಳ್ಳದೆ ಕಾರ್ಯನಿರ್ವಹಿಸುತ್ತಿದ್ದವೆಂದು ಅಂದಾಜು ಮಾಡಲಾಗಿದೆ.

**3. ಜಾನುವಾರು ಆಧಾರಿತ ಕೈಗಾರಿಕೆಗಳು:** ಜಿಲ್ಲೆಯಲ್ಲಿ ಚರ್ಮ ತಯಾರಿಕೆ, ಚರ್ಮಹದ ಮಾಡುವುದು, ಜಾನುವಾರು ಆಹಾರ ಸಂಸ್ಕರಣ, ಕ್ಷೀರೋತ್ಪನ್ನಗಳು, ಮೂಳೆಗೊಬ್ಬರ, ಮೂಳೆ ಆಹಾರ ಮೊದಲಾದವುಗಳ ಉತ್ಪಾದನೆಯು ಸಣ್ಣ ಪ್ರಮಾಣದ ಜಾನುವಾರು ಆಧಾರಿತ ಕೈಗಾರಿಕೆಗಳ ವ್ಯಾಪ್ತಿಗೆ ಸೇರಿದವುಗಳಾಗಿವೆ. 1988 ರ ಏಪ್ರಿಲ್ ಮೊದಲನೇಯ ದಿನಾಂಕದಿಂದ 1994 ಮಾರ್ಚ್ ಅಂತ್ಯದವೇಳೆಗೆ ಜಿಲ್ಲೆಯಲ್ಲಿ ಸುಮಾರು 590 ನೋಂದಣಿಗೊಂಡ ಜಾನುವಾರು ಆಧಾರಿತ ಸಣ್ಣ ಪ್ರಮಾಣದ ಕೈಗಾರಿಕೆಗಳಿದ್ದು 1,968 ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಇವುಗಳಲ್ಲಿ ತೊಡಗಿಸಿದ್ದ ಬಂಡವಾಳ 22.56 ಲಕ್ಷ ರೂ.ಗಳು. ಇವುಗಳಲ್ಲದೆ ಸುಮಾರು ಶೇ.10 ರಷ್ಟು ಸಣ್ಣ ಪ್ರಮಾಣದ ಕೈಗಾರಿಕೆಗಳು ನೋಂದಣಿಗೊಳ್ಳದೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ.

**4. ಗಿರಣಿ ಆಧಾರಿತ ಕೈಗಾರಿಕೆಗಳು:** ಜಿಲ್ಲೆಯಲ್ಲಿ ಗಿರಣಿ ಆಧಾರಿತ ಕೈಗಾರಿಕೆಗಳ ವ್ಯಾಪ್ತಿಗೆ ಹತ್ತಿಗಿರಣಿಗಳು, ಕೈಮಗ್ಗಗಳು, ಕೈಯಿಂದ ನೂಲು ತೆಗೆಯುವುದು, ಹತ್ತಿ ಮತ್ತು ಉಣ್ಣೆ ಬಟ್ಟೆಯನ್ನು ತಯಾರಿಸುವುದು ಮೊದಲಾದವುಗಳು ಸೇರಿರುತ್ತವೆ. 1988 ರ ಏಪ್ರಿಲ್ ಮೊದಲನೇಯ ದಿನಾಂಕದಿಂದ 1994 ರ ಮಾರ್ಚ್ ಅಂತ್ಯದ ವೇಳೆಗೆ ಜಿಲ್ಲೆಯಲ್ಲಿ 1,433 ನೋಂದಣಿಗೊಂಡ ಸಣ್ಣ ಪ್ರಮಾಣದ ಗಿರಣಿ ಆಧಾರಿತ ಕೈಗಾರಿಕೆಗಳಿದ್ದು ಸುಮಾರು 7,803 ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಇವುಗಳಲ್ಲಿ ತೊಡಗಿಸಿದ್ದ ಬಂಡವಾಳ 821.64 ಲಕ್ಷ ರೂ.ಗಳು. ಇವುಗಳಲ್ಲದೆ ನೋಂದಣಿಗೊಳ್ಳದೆ ಇರುವ ಸುಮಾರು ಶೇ.10 ರಷ್ಟು ಸಣ್ಣ ಪ್ರಮಾಣದ ಕೈಗಾರಿಕೆಗಳು ಕಾರ್ಯ ನಿರ್ವಹಿಸುತ್ತಿದ್ದವೆಂದು ಅಂದಾಜು ಮಾಡಲಾಗಿದೆ.

**5. ಖನಿಜ ಆಧಾರಿತ ಕೈಗಾರಿಕೆಗಳು:** ಶಿಲೆಯನ್ನು ಪಾಲಿಷ್ ಮಾಡುವುದು, ಇಟ್ಟಿಗೆ ಮತ್ತು ಹೆಂಚು ತಯಾರಿಸುವುದು, ಸುಣ್ಣ ಸುಡುವುದು ಮೊದಲಾದವುಗಳು ಜಿಲ್ಲೆಯಲ್ಲಿನ ಖನಿಜ ಆಧಾರಿತ ಕೈಗಾರಿಕೆಗಳ ವ್ಯಾಪ್ತಿಗೆ ಸೇರಿದವುಗಳಾಗಿವೆ. 1988 ರ ಏಪ್ರಿಲ್ ಮೊದಲನೆಯ ದಿನಾಂಕದಿಂದ 1994 ರ ಮಾರ್ಚ್ ಅಂತ್ಯದ ವೇಳೆಗೆ 21 ನೋಂದಣಿಗೊಂಡ ಖನಿಜ ಆಧಾರಿತ ಸಣ್ಣ ಪ್ರಮಾಣದ ಕೈಗಾರಿಕೆಗಳಿದ್ದು ಸುಮಾರು 151 ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಇವುಗಳಲ್ಲಿ ತೊಡಗಿಸಿದ್ದ ಬಂಡವಾಳ 24.39 ಲಕ್ಷ ರೂ.ಗಳು.

**6. ಬೇಡಿಕೆ ಆಧಾರಿತ ಕೈಗಾರಿಕೆಗಳು:** ಬೀಡಿ ತಯಾರಿಕೆ, ಕಮ್ಮಾರಿಕೆ, ಬಡಗಿತನ, ತಾಮ್ರ ಮತ್ತು ಹಿತ್ತಾಳೆ ಪಾತ್ರೆಗಳ ತಯಾರಿಕೆ, ಮೊದಲಾದವುಗಳು ಜಿಲ್ಲೆಯ ಬೇಡಿಕೆ ಆಧಾರಿತ ಸಣ್ಣ ಪ್ರಮಾಣದ ಕೈಗಾರಿಕೆಗಳ ವ್ಯಾಪ್ತಿಗೊಳಪಡುತ್ತವೆ. 1988 ರ ಏಪ್ರಿಲ್ ಮೊದಲನೆಯ ದಿನಾಂಕದಿಂದ 1994 ರ ಮಾರ್ಚ್ ಅಂತ್ಯದವರೆಗೆ ಜಿಲ್ಲೆಯಲ್ಲಿ 468 ಬೇಡಿಕೆ ಆಧಾರಿತ ಕೈಗಾರಿಕೆಗಳು ನೋಂದಣಿಗೊಂಡಿದ್ದು 2,949 ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಇವುಗಳಲ್ಲಿ ತೊಡಗಿಸಿದ್ದ ಬಂಡವಾಳ 891.69 ಲಕ್ಷ ರೂ.ಗಳು. ಇವುಗಳ ಜೊತೆಗೆ ಸುಮಾರು ಶೇ.10 ರಷ್ಟು ಸಣ್ಣ ಪ್ರಮಾಣದ ಕೈಗಾರಿಕೆಗಳು ನೋಂದಣಿಗೊಳ್ಳದೆ ಕಾರ್ಯ ನಿರ್ವಹಿಸುತ್ತಿರುವುದಾಗಿ ಅಂದಾಜು ಮಾಡಲಾಗಿದೆ.

**7. ರಾಸಾಯನಿಕ ಆಧಾರಿತ ಕೈಗಾರಿಕೆಗಳು:** ಸೋಪು, ಅಗರಬತ್ತಿ, ಪೈಂಟ್, ಮೇಣದಬತ್ತಿ, ಮಸಿ (ಇಂಕ್), ಹಲ್ಲುಪುಡಿ, ಐಸ್‌ಕ್ರೀಂ, ಪಾಲಿಥೀನ್ ಚೀಲ, ಪಿ.ವಿ.ಸಿ.. ಪೈಪ್‌ಗಳು ಮೊದಲಾದವುಗಳು ಜಿಲ್ಲೆಯಲ್ಲಿನ ಸಣ್ಣ ಪ್ರಮಾಣದ ರಾಸಾಯನಿಕ ಮತ್ತು ಪ್ಲಾಸ್ಟಿಕ್ ಆಧಾರಿತ ಕೈಗಾರಿಕೆಗಳ ವ್ಯಾಪ್ತಿಗೆ ಸೇರಿರುತ್ತವೆ. ಜಿಲ್ಲೆಯಲ್ಲಿ 1988 ರ ಏಪ್ರಿಲ್ ಮೊದಲನೆಯ ದಿನಾಂಕದಿಂದ 1994 ರ ಮಾರ್ಚ್ ಅಂತ್ಯದ ವೇಳೆಯಲ್ಲಿ 267 ನೋಂದಣಿಗೊಂಡ ಸಣ್ಣ ಪ್ರಮಾಣದ ರಾಸಾಯನಿಕ ಕೈಗಾರಿಕೆಗಳಿದ್ದು 1,344 ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಇವುಗಳಲ್ಲಿ ತೊಡಗಿಸಿದ್ದ ಬಂಡವಾಳ 439.78 ಲಕ್ಷ ರೂ.ಗಳು.

**8. ಇತರ ಕೈಗಾರಿಕೆಗಳು:** ಜಿಲ್ಲೆಯಲ್ಲಿ ಪ್ಲಾಸ್ಟಿಕ್ ಗುಂಡಿಗಳು, ಮುದ್ರಣಾಲಯಗಳು, ದೂರದರ್ಶಕ ವಿಭಾಗಗಳ ದುರಸ್ತಿ, ಆಸ್ಪತ್ರೆಗೆ ಬೇಕಾದ ವಸ್ತುಗಳ ಉತ್ಪಾದನೆ, ಮಾದಕ ಪೇಯಗಳು, ಟೈರ್ ರೀಟ್ರೇಡಿಂಗ್, ಐಸ್‌ಕ್ಯಾಂಡಿ, ಫೋಟೋಕಾಪಿ ತಯಾರಿಕೆ, ಸೌರ ಒಲೆ, ಸುಗಂಧ ಅಡಿಕೆ ಮೊದಲಾದವುಗಳು ಇತರೆ ಸಣ್ಣ ಪ್ರಮಾಣದ ಕೈಗಾರಿಕೆಗಳ ವ್ಯಾಪ್ತಿಗೊಳಪಟ್ಟಿವೆ. 1988 ರ ಏಪ್ರಿಲ್ ಮೊದಲನೆಯ ದಿನಾಂಕದಿಂದ 1994 ರ ಮಾರ್ಚ್ ಅಂತ್ಯದ ವೇಳೆಗೆ 1,248 ನೋಂದಣಿಗೊಂಡ ಸಣ್ಣ ಪ್ರಮಾಣದ ಇತರೆ ಕೈಗಾರಿಕೆಗಳಿದ್ದು 5,941 ಮಂದಿಗೆ ಉದ್ಯೋಗವನ್ನೊದಗಿಸಿದ್ದವು. ಇವುಗಳಲ್ಲಿ ತೊಡಗಿಸಿದ್ದ ಬಂಡವಾಳ 1108.87 ಲಕ್ಷ ರೂ.ಗಳು.

ಗದಗ ಪಟ್ಟಣವು ಮುದ್ರಣದ ಉದ್ಯಮದಲ್ಲಿ ತೀರ ಮುಂದಿದೆ. ಇವುಗಳಲ್ಲದೆ ಪ್ರತಿಶತ ಸುಮಾರು 10 ರಷ್ಟು ಸಣ್ಣ ಪ್ರಮಾಣದ ಇತರ ಕೈಗಾರಿಕೆಗಳು ನೋಂದಣಿಗೊಳ್ಳದೆ ಕಾರ್ಯನಿರ್ವಹಿಸುತ್ತಿವೆಯೆಂದು ಅಂದಾಜು ಮಾಡಲಾಗಿದೆ.

## ಖಾದಿ ಮತ್ತು ಗ್ರಾಮೋದ್ಯೋಗ

ಖಾದಿ ಮತ್ತು ಗ್ರಾಮೋದ್ಯೋಗವು ಗ್ರಾಮೀಣ ಕಸಬುದಾರರ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಉತ್ಕರ್ಷವನ್ನು ಸಾಧಿಸಿದೆ. ಇದು ಗ್ರಾಮಾಂತರ ಪ್ರದೇಶದ ಕಸಬುದಾರರಿಗೆ ಉದ್ಯೋಗವನ್ನೊದಗಿಸುವುದರ ಜೊತೆಗೆ ತಮ್ಮ ಆನುವಂಶಿಕ ಉದ್ದಿಮೆಯನ್ನು ತೊರೆದು ಪಟ್ಟಣಗಳಿಗೆ ವಲಸೆ ಹೋಗುವುದನ್ನು ತಪ್ಪಿಸಿದೆ. ಇವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ಮಹಾತ್ಮಾಗಾಂಧೀಜಿಯವರು ಖಾದಿ ಮತ್ತು ಗ್ರಾಮೋದ್ಯೋಗಗಳ ಪುನರುತ್ಥಾನಕ್ಕೆ ರಾಷ್ಟ್ರೀಯ ಆಂದೋಲನವನ್ನು ಆರಂಭಿಸಿದರು. ಸ್ವಾತಂತ್ರ್ಯ ಚಳವಳಿಯು ಸ್ವದೇಶೀ ಚಳುವಳಿ, ಖಾದಿ ನೂಲು ಮತ್ತು ನೇಯ್ಗೆಗೆ ಹೆಚ್ಚು ಒತ್ತು ಕೊಟ್ಟಿತ್ತು. ಖಾದಿಯ ವ್ಯಾಪ್ತಿಗೆ ಹತ್ತಿಖಾದಿ, ಉಣ್ಣೆಖಾದಿ, ರೇಷ್ಮೆಖಾದಿ ಮತ್ತು ಮಸ್ಲಿನ್ ಖಾದಿ ಸೇರುತ್ತವೆ. ಗ್ರಾಮೋದ್ಯೋಗದ ವ್ಯಾಪ್ತಿಗೆ ಖನಿಜಾಧಾರಿತ ಉದ್ದಿಮೆಗಳು, ಅರಣ್ಯ ಆಧಾರಿತ ಉದ್ದಿಮಗಳು, ವ್ಯವಸಾಯಾಧಾರಿತ ಉದ್ದಿಮೆಗಳು, ಪಾಲಿಮರ್ ಮತ್ತು ರಾಸಾಯನಿಕಾಧಾರಿತ ಉದ್ದಿಮೆಗಳು ಇಂಜಿನಿಯರ್ ಹಾಗೂ ಅಸಾಂಪ್ರದಾಯಿಕ ಶಕ್ತಿ ಬಳಕೆ, ವಸ್ತ್ರೋದ್ಯಮ, ಸೇವಾ ಉದ್ದಿಮೆಗಳು, ಎಲೆಕ್ಟ್ರಾನಿಕ್ ಉದ್ದಿಮೆಗಳು ಮೊದಲಾದವುಗಳು ಸೇರುತ್ತವೆ.

1919ನೇ ಇಸ್ವಿಯ ಡಿಸೆಂಬರ್‌ನಲ್ಲಿ ಅಮೃತಸರದಲ್ಲಿ ಸೇರಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವದೇಶೀಯ ಅಂಗವಾಗಿ ಕೈನೂಲಿಗೂ ಕೈಮಗ್ಗದ ಮೇಲೆ ನೇಯ್ದ ಬಟ್ಟೆಗೂ ಪ್ರೋತ್ಸಾಹ ಕೊಡಬೇಕೆಂದು ಠರಾವು ಪಾಸಾಯಿತು. 1921ನೇ ಇಸ್ವಿಯಲ್ಲಿ ದೇಶದ ಕೆಲವು ಕಡೆಗಳಲ್ಲಿ ಖಾದಿ ಕೆಲಸ ಪ್ರಾರಂಭವಾಯಿತು. 1924 ರಲ್ಲಿ ಜರುಗಿದ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಕಾಲಕ್ಕೆ ಗಾಂಧೀಜಿಯವರ ಕುಟೀರವನ್ನು ಸಂಪೂರ್ಣವಾಗಿ ಖಾದಿಯಿಂದಲೇ ರಚಿಸಲಾಗಿತ್ತು.

ಪ್ರಾರಂಭದಲ್ಲಿ ಖಾದಿ ಉತ್ಪತ್ತಿ ಮತ್ತು ಮಾರಾಟದ ಕೆಲಸವು ಕಾಂಗ್ರೆಸ್ ಕಾರ್ಯ ಸಮಿತಿಯ ನೇತೃತ್ವದಲ್ಲಿಯೇ ನಡೆಯುತ್ತಿತ್ತು. ಧಾರವಾಡದ ದೇಸಾಯಿ ಗಲ್ಲಿಯಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಚೇರಿ ಇತ್ತು. ಗೋವಿಂದಚಾರ್ಯಗುತ್ತಲ ಇವರು ಕಾರ್ಯದರ್ಶಿಗಳಾಗಿಯೂ ವಿನಾಯಕರಾವ್ ಜೋಶಿ ಅಧ್ಯಕ್ಷರಾಗಿಯೂ ಇದರ ಕಾರ್ಯ ನಿರ್ವಹಿಸುತ್ತಿದ್ದರು. ಉಪ್ಪಿನ ಬೆಟಗೇರಿಯಲ್ಲಿ 1922 ರಲ್ಲಿ ಒಂದು ಖಾದಿ ಕೇಂದ್ರ ಕಾರ್ಯತತ್ಪರವಾಗಿತ್ತು. ಟಿ.ಜಿ. ಕುಲಕರ್ಣಿಯವರು ಅಲ್ಲಿ ಕೆಲಸ ಮಾಡುತ್ತಿದ್ದರು ಅದಕ್ಕೂ ಮೊದಲು ಹನುಮಂತಾಚಾರ್ಯ ಶಿರಹಟ್ಟಿ ಎಂಬುವವರು ಉಪ್ಪಿನ ಬೆಟಗೇರಿ ಸಮೀಪದ ಎಡಹಳ್ಳಿಯಲ್ಲಿ ಖಾದಿ ಕೆಲಸ ಪ್ರಾರಂಭಿಸಿದ್ದರು. ಅವರು ಉಪ್ಪಿನ ಬೆಟಗೇರಿಯ ಸಂತೆಯಲ್ಲಿ ಮಾರಲಿಕ್ಕೆ ಬರುತ್ತಿದ್ದ ಲಡಿಗಳನ್ನು (ಹ್ಯಾಂಕ್ಸ್) ಖರೀದಿಸಿ ಎಡಹಳ್ಳಿಯ ನೇಕಾರರಿಗೆ ಕೊಟ್ಟು ಖಾದಿ ತಯಾರಿಸಿ ಕೊಳ್ಳುತ್ತಿದ್ದರು. ಎಡಹಳ್ಳಿಯಲ್ಲಿ ತಯಾರಾದ ಖಾದಿಯನ್ನು ಧಾರವಾಡದ ಕಾಂಗ್ರೆಸ್ ಕಮಿಟಿಗೆ ಕೊಡುತ್ತಿದ್ದರು.

**ಉಪ್ಪಿನ ಬೆಟಗೇರಿ ಖಾದೀಕೇಂದ್ರ:** 1920 ನೇ ಇಸ್ವಿಯಲ್ಲಿ ಆಗಿನ ವಿಕ್ಟೋರಿಯ ಹೈಸ್ಕೂಲಿನ (ಈಗ ಅದು ವಿದ್ಯಾರಣ್ಯ ಹೈಸ್ಕೂಲ್ ಆಗಿದೆ) ಅನೇಕ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು ಶಾಲೆಗಳನ್ನು ಬಿಟ್ಟು ರಾಷ್ಟ್ರೀಯ ಶಾಲೆಯನ್ನು ಪ್ರಾರಂಭಿಸಿದರು. ವಿಕ್ಟೋರಿಯಾ ಶಾಲೆಯನ್ನು ಬಿಟ್ಟು ರಾಷ್ಟ್ರೀಯ ಶಾಲೆಯನ್ನು ಸೇರಿದ ವಿದ್ಯಾರ್ಥಿಗಳ ಪೈಕಿ ಟಿ.ಜಿ. ಕುಲಕರ್ಣಿಯವರೂ ಒಬ್ಬರು. ಖ್ಯಾತ ಖಾದಿ ಕಾರ್ಯಕರ್ತ ಹನುಮಂತಾಚಾರ್ಯರ ನಂತರ ಎಡಹಳ್ಳಿಯಲ್ಲಿ ಖಾದಿ ಕಾರ್ಯವನ್ನು ನೋಡಿಕೊಳ್ಳುತ್ತಿದ್ದ ಇವರು ಉಪ್ಪಿನ ಬೆಟಗೇರಿಗೆ ಹೋಗಿ ಖಾದಿ ಕೇಂದ್ರವನ್ನು ಸ್ಥಾಪಿಸಿದುದೇ ಅಲ್ಲದೆ ಎಡೆಹಳ್ಳಿಯಲ್ಲಿದ್ದ ಸಾಮಾನುಗಳನ್ನೆಲ್ಲಾ ಇಲ್ಲಿಗೆ ಸಾಗಿಸಿದರು. ಇವರ ಸಂಗಡ ಗೋವಿಂದಚಾರ್ಯರೂ ಎಡೆಹಳ್ಳಿಯಿಂದ ಉಪ್ಪಿನ ಬೆಟಗೇರಿಗೆ ಬಂದರು. ಉಪ್ಪಿನ ಬೆಟಗೇರಿಯಲ್ಲಿ ನೇಕಾರರು ಸಾಕಷ್ಟು ಜನ ಇದ್ದರು. ಟಿ.ಜಿ. ಕುಲಕರ್ಣಿಯವರು ಸುತ್ತಮುತ್ತಲ ಹಳ್ಳಿಗಳಲ್ಲಿ ಸುತ್ತಿ ನೂಲುವ ಪ್ರಚಾರ ನಡೆಸಿದರು. 1922 ರಲ್ಲಿ ಸಾಬರಮತಿ ಆಶ್ರಮದಲ್ಲಿ ಶಿಕ್ಷಣ ಪಡೆದ ರಾಮಚಂದ್ರ ಪಡವಿಯವರು ಗೋವಿಂದಾಚಾರ್ಯರ ಸಲಹೆಯಂತೆ ಉಪ್ಪಿನ ಬೆಟಗೇರಿಗೆ ಬಂದು ಮಧ್ಯಮಪಿಂಜಣದಿಂದ ಹಂಜಿ ಮಾಡುವುದನ್ನು ಕಲಿಸಿದರು. ಹಂಜಿ ಉತ್ಪಾದಿಸುವವರಿಗೆ ಮಧ್ಯಮ ಪಿಂಜಣ ಕೊಡಲಾಯಿತು. ಇದರ ಪರಿಣಾಮವಾಗಿ ಮೂಲೆ ಗುಂಪಾಗಿದ್ದ ರಾಟೆಗಳು ಪ್ರಚಾರಕ್ಕೆ ಬಂದವು. ಮಗ್ಗಗಳು ಹೆಚ್ಚಾಗಿ ಖಾದಿ ಉತ್ಪತ್ತಿ ಬೆಳೆಯಿತು.

ಉಪ್ಪಿನ ಬೆಟಗೇರಿಯಲ್ಲಿ ಶರ್ಟಿಂಗ್ ಬಿಳೇಗಿಂಟ ಮತ್ತು ಬಣ್ಣದ ಹುರಿ ಕೋಟಿಂಗ್ ಆಗುತ್ತಿದ್ದು ಬಣ್ಣದ ಹುರಿಕೋಟಿಂಗ್ ಇಲ್ಲಿನ ಪ್ರಸಿದ್ಧ ಉತ್ಪಾದನೆ ಎನಿಸಿತ್ತು.

ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲೂ ಖಾದಿ ಮತ್ತು ಗ್ರಾಮೋದ್ಯೋಗವು ಹಂಚಿಕೆಯಾಗಿದೆ. ಇಲ್ಲಿ 1993-94 ರಲ್ಲಿ 140 ಸಹಕಾರಿ ಸಂಘಗಳು, 80 ನೋಂದಾಯಿತ ಸಂಸ್ಥೆಗಳು ಮತ್ತು 650 ವೈಯಕ್ತಿಕ ಫಲಾನುಭವಿಗಳು ಉತ್ಪಾದನಾ ಕಾರ್ಯದಲ್ಲಿ ತೊಡಗಿಸಲ್ಪಟ್ಟಿದ್ದವು. ಮಂಡಳಿಯ ಸುಮಾರು 465 ಲಕ್ಷದಷ್ಟು ರೂಗಳ ಸಾಲ ಸೌಲಭ್ಯ ಜಿಲ್ಲೆಯ ಉತ್ಪಾದನಾ ಕಾರ್ಯದಲ್ಲಿ ತೊಡಗಿಸಲ್ಪಟ್ಟಿತ್ತು. ಉಪ್ಪಿನ ಬೆಟಗೇರಿಯೇ ಅಲ್ಲದೆ ಹುಬ್ಬಳ್ಳಿ, ಶಿರಹಟ್ಟಿ, ಬಿ.ಅರಳಿಕಟ್ಟಿ ಮೊದಲಾದ ಕಡೆಗಳಲ್ಲಿರುವ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಸಂಘಗಳು, ಸಾಬೂನು, ಚರಕ, ಬೆಂಕಿಕಡ್ಡಿ, ಅಗರಬತ್ತಿ, ಬಡಗಿತನ, ಕಮ್ಮಾರಿಕೆ, ನಾರು ತಯಾರಿಕೆ, ಮೊದಲಾದವುಗಳಿಗೆ ಸಂಬಂಧಪಟ್ಟ ತರಬೇತಿಯನ್ನು ಒದಗಿಸುತ್ತವೆ. ಧಾರವಾಡದಲ್ಲಿರುವ ತಾಲೂಕು ಸೇವಾ ಸಂಘವು ಚರಕ, ಮುದ್ರಣ ಮತ್ತು ಬೈಂಡಿಂಗ್ ತಯಾರಿಕೆಗೆ ತರಬೇತಿಯನ್ನು ಒದಗಿಸುತ್ತಿದೆ. ಬ್ಯಾಹಟ್ಟಿಯ ಗ್ರಾಮಾಭಿವೃದ್ಧಿ ಸಂಘವು ಎಣ್ಣೆ ತೆಗೆಯುವುದಕ್ಕೆ ತರಬೇತಿಯನ್ನು ನೀಡುತ್ತಿದೆ. ಗರಗವು ರಾಷ್ಟ್ರೀಯ ಬಾವುಟಕ್ಕೆ ಬೇಕಾಗುವ ಬಟ್ಟೆಯನ್ನು ತಯಾರಿಸುವ ಏಕೈಕ ಕೇಂದ್ರವೆನಿಸಿದೆ.

ಸ್ವಾತಂತ್ರ್ಯಾನಂತರ ಖಾದಿ ಮತ್ತು ಗ್ರಾಮೋದ್ಯೋಗ ಕಮಿಷನ್ ರಾಷ್ಟ್ರಮಟ್ಟದಲ್ಲೂ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ರಾಜ್ಯಮಟ್ಟದಲ್ಲೂ ಖಾದಿ ಮತ್ತು ಗ್ರಾಮೋದ್ಯೋಗದ ಅಭಿವೃದ್ಧಿಗೆ ನೆರವನ್ನೊದಗಿಸುತ್ತಿವೆ. ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಜಿಲ್ಲಾ ಕಛೇರಿಯ ಮೂಲಕ ಜಿಲ್ಲಾ ಗ್ರಾಮೀಣ ಹಾಗೂ ಗೃಹ ಕೈಗಾರಿಕೆಗಳಿಗೆ ಸಾಲ ಹಾಗೂ ಅನುದಾನ ರೂಪದಲ್ಲಿ ಸಹಾಯವನ್ನೊದಗಿಸುತ್ತಿದೆ. ಇತ್ತೀಚೆಗೆ ಮಂಡಳಿಯು ವಿದ್ಯುನ್ಮಾನ (ಇಲೆಕ್ಟ್ರಾನಿಕ್ಸ್) ಉಪಕರಣಗಳನ್ನು ತನ್ನ ಕಕ್ಷೆಗೆ ಅಳವಡಿಸಿಕೊಂಡು ಜಿಲ್ಲೆಯ ರಾಯನಾಳ ಗ್ರಾಮದಲ್ಲಿ ಮಹಿಳೆಯರ ಸಹಕಾರ ಸಂಘದ ಮೂಲಕ ವಿದ್ಯುನ್ಮಾನ ಉಪಕರಣಗಳ ಉತ್ಪಾದನೆಗೆ ನೆರವನ್ನೊದಗಿಸಿದೆ.

**ಶಿರಹಟ್ಟಿ ತಾ।। ಖಾದಿ ಮತ್ತು ಗ್ರಾಮೋದ್ಯೋಗ ಸಹಕಾರ ಸಂಘ:** ಶಿರಹಟ್ಟಿ ತಾಲೂಕು ಖಾದಿ ಮತ್ತು ಗ್ರಾಮೋದ್ಯೋಗ ಕೋ. ಆಪರೇಟಿವ್ ಸೊಸೈಟಿಯು ಜಿಲ್ಲೆಯ ಪ್ರಮುಖ ಸಹಕಾರ ಸಂಘ. 1993-94 ರಲ್ಲಿ ಇದರ ಸದಸ್ಯರ ಸಂಖ್ಯೆ 555. ಇದರ ಷೇರು ಹಣ 31,980 ರೂಪಾಯಿಗಳು. ಇದು ನೀಡಿದ ಮುಂಗಡ 63,865 ರೂಪಾಯಿಗಳು. ಖಾದಿ ಮಂಡಳಿಯಿಂದ ಇದು ಪಡೆದಿರುವ ಸಾಲ 16,40,920 ರೂಪಾಯಿಗಳು. ಇದು ಮಂಡಳಿಗೆ ಮರುಪಾವತಿ ಮಾಡಬೇಕಾಗಿರುವ ಸಾಲ 13,40,489 ರೂಪಾಯಿಗಳು. ಇದರಲ್ಲಿ ನೂಲು ತೆಗೆಯುವವರ ಸಂಖ್ಯೆ 105 ಮತ್ತು ನೇಯ್ಗೆಯವರ ಸಂಖ್ಯೆ 25 ಇತ್ತು. 1993-94 ರಲ್ಲಿ ಈ ಸಂಘವು 4,60,821 ರೂಪಾಯಿಗಳನ್ನು ನೂಲು ತೆಗೆಯುವವರಿಗೂ 2,25,055 ರೂ.ಗಳನ್ನು ನೇಯ್ಗೆಯವರಿಗೂ ಮಜೂರಿಯಾಗಿ ಕೊಟ್ಟಿದೆ. ಇದೇ ಕಾಲಾವಧಿಯಲ್ಲಿ 13,85,205 ರೂಪಾಯಿ ಮೌಲ್ಯದ ನೂಲು 11,95,984 ರೂಪಾಯಿ ಮೌಲ್ಯದ ನೇಯ್ಗೆ ಕಾರ್ಯ ನಡೆಯಿತು. ಉತ್ಪಾದನೆಯಾದ ಸರಕಿನ ಪೈಕಿ 9,99,673 ರೂಪಾಯಿ ಮೌಲ್ಯದ ಸರಕನ್ನು ಚಿಲ್ಲರೆ ವ್ಯಾಪಾರದ ರೂಪದಲ್ಲೂ ಮತ್ತು 14,55,483 ರೂಪಾಯಿ ಮೌಲ್ಯದ ಸರಕನ್ನು ಸಗಟು ವ್ಯಾಪಾರದ ರೂಪದಲ್ಲೂ ಮಾರಾಟ ಮಾಡಲಾಯಿತು.

**ಖಾದಿ ನೇಕಾರರ ಉತ್ಪಾದಕ ಸಂಘ, ಉಪ್ಪಿನ ಬೆಟಗೇರಿ:** ಖಾದಿ ನೇಕಾರರ ಉತ್ಪಾದಕರ ಸಂಘ ನಿಯಮಿತ 1956 ರಲ್ಲಿ ಉಪ್ಪಿನ ಬೆಟಗೇರಿಯಲ್ಲಿ ಸ್ಥಾಪನೆಗೊಂಡಿತು. ಹಿಂದೆ ಇದ್ದ ಖಾದಿ ಉತ್ಪಾದನಾ ಚಟುವಟಿಕೆಗೆ ಇದರಿಂದ ವ್ಯವಸ್ಥಿತ ರೂಪ ಬಂತು. 1993-94 ರಲ್ಲಿ ಇದರಲ್ಲಿ 184 ಸದಸ್ಯರು ಕಾರ್ಯನಿರ್ವಹಿಸುತ್ತಿದ್ದರು. ಇದು 13,240 ರೂಪಾಯಿಗಳ ಷೇರು ಹಣವನ್ನು ಹೊಂದಿದ್ದು 5,83,242 ರೂಪಾಯಿಗಳ ಅಡ್ವಾನ್ಸ್ ಕೊಟ್ಟಿತ್ತು. ಇದರಲ್ಲಿ 275 ಮಂದಿ ನೂಲುವವರು ಮತ್ತು 35 ಮಂದಿ ನೇಯ್ಗೆಯವರು ಕಾರ್ಯನಿರ್ವಹಿಸುತ್ತಿದ್ದರು. ಇದು 2,58,252 ರೂಪಾಯಿಗಳನ್ನು ನೂಲುವವರಿಗೂ 2,07,726 ರೂಪಾಯಿಗಳನ್ನು ನೇಯ್ಗೆಯವರಿಗೂ ಮಜೂರಿ ಕೊಟ್ಟಿತ್ತು. ಇದು 9,32,159 ರೂಪಾಯಿ ಮೌಲ್ಯದ ನೂಲು ಮತ್ತು 16,43,274 ರೂಪಾಯಿ ಮೌಲ್ಯದ ಖಾದಿ ಬಟ್ಟೆಯನ್ನು ಉತ್ಪಾದಿಸಿತು. ಇದೇ ಕಾಲಾವಧಿಯಲ್ಲಿ ಇದರಲ್ಲಿ ಉತ್ಪಾದನೆಯಾದ ಸರಕಿನ ಪೈಕಿ 9,78,158 ರೂಪಾಯಿ ಮೌಲ್ಯದ ಸರಕನ್ನು ಚಿಲ್ಲರೆ ಮಾರಾಟದ ರೂಪದಲ್ಲೂ ಮತ್ತು 21,40,254 ರೂಪಾಯಿ ಮೌಲ್ಯದ ಸರಕನ್ನು ಸಗಟು ರೂಪದಲ್ಲೂ ಮಾರಾಟ ಮಾಡಲಾಯಿತು.

**ರೋಣ ತಾಲೂಕು ಖಾದಿ ವರ್ಕರ್ಸ್ ಅಸೋಸಿಯೇಶನ್ :** ರೋಣ ತಾಲೂಕು ಖಾದಿ ವರ್ಕರ್ಸ್ ಅಸೋಸಿಯೇಷನ್, ರೋಣ (ಪ್ರಧಾನ ಕಛೇರಿ, ಗದಗ) 1959ರಲ್ಲಿ ಪ್ರಾರಂಭಗೊಂಡಿತು. 1993-94 ರಲ್ಲಿ ಇದರ ಸದಸ್ಯರ ಸಂಖ್ಯೆ 126. ಇದು 1,82,890 ರೂಪಾಯಿಗಳ ಷೇರು ಬಂಡವಾಳವನ್ನು ಹೊಂದಿದ್ದು 14,677 ರೂಪಾಯಿ ಮುಂಗಡ ಕೊಟ್ಟಿದೆ. ಇದು ಖಾದಿ ಮಂಡಳಿಯಿಂದ ಪಡೆದ ಧನ ಸಹಾಯದ ಮೊತ್ತ 10,92,445 ರೂಪಾಯಿಗಳು. ಇದು ಮಂಡಳಿಗೆ ಮರು ಪಾವತಿ ಮಾಡಿದ ಮೊತ್ತ 2,81,991 ರೂಪಾಯಿಗಳಿದ್ದು 8,10,454 ರೂಪಾಯಿಗಳಷ್ಟು ಮೊತ್ತವನ್ನು ಮರು ಪಾವತಿ ಮಾಡಬೇಕಾಗಿದೆ. 1993-94 ರಲ್ಲಿ 120 ಮಂದಿ ನೂಲುವವರು ಮತ್ತು 30 ಮಂದಿ ನೇಯ್ಗೆಯವರು ಇದರ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಇದೇ ಕಾಲಾವಧಿಯಲ್ಲಿ 4,21,797 ರೂಪಾಯಿಯನ್ನು ನೂಲುವವರಿಗೂ 3,03,703 ರೂಪಾಯಿಗಳನ್ನು ನೇಯ್ಗೆಯವರಿಗೂ ಮಜೂರಿ ಕೊಡಲಾಯಿತು. ಇವರು 13,95,585 ರೂಪಾಯಿ ಮೌಲ್ಯದ ನೂಲನ್ನು ಮತ್ತು 18,45,467 ರೂಪಾಯಿ ಮೌಲ್ಯದ ಖಾದಿಯನ್ನು ತಯಾರಿಸಿದ್ದರು. ಇಲ್ಲಿ ಉತ್ಪಾದನೆಯಾದ ಸರಕಿನಲ್ಲಿ 21,52,760 ರೂಪಾಯಿ ಮೌಲ್ಯದ ಸರಕನ್ನು ಚಿಲ್ಲರೆ ವ್ಯಾಪಾರದ ರೂಪದಲ್ಲೂ 5,83,911 ರೂಪಾಯಿ ಮೌಲ್ಯದ ಸರಕನ್ನು ಸಗಟು ವ್ಯಾಪಾರದ ರೂಪದಲ್ಲೂ ಮಾರಾಟ ಮಾಡಲಾಯಿತು.

**ರಾಣೆಬೆನ್ನೂರು ತಾಲೂಕು ಖಾದಿ ವರ್ಕರ್ಸ್ ಸಂಘ:** ರಾಣೆಬೆನ್ನೂರು ತಾಲೂಕು ಖಾದಿ ವರ್ಕರ್ಸ್ ಸಂಘ, ರಾಣೆಬೆನ್ನೂರು, ಜಿಲ್ಲೆಯ ಪ್ರಮುಖ ಖಾದಿ ಕಾರ್ಮಿಕ ಸಂಘಗಳಲ್ಲೊಂದಾಗಿದೆ. 1993-94 ರಲ್ಲಿ ಇದರ ಸದಸ್ಯರ ಸಂಖ್ಯೆ 40. ಇದರ ಟ್ರಸ್ಟ್ ಫಂಡ್ ರೂ.1,01,857, ಷೇರು ಬಂಡವಾಳ ರೂ.11,000 ಮತ್ತು ಕಾದಿಟ್ಟ ನಿಧಿ ರೂ.10,000 ಇತ್ತು. ಇದು ಖಾದಿ ಮಂಡಳಿಯಿಂದ 8,51,159 ರೂಪಾಯಿ ಸಾಲ ಪಡೆದಿತ್ತು. ಇದು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಸಾಲದ ಪೈಕಿ 1,62,504 ರೂಪಾಯಿಗಳನ್ನು ಮರು ಪಾವತಿ ಮಾಡಿದ್ದು, 6,89,655 ರೂಪಾಯಿಗಳನ್ನು ಮರುಪಾವತಿ ಮಾಡಬೇಕಾಗಿದೆ. ಇದರಲ್ಲಿ 90 ಮಂದಿ ನೂಲುವವರು 10 ಮಂದಿ ನೇಯ್ಗೆಯವರು ಕಾರ್ಯ ನಿರ್ವಹಿಸುತ್ತಿದ್ದು ಇವರಿಗೆ ಒಟ್ಟು 2,99,912 ರೂಪಾಯಿಗಳ ಮಜೂರಿ ವಿತರಣೆ ಮಾಡಿದೆ. 1993-94 ರಲ್ಲಿ 3,68,720 ರೂಪಾಯಿ ಮೌಲ್ಯದ ನೂಲನ್ನು ಮತ್ತು 8,02,350 ರೂಪಾಯಿ ಮೌಲ್ಯದ ಖಾದಿಯನ್ನು ಉತ್ಪಾದಿಸಲಾಗಿದೆ. ಇದರ ಉತ್ಪಾದನೆಯ ಪೈಕಿ 8,47,572 ರೂಪಾಯಿ ಮೌಲ್ಯದ ಸರಕನ್ನು ಚಿಲ್ಲರೆ ರೂಪದಲ್ಲಿ 2,30,794 ರೂಪಾಯಿ ಮೌಲ್ಯದ ಸರಕನ್ನು ಸಗಟಾಗಿ ಮಾರಾಟ ಮಾಡಲಾಗಿದೆ.

### ಕೋಷ್ಟಕ 5.9

1994 ರ ಮಾರ್ಚ್ ಅಂತ್ಯದವರೆಗೂ ಧಾರವಾಡ ಜಿಲ್ಲೆಯಲ್ಲಿದ್ದ ತಾಲೂಕುವಾರು ಮತ್ತು ವರ್ಗವಾರು ಖಾದಿ ಮತ್ತು ಗ್ರಾಮೋದ್ಯೋಗಗಳ ಸಂಖ್ಯೆಯನ್ನು ಈ ಪಟ್ಟಿಯಲ್ಲಿ ಕೊಟ್ಟಿದೆ.

| ಕ್ರಸಂ. | ತಾಲೂಕು | ಪ.ಜಾತಿ | ಪ.ಪಂಗಡ | ಅಲ್ಪ ಸಂಖ್ಯಾತರು | ಇತರೆ | ಒಟ್ಟು | ಕ್ರಸಂ. | ತಾಲೂಕು | ಪ.ಜಾತಿ | ಪ.ಪಂಗಡ | ಅಲ್ಪ ಸಂಖ್ಯಾತರು | ಇತರೆ | ಒಟ್ಟು |
|---|---|---|---|---|---|---|---|---|---|---|---|---|---|
| 1 | ಧಾರವಾಡ | 44 | 15 | 10 | 115 | 184 | 10 | ಕಲಘಟಗಿ | 2 | 2 | 1 | 62 | 67 |
| 2 | ಹುಬ್ಬಳ್ಳಿ | 32 | 10 | 10 | 91 | 143 | 11 | ಗದಗ | 25 | 8 | 5 | 58 | 96 |
| 3 | ಹಾವೇರಿ | 7 | - | 2 | 50 | 59 | 12 | ನವಲಗುಂದ | 5 | 5 | 1 | 35 | 46 |
| 4 | ಶಿಗ್ಗಾಂವಿ | 25 | 12 | 4 | 45 | 86 | 13 | ನರಗುಂದ | 2 | - | 2 | 38 | 42 |
| 5 | ರಾಣೆಬೆನ್ನೂರು | 5 | 2 | 2 | 63 | 72 | 14 | ರೋಣ | 3 | - | 2 | 45 | 50 |
| 6 | ಬ್ಯಾಡಗಿ | 3 | 3 | 1 | 25 | 32 | 15 | ಶಿರಹಟ್ಟಿ | 25 | 8 | 1 | 30 | 64 |
| 7 | ಹಿರೇಕೆರೂರು | 4 | 2 | 4 | 60 | 70 | 16 | ಹಾನಗಲ್ | 2 | 1 | 2 | 25 | 30 |
| 8 | ಸವಣೂರು | 2 | 6 | 1 | 40 | 49 | 17 | ಕುಂದಗೋಳ | 2 | - | 2 | 44 | 48 |
| 9 | ಮುಂಡರಗಿ | - | - | 2 | 20 | 22 | | ಒಟ್ಟು | 188 | 74 | 52 | 846 | 1160 |

ಆಧಾರ: ಜಿಲ್ಲಾ ಖಾದಿ ಗ್ರಾಮೋದ್ಯೋಗ ಮಂಡಳಿ, ಧಾರವಾಡ

1994 ರ ಮಾರ್ಚ್ ಅಂತ್ಯದವರೆಗೂ ಮಂಡಳಿಯು ಧಾರವಾಡ ಜಿಲ್ಲೆಯಲ್ಲಿ ಖಾದಿ ಗ್ರಾಮೋದ್ಯೋಗಗಳಿಗೆ ಸಂಬಂಧಿಸಿದ ಸಹಕಾರ ಸಂಘಗಳು, ನೋಂದಾಯಿತ ಸಂಸ್ಥೆಗಳು ಮತ್ತು ನೇರ ಫಲಾನುಭವಿಗಳಿಗೆ ವಿತರಿಸಿದ ಸಾಲ ಮತ್ತು ಅನುದಾನಗಳ ವಿವರ.

| | ಘಟಕಗಳು | ಸಾಲ (ರೂ.ಗಳಲ್ಲಿ) | ಸಹಾಯ ಧನ (ರೂ.ಗಳಲ್ಲಿ) |
|---|---|---|---|
| 1 ಸಹಕಾರಿ ಸಂಘಗಳು | 140 | 2,19,30,884 | 5,50,000 |
| 2 ನೋಂದಾಯಿತ ಸಂಸ್ಥೆಗಳು | 80 | 1,33,74,441 | 8,00,000 |
| 3 ವೈಯಕ್ತಿಕ ಫಲಾನುಭವಿಗಳು | 927 | 88,38,860 | 4,82,000 |
| ಒಟ್ಟು | 1,147 | 4,41,44,185 | 18,32,000 |

ಆಧಾರ: ಜಿಲ್ಲಾ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಧಾರವಾಡ.

## ಕೋಷ್ಟಕ 5.10

1993-94 ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯ ಉದ್ದಿಮೆವಾರು ಪ್ರಗತಿ (1.4.93 ರಿಂದ 31.3.94 ವರೆಗೆ).

| ಕ್ರ.ಸಂ. | ಉದ್ದಿಮೆಯ ಹೆಸರು | ಉತ್ಪಾದನೆ ಮೊತ್ತ (ರೂ.ಗಳಲ್ಲಿ) | ಮಾರಾಟ ಮೊತ್ತ (ರೂ.ಗಳಲ್ಲಿ) | ಕೆಲಸಗಾರರ ಸಂಖ್ಯೆ | | ಒಟ್ಟು ಮಜೂರಿ (ರೂ.ಗಳಲ್ಲಿ) |
|---|---|---|---|---|---|---|
| | | | | ಪೂರ್ಣ ಉದ್ಯೋಗಿಗಳು | ಅರೆ ಉದ್ಯೋಗಿಗಳು | |
| 1 | ಖಾದಿ | 57,49,775 | 1,10,28,621 | 763 | 95 | 27,78,194 |
| 2 | ಉಣ್ಣೆ | 56,84,980 | 59,93,330 | 1180 | 858 | 28,67,751 |
| 3 | ಪಾಲಿವಸ್ತ್ರ | 4,25,000 | 2,15,000 | 40 | 8 | 1,03,500 |
| 4 | ಮಾರ್ಕೆಟಿಂಗ್ | - | 81,14,000 | 20 | 5 | 56,124 |
| 5 | ಕುಂಬಾರಿಕೆ | 35,87,800 | 44,26,000 | 285 | 206 | 23,52,500 |
| 6 | ಬೆಲ್ಲ ಮತ್ತು ಖಂಡಸಾರಿ | 6,000 | 9,000 | 1 | 15 | 2,000 |
| 7 | ಅಖಾದ್ಯ ಎಣ್ಣೆ ಮತ್ತು ಸಾಬೂನು | 1,09,200 | 1,32,300 | 6 | 2 | 18,000 |
| 8 | ಔಷಧೀಯ ಸಸ್ಯಗಳು | 1,10,000 | 1,25,000 | 4 | 6 | 35,000 |
| 9 | ಹಣ್ಣು ಪರಿಷ್ಕರಣೆ | 1,44,000 | 1,98,000 | 2 | 2 | 25,200 |
| 10 | ಪಿ.ಪಿ.ಪಿ.ಐ | 21,78,660 | 24,43,500 | 57 | 66 | 2,03,388 |
| 11. | ಬಡಗಿತನ ಮತ್ತು ಕಮ್ಮಾರಿಕೆ | 94,73,360 | 1,24,84,000 | 222 | 220 | 36,21,616 |
| 12 | ಚರ್ಮ ಉದ್ದಿಮೆ | 12,25,920 | 16,10,620 | 607 | 592 | 2,67,500 |
| 13 | ಗ್ರಾಮೀಣ ಎಣ್ಣೆ | 79,33,600 | 1,06,15,800 | 109 | 41 | 3,31,200 |
| 14 | ಪಾಲಿಮರ ಕೆಮಿಕಲ್ಸ್ | 32,500 | 40,000 | 2 | 1 | 1,000 |
| 15 | ಟೇಲರಿಂಗ್ | 91,346 | 1,20,670 | 18 | - | 29,100 |
| 16 | ಸೇವಾ | 1,38,600 | 94,400 | 7 | 11 | 33,275 |

| ಕ್ರಸಂ. | ಉದ್ದಿಮೆಯ ಹೆಸರು | ಉತ್ಪಾದನೆ ಮೊತ್ತ (ರೂ.ಗಳಲ್ಲಿ) | ಮಾರಾಟ ಮೊತ್ತ (ರೂ.ಗಳಲ್ಲಿ) | ಕೆಲಸಗಾರರ ಸಂಖ್ಯೆ ಪೂರ್ಣ ಉದ್ಯೋಗಿಗಳು | ಅರೆ ಉದ್ಯೋಗಿಗಳು | ಒಟ್ಟು ಮಜೂರಿ (ರೂ.ಗಳಲ್ಲಿ) |
|---|---|---|---|---|---|---|
| 17 | ಬಿದಿರು ಚಿತ್ರ | 5,30,000 | 6,90,000 | 8 | 8 | 752 |
| 18 | ಇಲೆಕ್ಟ್ರಾನಿಕ್ಸ್ | 4,30,000 | 1,30,000 | 12 | 3 | 33,000 |
| 19 | ಸುಣ್ಣ | 1,39,000 | 1,92,000 | 80 | 4 | 32,960 |
| 20 | ಅಗರಬತ್ತಿ | 1,88,000 | 9,35,000 | 90 | 15 | 2,01,125 |
| 21 | ನಾರು | 1,10,000 | 1,80,000 | 20 | 5 | 15,695 |
| 22 | ಅಲ್ಯೂಮಿನಿಯಂ | 1,72,000 | 1,81,000 | 8 | 2 | 21,915 |
| | ಒಟ್ಟು | 3,84,59,741 | 5,99,58,211 | 3,541 | 2,165 | 1,30,30,795 |

ಆಧಾರ: ಜಿಲ್ಲಾಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಧಾರವಾಡ.

## ಕೈಮಗ್ಗಗಳು ಮತ್ತು ವಿದ್ಯುತ್ ಮಗ್ಗಗಳು

ಧಾರವಾಡ ಜಿಲ್ಲೆಯು ಕೈಮಗ್ಗ ಕ್ಷೇತ್ರದಲ್ಲಿ ಪ್ರಮುಖ ಸ್ಥಾನ ಹೊಂದಿದೆ. 1986 ರ ಕೈಮಗ್ಗ ಗಣತಿಯ ಪ್ರಕಾರ ಜಿಲ್ಲೆಯಲ್ಲಿ ಸುಮಾರು 10 ಸಾವಿರ ಕೈಮಗ್ಗಗಳಿದ್ದು 33,000 ಕುಟುಂಬಗಳಿಗೆ ಉದ್ಯೋಗವನ್ನೊದಗಿಸಿದ್ದವು. ಜಿಲ್ಲೆಯಲ್ಲಿ ಇರುವ ಕೈಮಗ್ಗಗಳ ಪೈಕಿ ಹತ್ತಿ ಕೈಮಗ್ಗಗಳು ಅಧಿಕ ಸಂಖ್ಯೆಯಲ್ಲಿದ್ದು ಉಣ್ಣೆ ಹಾಗೂ ರೇಷ್ಮೆ ಕೈಮಗ್ಗಗಳೂ ಸಹ ಗಣನೀಯ ಪ್ರಮಾಣದಲ್ಲಿದ್ದವು.

ರಾಜ್ಯದ ಕೈಮಗ್ಗ ಕ್ಷೇತ್ರವನ್ನು ಸರ್ವತೋಮುಖ ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುವ ಉದ್ದೇಶದಿಂದ 1975 ರಲ್ಲಿ ಸ್ಥಾಪನೆಗೊಂಡ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ಹುಬ್ಬಳ್ಳಿಯಲ್ಲಿ ಪ್ರಾಂತೀಯ ಕಛೇರಿಯನ್ನು ಮತ್ತು ಕೇಂದ್ರೀಕೃತ ಕಚ್ಚಾಮಾಲು ಡಿಪೋ ಒಂದನ್ನು ಪ್ರಾರಂಭಿಸಿದೆ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ಸಹಕಾರಿ ಸಂಘಗಳ ವ್ಯಾಪ್ತಿಗೆ ಸೇರಿದ ನೇಕಾರರಿಗೆ ಕಚ್ಚಾಮಾಲು ಪೂರೈಕೆ, ತಾಂತ್ರಿಕ ತಿಳುವಳಿಕೆ, ತರಬೇತಿ ಹಾಗೂ ಮಾರುಕಟ್ಟೆ ವಿಚಾರದಲ್ಲಿ ಸಹಕಾರ ನೀಡುತ್ತಿದೆ. ಆನುವಂಶಿಕ ಕಸುಬನ್ನವಲಂಬಿಸಿದವರಿಗೆ ಸಹಾಯ ಮಾಡುವ ಉದ್ದೇಶದಿಂದ ರಾಣೆಬೆನ್ನೂರಿನಲ್ಲಿ ತೀವ್ರ ಕೈಮಗ್ಗ ಅಭಿವೃದ್ಧಿ ಯೋಜನೆ, ಗದಗ-ಬೆಟಗೇರಿಯಲ್ಲಿ ರಫ್ತು ಆಧಾರಿತ ಕೈಮಗ್ಗ ಯೋಜನೆ ಮೊದಲಾದ ಕಾರ್ಯಕ್ರಮಗಳನ್ನು ಕೈಗೊಂಡು ಕಾರ್ಯರೂಪಕ್ಕೆ ತಂದಿದೆ. ನೇಕಾರರು ಉತ್ಪಾದಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯವನ್ನೊದಗಿಸಲು ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಿದೆ. ಹಳೆಯ ಮಾದರಿಯ ಪಿಟ್ ಮಗ್ಗಗಳ ನವೀಕರಣಕ್ಕೆ 1989-90 ರಲ್ಲಿ 7.51 ಲಕ್ಷ ರೂ.ಗಳ ಮೌಲ್ಯದ ನವೀನ ಮಗ್ಗ ಮತ್ತು ಇತರ ಉಪಕರಣಗಳನ್ನು ಒದಗಿಸಿದೆ. ಕೈಮಗ್ಗ ನೇಕಾರರ ಜೀವನ ಮಟ್ಟ ಸುಧಾರಣೆಗಾಗಿ ರಾಣೆಬೆನ್ನೂರು, ತುಮ್ಮಿನಕಟ್ಟೆ ಮೊದಲಾದ ಸ್ಥಳದಲ್ಲಿ ಸುಮಾರು 500 ವಾಸದ ಮನೆಗಳು ಮತ್ತು ಕಾರ್ಯಾಗಾರಗಳನ್ನು ಕಟ್ಟಿಸಿದೆ. ರಾಣೆಬೆನ್ನೂರಿನಲ್ಲಿ ಬಣ್ಣದ ಮನೆಯನ್ನು ನಿರ್ಮಿಸಿ ಅದರ ಮೂಲಕ ಬಣ್ಣಹಾಕಿದ ನೂಲನ್ನು ನೇಕಾರರಿಗೆ ಒದಗಿಸುತ್ತಿದೆ. ನೇಕಾರರಿಗೆ ಉತ್ತಮ ಮಟ್ಟದ ತರಬೇತಿಯನ್ನು ಒದಗಿಸುವುದಕ್ಕಾಗಿ ಧಾರವಾಡದ ಎರಡು ಸ್ಥಳಗಳಲ್ಲಿ ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ. ನಿಗಮವು ಜಿಲ್ಲೆಯ ಸುಮಾರು 5,786 ಕೈಮಗ್ಗಗಳನ್ನು ತನ್ನ ನೆರವಿನ ಕಕ್ಷೆಗೆ ಸೇರಿಸಿಕೊಂಡಿದೆ. 1989-90 ನೇ ಸಾಲಿನಲ್ಲಿ ಜಿಲ್ಲೆಗೆ ಸುಮಾರು 440 ಲಕ್ಷ ರೂಪಾಯಿ ಮೌಲ್ಯದ ಕಚ್ಚಾಮಾಲುಗಳನ್ನು ಪೂರೈಸಿ 581 ಲಕ್ಷ ರೂಪಾಯಿ ಮೌಲ್ಯದ 75.70 ಲಕ್ಷ ಮೀಟರುಗಳಷ್ಟು ಬಟ್ಟೆ ಉತ್ಪಾದನೆಯಾಗುವಂತೆ ಮಾಡಿದೆ.

## ಗೃಹ ಕೈಗಾರಿಕೆ ಮತ್ತು ಕರಕುಶಲತೆ

ಧಾರವಾಡ ಜಿಲ್ಲೆಯಲ್ಲಿ ಕೈಮಗ್ಗದ ಬಟ್ಟೆ, ಉಣ್ಣೆಕಂಬಳಿ, ಜಮಖಾನಗಳು, ಚಾಪೆಗಳು ಕೈಗಾಣದ ಎಣ್ಣೆ ಮೊದಲಾದವುಗಳ ತಯಾರಿಕೆ ಮತ್ತು ಬಡಗಿತನ, ಕಮ್ಮಾರಿಕೆ, ಕುಂಬಾರಿಕೆ, ಚರ್ಮಗೆಲಸ ಮೊದಲಾದವುಗಳು ಗೃಹ ಕೈಗಾರಿಕೆಯ ವ್ಯಾಪ್ತಿಗೊಳಪಟ್ಟಿದ್ದು ಪ್ರಖ್ಯಾತಿ ಪಡೆದಿವೆ. ಹುಬ್ಬಳ್ಳಿ, ಗದುಗಿನ ಸೀರೆಗಳು, ಗಜೇಂದ್ರಗಡದ ಖಣ, ಉಪ್ಪಿನ ಬೆಟಗೇರಿಯ ಬಟ್ಟೆಗಳು, ನವಲಗುಂದದ

ಜಮಖಾನ, ರಾಣೆಬೆನ್ನೂರು ಕಂಬಳಿ, ಧಾರವಾಡ ಬುಟ್ಟಿ, ಮುಗದದ ಮಣ್ಣಿನ ವಸ್ತುಗಳು, ಕಲಘಟಗಿಯ ತೊಟ್ಟಿಲು ಇವು ಜಿಲ್ಲೆಯ ಪ್ರಸಿದ್ಧ ಉತ್ಪನ್ನಗಳಾಗಿವೆ. ಹುಬ್ಬಳ್ಳಿ, ಗದಗಗಳಲ್ಲಿ ಗ್ರಾಮಾಂತರ ಕುಶಲಕಲೆಗಾರರ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಇಲ್ಲಿ ಬಡಗಿತನ, ಕಮ್ಮಾರಿಕೆ, ಚರ್ಮ ವಸ್ತುಗಳು, ನೇಯ್ಗೆ ಮೊದಲಾದವುಗಳಿಗೆ ಸಂಬಂಧಿಸಿದ ತರಬೇತಿಯನ್ನು ತರಬೇತಿ ಭತ್ಯದೊಂದಿಗೆ ಕೊಡಲಾಗುತ್ತಿದೆ. ಹೊಳೆ ಆಲೂರಿನ ವಿಶ್ವಕರ್ಮ ಜನಾಂಗದವರು ಕುಶಲಕರ್ಮಕ್ಕೆ ಹೆಸರಾದವರು. ಇವರು ದೇವಾಲಯದ ಹೆಬ್ಬಾಗಿಲು, ಕಿಟಕಿಯ ಚೌಕಟ್ಟು, ರಥ ಇವುಗಳನ್ನು ಕೆತ್ತಿ ಅಲಂಕರಿಸುವುದರಲ್ಲಿ ತಮ್ಮ ಕುಶಲತೆಯನ್ನು ಮೆರೆದಿದ್ದಾರೆ. ರಾಣೆಬೆನ್ನೂರು ಮತ್ತು ತುಮ್ಮಿನಕಟ್ಟೆಗಳಲ್ಲಿ ಕಡಿಮೆ ಬೆಲೆಯ ಜನತಾ ಸೀರೆಗಳು ಹೆಚ್ಚಾಗಿ ತಯಾರಾಗುತ್ತವೆ. ಹೆಬಸೂರಿನಲ್ಲಿ ಉತ್ತಮ ಮಾದರಿಯ ಗುಡಾರಗಳು ಮತ್ತು ಜಮಖಾನಗಳು ಉತ್ಪಾದಿಸಲ್ಪಡುತ್ತವೆ. ಬ್ಯಾಹಟ್ಟಿ ಮತ್ತು ಬಿ.ಅರಳಿಕಟ್ಟೆಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆ ವಿಶೇಷವಾಗಿ ನಡೆಯುತ್ತದೆ. ಬಿದರಿ ಉದ್ಯಮ ಆನುವಂಶಿಕ ಉದ್ಯಮವಾಗಿದ್ದು ಮನೆಯ ಪ್ರತಿಯೊಬ್ಬರೂ ಉತ್ಪಾದನೆಯ ಕಾರ್ಯದಲ್ಲಿ ತೊಡಗಿರುತ್ತಾರೆ. ಊದಿನಕಡ್ಡಿ ತಯಾರಿಕೆಯು ಜಿಲ್ಲೆಯ ಮತ್ತೊಂದು ಪ್ರಮುಖ ಗೃಹ ಕೈಗಾರಿಕೆಯಾಗಿದೆ. ಧಾರವಾಡ, ಹುಬ್ಬಳ್ಳಿ, ಬ್ಯಾಡಗಿ ಮತ್ತು ರಾಣೆಬೆನ್ನೂರು ಈ ಉದ್ಯಮದ ಪ್ರಮುಖ ಕೇಂದ್ರಗಳು. ಜಿಲ್ಲೆಯಲ್ಲಿ ಕುಂಬಾರಿಕೆಯು ಎರಡು ವಿಧದಲ್ಲಿ ನಡೆಯುತ್ತದೆ. ಮಣ್ಣಿನಿಂದ ಪಾತ್ರೆಗಳನ್ನು ತಯಾರಿಸುವುದು ಮತ್ತು ಮೃದುಕಲ್ಲಿನಿಂದ ಪಾತ್ರೆಗಳನ್ನು ತಯಾರಿಸುವುದು ಇಲ್ಲಿನ ಕುಂಬಾರಿಕೆಯಾಗಿದೆ. ಜಿಲ್ಲೆಯಲ್ಲಿ ಚರ್ಮ ಹದಮಾಡುವುದು ಮತ್ತು ಚರ್ಮೋದ್ಯಮಗಳು ಪ್ರತ್ಯೇಕ ಗೃಹ ಉದ್ಯಮಗಳಾಗಿವೆ. ಈ ಉದ್ಯಮಗಳು ಅನುವಂಶಿಕವಾಗಿ ಬಂದವುಗಳಾಗಿವೆ. ಡಂಬಳ, ಧಾರವಾಡ, ಗದಗ, ಗರಗ, ಹುಬ್ಬಳ್ಳಿ, ಕೊಣ್ಣೂರು, ಲಕ್ಕುಂಡಿ, ಮೆಡ್ಲೇರಿ, ನೆಗಳೂರು, ರಾಣೆಬೆನ್ನೂರು ಮತ್ತು ಗುತ್ತಲ ಇವು ಜಿಲ್ಲೆಯ ಚರ್ಮ ಹದಮಾಡುವ ಮುಖ್ಯ ಕೇಂದ್ರಗಳು. ಗದಗ, ಹಾನಗಲ್, ಹಾವೇರಿ, ಹುಬ್ಬಳ್ಳಿ, ಕಲಘಟಗಿ, ಮುಂಡರಗಿ, ನವಲಗುಂದ ಮತ್ತು ರಾಣೆಬೆನ್ನೂರು ಇವು ಚರ್ಮೋದ್ಯಮದ ಮುಖ್ಯ ಕೇಂದ್ರಗಳು. ಜಿಲ್ಲೆಯ ಕೆಲವು ಊರುಗಳು ಕುಶಲಕಲಾತ್ಮಕ ವಸ್ತುಗಳ ಉತ್ಪಾದನೆಗೆ ಪ್ರಸಿದ್ಧಿಯಾಗಿವೆ. ಹೊಳೆ ಆಲೂರಿನ ಬಾಗಿಲ ಚೌಕಟ್ಟುಗಳು ಕಲೆಯ ಹೊಸ ಚೈತನ್ಯವನ್ನು ಹೊಂದಿದ್ದು ಜನಗಳನ್ನು ತಮ್ಮತ್ತ ಆಕರ್ಷಿಸುತ್ತವೆ. ಹೊಳೆ ಆಲೂರು ರೋಣ ತಾಲೂಕಿನಲ್ಲಿದೆ. ಸಾಗವಾನಿ ಕಟ್ಟಿಗೆಯಲ್ಲಿ ಬಾಗಿಲನ್ನು ಕಲಾತ್ಮಕವಾಗಿ ತಯಾರಿಸುವುದರಲ್ಲಿ ಇಲ್ಲಿನ ಕುಶಲಕರ್ಮಿಗಳು ಸ್ವದೇಶಿ ಮತ್ತು ವಿದೇಶಿಯರ ಗಮನ ಸೆಳೆದಿದ್ದಾರೆ. ಇವರು ತಯಾರಿಸಿದ ಬಾಗಿಲುಗಳ ಬೆಲೆ ಸುಮಾರು 500 ರೂಪಾಯಿಗಳಿಂದ 15,000 ರೂಪಾಯಿಗಳಾಗುತ್ತದೆ. ಇವರು ತಯಾರಿಸಿದ ಬಾಗಿಲ ಚೌಕಟ್ಟುಗಳಲ್ಲಿ ಅಂದವಾಗಿ ಗರಿಗೆದರಿ ಕುಣಿಯುವ ನವಿಲು, ಹಬ್ಬಿದ ಬಳ್ಳಿ, ಗಂಡ ಭೇರುಂಡ, ಗಿಳಿ, ಗರುಡಪಕ್ಷಿ, ಸರಪಳಿ, ತೆಂಗಿನಕಾಯಿ, ಚಕ್ರ, ರುದ್ರಾಕ್ಷಿ, ಪದಕ ಮುಂತಾದವುಗಳು ಅಂದವಾಗಿ ಮೂಡಿರುವುದನ್ನು ಕಾಣಬಹುದು. ಪೂರ್ವದಲ್ಲಿ ಇದು ಬಡಗಿಗಳ ಕುಲಕಸುಬಾಗಿತ್ತು. ಇತ್ತೀಚೆಗೆ ಈ ಕಲೆಯಲ್ಲಿ ಎಲ್ಲಾ ಜಾತಿಯವರು ಪರಿಣತಿ ಪಡೆದಿದ್ದಾರೆ. ಈ ಗ್ರಾಮದಲ್ಲಿ ಸುಮಾರು 50ಕ್ಕೂ ಹೆಚ್ಚು ಕಲಾಕಾರರಿದ್ದರೆಂದು ಎಂ.ಕೆ. ಹೊಸಮನಿ ಮತ್ತು ನಿಂಗಪ್ಪ ಮುದ್ನಾಳ ಅಭಿಪ್ರಾಯ ಪಟ್ಟಿದ್ದಾರೆ. ಇವರಲ್ಲಿ ಪ್ರಮುಖರಾದವರು ಮಾನಪ್ಪ ಬಡಗೇರ, ಮಾಬುಸಾಬ, ಕೊರಬಾಳ, ಅಮೀನಸಾಬ, ಯಲ್ಲಪ್ಪ ಮಂಗಳೂರು, ಹುಚ್ಚಪ್ಪ ಬಾರಕೇರ, ಕಾಶೀಮಸಾಬ ನದಾಫ್, ಕಾಲೇಶಪ್ಪ, ಬಡಿಗೇರ, ಕಾಳಪ್ಪ, ಶಂಕ್ರಪ್ಪ, ನೀಲಪಾದಪ್ಪ, ಬಸವರಾಜ ಸರಕಾರದ ಮೊದಲಾದವರು. ಈ ಕುಶಲಕರ್ಮಿಗಳು ಹೊಳೆ ಆಲೂರು ಮತ್ತು ಅದರ ಸುತ್ತಮುತ್ತಣ ಗ್ರಾಮಗಳಾದ ಹೊಳೆ ಮಣ್ಣೂರು, ಗೌಡಗೊಳ್ಳಿ, ಮುವರೆಡ್ಡಿ ಕೊಪ್ಪ, ಆಚಾರಕೊಪ್ಪ, ಹೆಬ್ಬಳ್ಳಿಗಳಲ್ಲಿ ಇದ್ದಾರೆ. ಚೌಕಟ್ಟಿಗೆ ಬೇಕಾದ ಸಾಗವಾನಿ ಕಟ್ಟಿಗೆಯನ್ನು ದಾಂಡೇಲಿ, ಕಿರುವತ್ತಿ, ಅಳ್ನಾವರ, ಶಿರಸಿ, ಭಟ್ಕಳ, ಶಿವಮೊಗ್ಗದಿಂದ ತರಿಸಿಕೊಳ್ಳಲಾಗುತ್ತಿದೆ. ಇವರು ತಯಾರಿಸುವ ಕಲಾತ್ಮಕ ಬಾಗಿಲುಗಳು ರಾಜ್ಯದ ವಿಜಾಪುರ, ಬೆಳಗಾವಿ, ಧಾರವಾಡ, ರಾಯಚೂರು ಜಿಲ್ಲೆಗಳಲ್ಲೂ ಮತ್ತು ಮಹಾರಾಷ್ಟ್ರದ ಕೆಲವು ಜಿಲ್ಲೆಗಳಲ್ಲೂ ಮಾರಾಟಗೊಳ್ಳುತ್ತವೆ.

ಕಲಘಟಗಿಯ ಕುಶಲಕರ್ಮಿಗಳು ಕಟ್ಟಿಗೆಯಲ್ಲಿ ತಯಾರಿಸುವ ಕಲಾತ್ಮಕ ತೊಟ್ಟಿಲುಗಳು ಪ್ರಖ್ಯಾತ ಪಡೆದವುಗಳಾಗಿವೆ. ಕಲಘಟಗಿಯು ಒಂದು ತಾಲೂಕ ಕೇಂದ್ರ. ಇಲ್ಲಿನ 'ಸಾವಕಾರ್' ಮನೆತನ ಸುಮಾರು ನಾಲ್ಕು ತಲೆಮಾರುಗಳಿಂದಲೂ ತೊಟ್ಟಿಲು ತಯಾರಿಕೆಯಲ್ಲಿ ನಿರತವಾಗಿವೆ. ಗಿರಾಕಿಗಳಿಗೆ ಬೇಕಾದ ವಿನ್ಯಾಸಗಳಲ್ಲಿ ತೊಟ್ಟಿಲನ್ನು ತಯಾರಿಸಿಕೊಡುವುದು ಈ ಕುಟುಂಬದ ವೈಶಿಷ್ಟ್ಯ. ಈ ತೊಟ್ಟಿಲಿನ ಬೆಲೆ ಸುಮಾರು 800 ರೂ.ಗಳಿಂದ 3,000 ರೂ.ಗಳವರೆಗೂ ಇರುತ್ತದೆ. ಇವರು ತೊಟ್ಟಿಲುಗಳೇ ಅಲ್ಲದೇ ರಥ, ಗೌರಿ, ದೇವರ ಮುಖ, ಬಣ್ಣದ ಮಣೆ, ಪಲ್ಲಕ್ಕಿ, ಬಾರಕೋಲು ಮುಂತಾದವುಗಳನ್ನು ತಯಾರಿಸುತ್ತಾರೆ. ತಿಪ್ಪಣ್ಣ ಬಡಿಗೇರ, ಮಲ್ಲೇಶಪ್ಪ, ಓಂಕಾರಪ್ಪ, ಎಚ್ಚರಪ್ಪ ಮತ್ತು ಅಶೋಕ ಬಡಿಗೇರ ಇಲ್ಲಿನ ಪ್ರಮುಖ ಕುಶಲಕರ್ಮಿಗಳು.

ಹಾವೇರಿಯ ಯಾಲಕ್ಕಿ ಮಾಲೆಯ ತಯಾರಿಕೆಯು ಜಿಲ್ಲೆಯ ಹೆಸರಾಂತ ಕುಶಲಕಲಾ ಉತ್ಪಾದನೆಯಲ್ಲೊಂದಾಗಿದೆ. ಈ ಉದ್ಯಮವು ಇಲ್ಲಿನ 4-5 ಕುಟುಂಬದಾರರ ಮನೆಗಳಿಗೆ ಸೀಮಿತವಾಗಿರುವ ಅನುವಂಶಿಕ ಕಸುಬಾಗಿದೆ. ಇವರು ತಯಾರಿಸುವ ಮಾಲೆಗಳು ಯಾಲಕ್ಕಿಯ ನೈಸರ್ಗಿಕ ಸುಗಂಧವನ್ನು ಹೊಂದಿದವುಗಳಾಗಿರುವುದರಿಂದ ಅಧಿಕ ಪ್ರಮಾಣದಲ್ಲಿ ಮಾರಾಟಗೊಳ್ಳುತ್ತವೆ.

ರಾಷ್ಟ್ರಧ್ವಜಕ್ಕೆ ಬೇಕಾಗುವ ಖಾದಿ ಬಟ್ಟೆಯನ್ನು ತಯಾರಿಸುವ ರಾಷ್ಟ್ರದ ಏಕೈಕ ಖಾದಿ ಗ್ರಾಮೋದ್ಯೋಗ ಘಟಕ ಇರುವ ಗ್ರಾಮ ಗರಗ. ಇದು ಧಾರವಾಡ ನಗರದಿಂದ 18 ಕಿ.ಮೀ. ದೂರದಲ್ಲಿದೆ. ರಾಷ್ಟ್ರಧ್ವಜಕ್ಕೆ ಬೇಕಾಗುವ ಬಟ್ಟೆಯನ್ನು ಸಂಪೂರ್ಣವಾಗಿ ಕೈಯಿಂದಲೇ ನೂತು ಮತ್ತು ನೇಯ್ದು ತಯಾರಿಸಬೇಕು. ಆ ಬಟ್ಟೆ ಐ.ಎಸ್.ಐ ಸರ್ಟಿಫಿಕೇಟ್ ಪಡೆದಿರಬೇಕು. ಐ.ಎಸ್.ಐ. ಸರ್ಟಿಫಿಕೇಟ್ ಪಡೆದ ರಾಷ್ಟ್ರಧ್ವಜದ ಖಾದಿ ಬಟ್ಟೆಯ ಒಂದು ಡೆಸಿ ಮೀಟರ್‌ನಲ್ಲಿ 175 ಹಾಸು ಎಳೆ ಹಾಗೂ 165 ಹೊಕ್ಕು ಎಳೆ ಇರಬೇಕು. 50:200 ಮಿ.ಮೀ. ಗಾತ್ರದ ಈ ಬಟ್ಟೆ ಹಾಸುಬದಿಯಲ್ಲಿ 40 ಕಿಲೋ ತೂಕವನ್ನು, ಹೊಕ್ಕು ಬದಿಯಲ್ಲಿ 30 ಕಿಲೋ ತೂಕವನ್ನು ತಾಳಿಕೊಳ್ಳಬೇಕು. ಒಂದು ಚದರ ಮೀಟರ್ ಈ ಬಟ್ಟೆ 205 ಗ್ರಾಮ್ ತೂಕವಿರಬೇಕು, ಎಂಬ ನಿಯಮಾವಳಿಯನ್ನು ರೂಪಿಸಲಾಗಿದೆ. ಈ ಎಲ್ಲಾ ಷರತ್ತುಗಳನ್ನು ಪೂರೈಸದ ಬಟ್ಟೆಯನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಲಾಗುತ್ತದೆ. ರಾಷ್ಟ್ರದ ಇತರ ಖಾದಿ ಗ್ರಾಮೋದ್ಯೋಗ ಘಟಕಗಳು ರಾಷ್ಟ್ರಧ್ವಜದ ಬಟ್ಟೆಯನ್ನು ತಯಾರಿಸಲು ಈ ಕಾರಣದಿಂದಾಗಿ ಹಿಂಜರಿಯುತ್ತವೆ. ಹಿಂದೆ ತಮಿಳುನಾಡು ಮತ್ತು ಮಹಾರಾಷ್ಟ್ರದ ಉದ್ಗೀರ್‌ನಲ್ಲಿ ಈ ಬಟ್ಟೆಯನ್ನು ತಯಾರಿಸುತ್ತಿದ್ದು ನಂತರ ಅದನ್ನು ನಿಲ್ಲಿಸಿದರು. ದೇಶದ ಯಾವ ಖಾದಿ ಮತ್ತು ಗ್ರಾಮೋದ್ಯೋಗ ಕೇಂದ್ರವೂ ಸ್ವೀಕರಿಸಲು ಸಿದ್ಧವಿಲ್ಲದ ಈ ಸವಾಲನ್ನು ಗರಗದ ಖಾದಿ ಹುಟ್ಟುವಳಿ ಕೇಂದ್ರವು ಸ್ವೀಕರಿಸಿ ರಾಷ್ಟ್ರಧ್ವಜದ ಬಟ್ಟೆಯನ್ನು ತಯಾರಿಸಿ ಕೊಡುತ್ತಿದೆ. ಈ ಕೇಂದ್ರದ ಶಿಲ್ಪಿ ಶಂಕರ ಮಲ್ಲೇಶಪ್ಪ ಕರಡಿಗುಡ್ಡ ಅವರು. 1956 ರಲ್ಲಿ ಸ್ಥಾಪನೆಯಾದ ಧಾರವಾಡ ತಾಲೂಕು ಸೇವಾ ಸಂಘವೇ ಗರಗ ಖಾದಿ ಕೇಂದ್ರದ ಮಾತೃ ಸಂಸ್ಥೆ. ಇದು ಸ್ಥಾಪನೆಯಾದ ನಾಲ್ಕು ವರ್ಷಗಳಲ್ಲೇ ಮುಚ್ಚಿಹೋಗಿತ್ತು. ಗರಗದವರೇ ಆದ ಶಂಕರ ಮಲ್ಲೇಶಪ್ಪ ಕರಡಿಗುಡ್ಡ ಅವರು 1959 ರಲ್ಲಿ ಹುಬ್ಬಳ್ಳಿ ಧಾರವಾಡ ತಾಲೂಕುಗಳ ಸೇವಾ ಖಾದಿ ಕೇಂದ್ರಗಳಲ್ಲಿ ಕಾರ್ಯಕರ್ತರಾಗಿ ಕಾರ್ಯನಿರ್ವಹಿಸುತ್ತಿದ್ದರು. ಇವರು ತಮ್ಮ ಸ್ವಂತ ಗ್ರಾಮವಾದ ಗರಗದಲ್ಲಿ 1966 ರಲ್ಲಿ ನರಸಿಂಹ ರಸಾಳೆ ಎಂಬ ಕಾರ್ಯಕರ್ತರೊಡಗೂಡಿ 10 ಚರಕಗಳೊಡನೆ ಮುಚ್ಚಿಹೋಗಿದ್ದ ಕೇಂದ್ರವನ್ನು ಮತ್ತೆ ಪ್ರಾರಂಭಿಸಿದರು. ಈ ಕೇಂದ್ರದಲ್ಲಿ ಸಾಮಾನ್ಯ ಖಾದಿ ಬಟ್ಟೆಗಳನ್ನು ಮಾತ್ರ ತಯಾರಿಸಲಾಗುತ್ತಿತ್ತು. ರಾಷ್ಟ್ರಧ್ವಜಕ್ಕೆ ಬಟ್ಟೆಯನ್ನು ತಯಾರಿಸುತ್ತಿದ್ದ ತಮಿಳುನಾಡು ಮತ್ತು ಮಹಾರಾಷ್ಟ್ರದ ಕೇಂದ್ರಗಳು ಅದನ್ನು ನಿಲ್ಲಿಸಿದಾಗ ರಾಷ್ಟ್ರಧ್ವಜವನ್ನು ಮುದ್ರಿಸುವ ಪರವಾನಿಗಿಯನ್ನು ಹೊಂದಿರುವ ಮುಂಬೈ ಖಾದಿ ಗ್ರಾಮೋದ್ಯೋಗ ಸಂಘವು 1972 ರಲ್ಲಿ ಗರಗ ಕೇಂದ್ರವು ಈ ಸಾಹಸ ಕಾರ್ಯಕ್ಕೆ ತೊಡಗುವಂತೆ ಮಾಡಿತು. ಅಂದಿನಿಂದ ಗರಗ ಖಾದಿ ಕೇಂದ್ರವು ಸುಧಾರಿತ ಮಗ್ಗಗಳನ್ನು ಅಳವಡಿಸಿಕೊಂಡು ರಾಷ್ಟ್ರಧ್ವಜಕ್ಕೆ ಬಟ್ಟೆಯನ್ನು ತಯಾರಿಸಿ ಕೊಡುತ್ತಿದೆ. ಈ ಕೇಂದ್ರವು ಪ್ರತೀ ವರ್ಷ ಒಂದೂವರೆ ಲಕ್ಷ ಮೀಟರ್ ಬಟ್ಟೆಯನ್ನು ಉತ್ಪಾದಿಸುತ್ತಿದೆ. ಪ್ರಸ್ತುತ ಹತ್ತು ಹಳ್ಳಿಗಳಲ್ಲಿ ಈ ಘಟಕದ ನೂಲುವ ಕೇಂದ್ರಗಳಿದ್ದು, ನೇಯುವ ಕೇಂದ್ರಗಳಿರುವುದು ಗರಗ ಮತ್ತು ತಡಕೋಡದಲ್ಲಿ ಮಾತ್ರ. ಗರಗದಲ್ಲಿ 70 ಮಗ್ಗದ ಜೊತೆ 75 ಚರಕಗಳಿದ್ದರೆ, ತಡಕೋಡದಲ್ಲಿ 30 ಮಗ್ಗಗಳ ಜೊತೆ 60 ಚರಕಗಳಿವೆ.

ರಂಗುರಂಗಿನ ಜಮಖಾನಗಳ ಉತ್ಪಾದನೆಗೆ ನವಲಗುಂದ ಪ್ರಖ್ಯಾತಿ ಪಡೆದಿದೆ. ಈ ವಿಶಿಷ್ಟ ಜಮಖಾನೆಯ ಕಲೆ ವಿಜಾಪುರದ ಆದಿಲಶಾಹಿ ಕಾಲದಲ್ಲಿ ನವಲಗುಂದದ ಜಮಖಾನದವರ ಮನೆಗೆ ಮದುವೆಯಾಗಿ ಬಂದ ಮಹಿಳೆಯೊಬ್ಬಳ ಕೊಡುಗೆಯಾಗಿದೆ. ಇತ್ತೀಚೆಗೆ ಜಿಲ್ಲಾ ಕೈಗಾರಿಕಾ ಕೇಂದ್ರ ಮತ್ತು ಕುಶಲ ಕರ್ಮಿಗಳ ನಿಗಮವು ಈ ಉದ್ಯಮಕ್ಕೆ ಪ್ರೋತ್ಸಾಹ ನೀಡುತ್ತಿವೆ. ಇಲ್ಲಿನ ಅಂಗವಿಕಲ ಕುಶಲಕರ್ಮಿ ರಾನಬಿ ರಾಜ್ಯ ಸರ್ಕಾರದ ಉತ್ತಮ ಶ್ರೇಣಿ ಕುಶಲ ಕರ್ಮಿ ಪ್ರಶಸ್ತಿ ಪಡೆದುಕೊಂಡಿದ್ದಾಳೆ.

## ರೇಷ್ಮೆ

ಧಾರವಾಡ ಜಿಲ್ಲೆಯ ಭೂಮಿ ಮತ್ತು ಹವಾಗುಣ ರೇಷ್ಮೆ ಕೃಷಿಗೆ ಉತ್ಕೃಷ್ಟವಾಗಿರುವುದರಿಂದಲೂ ರೇಷ್ಮೆ ಕೃಷಿ ಹೆಚ್ಚು ಲಾಭದಾಯಕ ಎಂಬ ಭಾವನೆ ಜಿಲ್ಲೆಯ ಜನಗಳಲ್ಲಿ ಮೂಡಿಬಂದಿರುವುದರಿಂದಲೂ ಜಿಲ್ಲೆಯಲ್ಲಿ ರೇಷ್ಮೆ ಕೃಷಿ ಪ್ರಗತಿ ಪಥದಲ್ಲಿ ಸಾಗುತ್ತಿದೆ. ಸ್ವಾತಂತ್ರ್ಯ ಬರುವ ಕಾಲಕ್ಕೆ ಈ ಜಿಲ್ಲೆಯಲ್ಲಿ ಈ ಉದ್ಯಮ ಮೊದಲಿಟ್ಟು, 1951 ರಲ್ಲಿ 20 ರೈತರು ರೇಷ್ಮೆಗೂಡಿನ ಉತ್ಪಾದನಾ ಕಾರ್ಯದಲ್ಲಿ ತೊಡಗಿದ್ದರು. ಇವರಲ್ಲಿ 15 ಜನ ಹಿಪ್ಪು ನೇರಳೆ ಕೃಷಿಯಲ್ಲಿ ನಿರತರಾಗಿದ್ದರು. ಕೃಷಿ ವಿದ್ಯಾಲಯದಲ್ಲಿ ರೇಷ್ಮೆ ಕೃಷಿಗೆ ತರಬೇತಿ

ನೀಡುತ್ತಿದ್ದರು. ಮುಂಬಯಿಯ ಸಿಲ್ಕ್‌ಫಿಲೇಚರ್‌ನ ನೆರವನ್ನೂ ಪಡೆದವರಿದ್ದರು.ಜಿಲ್ಲೆಯಲ್ಲಿ ರೇಷ್ಮೆ ವ್ಯವಸಾಯವನ್ನು ಅಭಿವೃದ್ಧಿ ಪಡಿಸುವುದಕ್ಕೋಸ್ಕರ ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದೆ.

ರೇಷ್ಮೆಯು ಹಿಪ್ಪುನೇರಳೆಯನ್ನು ಬೆಳೆಯುವವರೆಗಿನ ಭಾಗವು ವ್ಯವಸಾಯದ ವ್ಯಾಪ್ತಿಗೂ ಉಳಿದ ಭಾಗವು ಕೈಗಾರಿಕಾ ವ್ಯಾಪ್ತಿಗೂ ಸೇರಿದುದಾಗಿರುತ್ತದೆ. ಜಿಲ್ಲೆಯಲ್ಲಿ 1992-93 ರಲ್ಲಿ 13 ತಾಂತ್ರಿಕ ಕೇಂದ್ರಗಳು, 78 ಚಾಕಿ ಸಾಕಾಣಿಕಾ ಕೇಂದ್ರಗಳು, 2 ಬಿತ್ತನೆ ಕೋಠಿಗಳು, 5 ರೇಷ್ಮೆ ಕೃಷಿ ಕ್ಷೇತ್ರಗಳು, 2 ರೇಷ್ಮೆಗೂಡು ಮಾರುಕಟ್ಟೆಗಳು, 2 ರೇಷ್ಮೆ ನೂಲು ಬಿಚ್ಚುವ ಸಂಕೀರ್ಣಗಳು ಮತ್ತು 1 ರೇಷ್ಮೆ ತರಬೇತಿ ಶಾಲೆ ಕಾರ್ಯ ನಿರ್ವಹಿಸುತ್ತಿದ್ದವು. ಇದೇ ಕಾಲಾವಧಿಯಲ್ಲಿ ಜಿಲ್ಲೆಯ 15 ತಾಲೂಕುಗಳ (ನವಲಗುಂದ ಮತ್ತು ಕುಂದಗೋಳವನ್ನು ಬಿಟ್ಟು) 418 ಹಳ್ಳಿಗಳಲ್ಲಿ ರೇಷ್ಮೆ ಕೃಷಿ ಕಾರ್ಯಾಚರಣೆಯಲ್ಲಿದ್ದು ಪರಿಶಿಷ್ಟ ಜಾತಿಯ 218 ಕುಟುಂಬಗಳು, ಪರಿಶಿಷ್ಟ ಪಂಗಡದ 4 ಕುಟುಂಬಗಳು ಮತ್ತು ಇತರ ಜಾತಿಯ 1,649 ಕುಟುಂಬಗಳು ಒಟ್ಟಿಗೆ 1,871 ಕುಟುಂಬಗಳು ರೇಷ್ಮೆ ಕೃಷಿಯನ್ನು ಅವಲಂಬಿಸಿದ್ದವು. 1992-93 ರಲ್ಲಿ ಜಿಲ್ಲೆಯಲ್ಲಿ ಹಿಪ್ಪುನೇರಳೆಯನ್ನು ಬೆಳೆದಿದ್ದ ಭೂಮಿಯ ವಿಸ್ತೀರ್ಣ 1118.12 ಹೆಕ್ಟೇರು. ಇದೇ ಕಾಲಾವಧಿಯಲ್ಲಿ ಫಲಾನುಭವಿಗಳಿಗೆ ವಿತರಿಸಲಾದ ರೋಗರಹಿತ ಮೊಟ್ಟೆಗಳ ಸಂಖ್ಯೆ ಮತ್ತು ಪಡೆದ ಗೂಡಿನ ಪ್ರಮಾಣ ಈ ಮುಂದೆ ಕೊಟ್ಟಿರುವಂತೆ ಇತ್ತು. ಪಡೆದ ಗೂಡಿನ ಪ್ರಮಾಣವು ಟನ್‌ಗಳಲ್ಲಿದ್ದು ಆವರಣದಲ್ಲಿ ಕೊಡಲಾಗಿದೆ; ಮಿಶ್ರ 6,10,299(203.764);ವಿದೇಶಿ 17,960(45.611);ಒಟ್ಟು 7,89,900(240.375). ಇದೇ ಕಾಲಾವಧಿಯಲ್ಲಿ ಜಿಲ್ಲೆಯಲ್ಲಿನ 100 ಮೊಟ್ಟೆಗಳ ಇಳುವರಿ ಪ್ರಮಾಣ ಮಿಶ್ರ: 32 ಕೆ.ಜಿ. ವಿದೇಶಿ 25 ಕೆ.ಜಿ. ಸರಾಸರಿ 31 ಕೆ.ಜಿ. ಇತ್ತು.

ಜಿಲ್ಲೆಯಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ ಪಡಿಸುವುದಕ್ಕಾಗಿ 1992-93 ರಲ್ಲಿ ವಿಶೇಷ ಘಟಕ ಯೋಜನೆಯಡಿಯಲ್ಲಿ 249 ಫಲಾನುಭವಿಗಳಿಗೆ 6.68 ಲಕ್ಷ ರೂಪಾಯಿ ಮೊತ್ತದಲ್ಲಿ ಹಿಪ್ಪುನೇರಳೆ ಕಡ್ಡಿ, ರಾಸಾಯನಿಕ ಗೊಬ್ಬರ, ಕೀಟನಾಶಕ ಮತ್ತು ಹುಳು ಸಾಕುವ ಉಪಕರಣಗಳನ್ನು ಉಚಿತವಾಗಿ ಸರಬರಾಜು ಮಾಡಲಾಗಿದೆ. ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆಯಡಿಯಲ್ಲಿ 0.92 ಲಕ್ಷ ರೂಪಾಯಿ ಖರ್ಚುಮಾಡಿ 1.10 ಲಕ್ಷ ಸಸಿಗಳನ್ನು ಬೆಳೆಸಲಾಗಿದೆ ಮತ್ತು 20 ಫಲಾನುಭವಿಗಳಿಗೆ ಸೌಲಭ್ಯವನ್ನು ಒದಗಿಸಲಾಗಿದೆ. ಬರಸಂಭವ ಪ್ರದೇಶ ಅಭಿವೃದ್ಧಿ ಯೋಜನೆಯಡಿಯಲ್ಲಿ 0.98 ಲಕ್ಷ ರೂಪಾಯಿ ಖರ್ಚುಮಾಡಿ 5 ಲಕ್ಷ ಸಸಿಗಳನ್ನು ಬೆಳಸಿ ರೈತರಿಗೆ ಉಚಿತವಾಗಿ ಸರಬರಾಜು ಮಾಡಲಾಗಿದೆ.

## ಕೋಷ್ಟಕ 5.11

ಧಾರವಾಡ ಜಿಲ್ಲೆಯಲ್ಲಿ 1993 ರ ಮಾರ್ಚ್ ಅಂತ್ಯದಲ್ಲಿದ್ದ ತಾಲೂಕುವಾರು
ರೇಷ್ಮೆ ಕೃಷಿ ಮಾಹಿತಿಯನ್ನು ಈ ಪಟ್ಟಿಯಲ್ಲಿ ಕೊಟ್ಟಿದೆ.

| ಕ್ರ.ಸಂ. | ತಾಲೂಕು | ಹಿಪ್ಪುನೇರಳೆ ಬೆಳೆಯುವ ಹಳ್ಳಿಗಳ ಸಂಖ್ಯೆ | ಹಿಪ್ಪುನೇರಳೆ ಬೆಳೆಯುವ ಕುಟುಂಬಗಳ ಸಂಖ್ಯೆ | | | | ಹಿಪ್ಪುನೇರಳೆ ಬೆಳೆಯುವ ಪ್ರದೇಶ (ಹೆಕ್ಟೇರು.) | ಕ್ರ.ಸಂ. | ತಾಲೂಕು | ಹಿಪ್ಪುನೇರಳೆ ಬೆಳೆಯುವ ಹಳ್ಳಿಗಳ ಸಂಖ್ಯೆ | ಹಿಪ್ಪುನೇರಳೆ ಬೆಳೆಯುವ ಕುಟುಂಬಗಳ ಸಂಖ್ಯೆ | | | | ಹಿಪ್ಪುನೇರಳೆ ಬೆಳೆಯುವ ಪ್ರದೇಶ (ಹೆಕ್ಟೇರು.) |
|---|---|---|---|---|---|---|---|---|---|---|---|---|---|---|---|
| | | | ಪ.ಜಾತಿ | ಪ.ಪಂ. | ಇತರ | ಒಟ್ಟು | | | | | ಪ.ಜಾತಿ | ಪ.ಪಂ. | ಇತರ | ಒಟ್ಟು | |
| 1 | 2 | 3 | 4 | 5 | 6 | 7 | 8 | 1 | 2 | 3 | 4 | 5 | 6 | 7 | 8 |
| 1 | ಬ್ಯಾಡಗಿ | 27 | 7 | 1 | 85 | 93 | 54.8 | 9 | ಮುಂಡರಗಿ | 24 | 25 | 1 | 103 | 129 | 86.4 |
| 2 | ಗದಗ | 29 | 41 | - | 165 | 206 | 106.44 | 10 | ನರಗುಂದ | 6 | - | - | 22 | 22 | 12.0 |
| 3 | ಹಾನಗಲ್ | 34 | 12 | - | 77 | 89 | 40.8 | 11 | ರೋಣ | 47 | 26 | - | 211 | 237 | 114.8 |
| 4 | ಹಾವೇರಿ | 25 | 7 | - | 156 | 163 | 78.12 | 12 | ರಾಣೆಬೆನ್ನೂರು | 46 | 17 | - | 246 | 263 | 145.64 |
| 5 | ಹಿರೇಕೆರೂರು | 35 | 12 | 2 | 87 | 101 | 70.08 | 13 | ಸವಣೂರು | 23 | 7 | - | 74 | 81 | 44.08 |
| 6 | ಹುಬ್ಬಳ್ಳಿ | 22 | 12 | - | 89 | 101 | 94.48 | 14 | ಶಿಗ್ಗಾಂವಿ | 21 | 9 | - | 96 | 105 | 86.8 |

| 1 | 2 | 3 | 4 | 5 | 6 | 7 | 8 | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|---|---|---|---|---|---|---|
| 7 | ಕಲಘಟಗಿ | 18 | 7 | - | 69 | 76 | 32.88 | 15 | ಶಿರಹಟ್ಟಿ | 36 | 29 | - | 135 | 164 | 122.0 |
| 8 | ಧಾರವಾಡ | 25 | 7 | - | 34 | 41 | 28.8 | | | | | | | | |
| | | | | | | | | | ಒಟ್ಟು | 418 | 218 | 4 | 1649 | 1871 | 1118.12 |

ಆಧಾರ: ರೇಷ್ಮೆ ಕೃಷಿ ಉಪ ನಿರ್ದೇಶಕರ ಕಛೇರಿ, ಧಾರವಾಡ.

## ವಿಶ್ವ ಯೋಜನೆ

ಪರಂಪರಾನುಗತವಾಗಿ ಬಂದ ಕುಶಲಕಲೆ ಹಾಗೂ ಗ್ರಾಮೀಣ ಕೈಗಾರಿಕೆಗಳನ್ನು ಪುನರುಜ್ಜೀವನ ಗೊಳಿಸುವುದು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ದೊರಕುವ ಕಚ್ಚಾಮಾಲುಗಳನ್ನು ಆಧರಿಸಿ ಅಲ್ಲಿನ ಯುವಕರಿಗೆ ಉತ್ಪನ್ನಕಾರಕ ಉದ್ಯೋಗಾವಕಾಶವನ್ನು ಕಲ್ಪಿಸುವುದು ವಿಶ್ವ ಯೋಜನೆಯ ಗುರಿ. ಇದು ಸರ್.ಎಂ. ವಿಶ್ವೇಶ್ವರಯ್ಯನವರ ಸ್ಮರಣಾರ್ಥ ಹೀಗೆ ಹೆಸರಿಸಲ್ಪಟ್ಟಿದೆ. ಗ್ರಾಮೀಣ ಕರ್ನಾಟಕದಲ್ಲಿ ಕುಶಲಕಲೆಗಾರರು ಎದುರಿಸುತ್ತಿರುವ ಕಚ್ಚಾ ವಸ್ತುವಿನ ಅಭಾವ, ಸೂಕ್ತ ಮಾರುಕಟ್ಟೆಯ ಕೊರತೆ, ಆಧುನಿಕ ತಂತ್ರಜ್ಞಾನದ ಪೈಪೋಟಿಯನ್ನು ತಡೆದು ಅವರಲ್ಲಿ ಅರ್ಥಪೂರ್ಣ ಬದಲಾವಣೆಯನ್ನು ತರುವ ಉದ್ದೇಶದಿಂದ 2 ನೇಯ ಅಕ್ಟೋಬರ್ 1991 ರಿಂದ ಈ ಯೋಜನೆಯನ್ನು ಜಾರಿಗೆ ತರಲಾಯಿತು. ಈ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿರುವುದರಲ್ಲಿ ಧಾರವಾಡ ಜಿಲ್ಲೆಯು ರಾಜ್ಯದಲ್ಲಿಯೇ ಮೊದಲನೆಯ ಸ್ಥಾನವನ್ನು ಹೊಂದಿದೆ. ಈ ಯೋಜನೆಯಡಿಯಲ್ಲಿ ಕುಶಲ ಗ್ರಾಮೀಣ ಕೈಗಾರಿಕಾ ಚಟುವಟಿಕೆಗಳಿಗೆ ಸಾಂಸ್ಥಿಕ ಸ್ವರೂಪ ನೀಡುವುದು, ಸೂಕ್ತವೆನಿಸಿದ ಕೈಗಾರಿಕಾ ಚಟುವಟಿಕೆಗಳಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳಲು ಅಗತ್ಯ ತರಬೇತಿ ನೀಡುವುದು ಮತ್ತು ಸ್ವಂತ ಉದ್ಯಮ ಸ್ಥಾಪಿಸಲು ಆರ್ಥಿಕ ಬೆಂಬಲ ಕೊಡುವುದು ಮೊದಲಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

1993-94 ನೇಯ ಸಾಲಿನ ವಿಶ್ವಯೋಜನೆ ಕಾರ್ಯಕ್ರಮದಡಿಯಲ್ಲಿ ಜಿಲ್ಲೆಯ ತಾಲೂಕುವಾರು ಮತ್ತು ಗ್ರಾಮವಾರು ಫಲಾನುಭವಿಗಳ ಸಂಖ್ಯೆಯನ್ನು ಮತ್ತು ನೆರವನ್ನೊದಗಿಸಿದ ಹಣಕಾಸು ಸಂಸ್ಥೆ ಹಾಗೂ ಅವು ಒದಗಿಸಿದ ನೆರವಿನ ಮೊತ್ತವನ್ನು ಈ ಮುಂದಿಕೊಡಲಾಗಿದೆ. ಧಾರವಾಡ ತಾಲೂಕಿನ ಗರಗದ 25 ಫಲಾನುಭವಿಗಳು ಖಾದಿ ನೂಲನ್ನು ಉತ್ಪಾದಿಸುವುದಕ್ಕಾಗಿ ಖಾದಿ ಮಂಡಳಿಯಿಂದ 2 ಲಕ್ಷ ರೂಪಾಯಿ ಪಡೆದಿರುತ್ತಾರೆ. ಇದೇ ಗ್ರಾಮದ 25 ಫಲಾನುಭವಿಗಳು ಕಸೂತಿ ಕೆಲಸಕ್ಕಾಗಿ ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ 88 ಸಾವಿರ ರೂಪಾಯಿ ಸಾಲ ಪಡೆದಿರುತ್ತಾರೆ. ಮನವಳ್ಳಿ ಗ್ರಾಮದ 40 ಫಲಾನುಭವಿಗಳು ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ 1.20 ಲಕ್ಷ ರೂಪಾಯಿ ಸಾಲ ಸೌಲಭ್ಯ ಪಡೆದಿರುವರು. ಹುಬ್ಬಳ್ಳಿ ತಾಲೂಕಿನ ಶೆರೇವಾಡ ಗ್ರಾಮದ 25 ಫಲಾನುಭವಿಗಳು ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಬಿದಿರಿನ ವಸ್ತು ಉತ್ಪಾದನೆಗಾಗಿ 1.50 ಲಕ್ಷ ರೂಪಾಯಿ ಸಾಲ ಪಡೆದಿರುತ್ತಾರೆ. ಅದರಗುಂಚಿಯ 25 ಫಲಾನುಭವಿಗಳು ಅಗರಬತ್ತಿ ತಯಾರಿಕೆಗಾಗಿ ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ 1.25 ಲಕ್ಷ ರೂ ಪಡೆದಿರುವರು. ರಾಮಾಪುರದ 5 ಫಲಾನುಭವಿಗಳು ಬಡಗಿತನಕ್ಕೆ ಖಾದಿ ಮಂಡಳಿಯಿಂದ 50 ಸಾವಿರ ರೂಪಾಯಿಗಳನ್ನು ಮತ್ತು ಇದೇ ಗ್ರಾಮದ 10 ಫಲಾನುಭವಿಗಳು ಕುಂಬಾರಿಕೆಗಾಗಿ 1 ಲಕ್ಷ ರೂಪಾಯಿಗಳನ್ನು ಖಾದಿ ಮಂಡಳಿಯಿಂದ ಪಡೆದಿರುತ್ತಾರೆ. ನವಲಗುಂದ ತಾಲೂಕಿನ ಮೊರಬ ಗ್ರಾಮದ 12 ಫಲಾನುಭವಿಗಳು ನೇಕಾರಿಕೆಗಾಗಿ ಮತ್ತು ಅಣ್ಣಿಗೇರಿಯ ಒಬ್ಬ ಫಲಾನುಭವಿಯು ಹಣ್ಣು ಸಂಸ್ಕರಣೆಗಾಗಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಅನುಕ್ರಮವಾಗಿ 96 ಸಾವಿರ ರೂಪಾಯಿ ಮತ್ತು 3 ಲಕ್ಷ ರೂಪಾಯಿಗಳನ್ನು ಪಡೆದಿರುವರು.

ಕಲಘಟಗಿ ತಾಲೂಕಿನ ಹೂಲಿಕಟ್ಟಿ ಗ್ರಾಮದ 1 ಘಟಕ (25 ಫಲಾನುಭವಿಗಳು) ಕಸಬರಿಗೆ ಸರಬರಾಜಿಗಾಗಿ 60,000 ರೂಪಾಯಿಗಳನ್ನು ಮತ್ತು ಬಮ್ಮಿಗಟ್ಟಿ ಗ್ರಾಮದ 15 ಫಲಾನುಭವಿಗಳು ಕುಂಬಾರಿಕೆಗಾಗಿ 1.50 ಲಕ್ಷ ರೂಪಾಯಿಗಳನ್ನು ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದಿರುತ್ತಾರೆ. ಗಂಜಿಗಟ್ಟಿ ಗ್ರಾಮದ 4 ಫಲಾನುಭವಿಗಳು ಲೈನ್ಸ್ ಗ್ರೈಂಡಿಂಗ್‌ಗಾಗಿ ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ 3 ಲಕ್ಷ ರೂಪಾಯಿ ಸಾಲ ಪಡೆದಿರುತ್ತಾರೆ. ಗದಗ ತಾಲೂಕಿನ ಗದಗದ 1 ಘಟಕ (40 ಫಲಾನುಭವಿಗಳು) ಕಸಬರಿಕೆ ಉದ್ಯಮಕ್ಕಾಗಿ 2.80 ಲಕ್ಷ ರೂಪಾಯಿಗಳನ್ನು, 5 ಫಲಾನುಭವಿಗಳು ನೋಟು ಬುಕ್ ತಯಾರಿಕೆಗಾಗಿ 2 ಲಕ್ಷ ರೂಪಾಯಿಗಳನ್ನು

ಗದಗ ತಾ।। ನರಸಾಪುರದ 25 ಫಲಾನುಭವಿಗಳು ವಿದ್ಯುತ್ ಮಗ್ಗ ನಡೆಸುವುದಕ್ಕಾಗಿ 18.75 ಲಕ್ಷ ರೂಪಾಯಿಗಳನ್ನು, ಹರ್ಲಾಪುರದ 20 ಫಲಾನುಭವಿಗಳು ಮತ್ತು ಹುಲಕೋಟಿಯ 30 ಫಲಾನುಭವಿಗಳು ಕಂಬಳಿ ಉದ್ಯಮಕ್ಕಾಗಿ ಅನುಕ್ರಮವಾಗಿ 2 ಲಕ್ಷ ರೂಪಾಯಿ ಮತ್ತು 3 ಲಕ್ಷ ರೂಪಾಯಿಗಳನ್ನು ಮತ್ತು ಲಕ್ಕುಂಡಿ ಗ್ರಾಮದ 10 ಫಲಾನುಭವಿಗಳು ವಿದ್ಯುತ್ ಮಗ್ಗ ತೆರೆಯುವುದಕ್ಕಾಗಿ 7.50 ಲಕ್ಷ ರೂಪಾಯಿಗಳನ್ನು ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಸಾಲ ಪಡೆದಿರುತ್ತಾರೆ.

ರೋಣ ತಾಲೂಕಿನ 1 ಘಟಕದ 100 ಫಲಾನುಭವಿಗಳು ಖಾದಿ ನೂಲು ಉತ್ಪಾದಿಸುವುದಕ್ಕಾಗಿ 8 ಲಕ್ಷ ರೂಪಾಯಿಗಳನ್ನು ಬ್ಯಾಂಕಿನಿಂದ ಸಾಲ ಪಡೆದಿರುತ್ತಾರೆ. ಗಜೇಂದ್ರಗಡದ 35 ಫಲಾನುಭವಿಗಳು ಕೈಮಗ್ಗ ತೆರೆಯುವುದಕ್ಕಾಗಿ ಕರ್ನಾಟಕ ಹಣಕಾಸು ನಿಗಮದಿಂದ 2.80 ಲಕ್ಷ ಸಾಲ ಸೌಲಭ್ಯ ಪಡೆದಿರುವರು. ನರಗುಂದ ತಾಲೂಕಿನ ನರಗುಂದದ 25 ಫಲಾನುಭವಿಗಳು ನೂಲಿನ ಹಗ್ಗ ತಯಾರಿಕೆಗಾಗಿ ಬ್ಯಾಂಕು ಮತ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ 2.50 ಲಕ್ಷ ರೂಪಾಯಿ ಪಡೆದಿರುವರು. ಇದೇ ಗ್ರಾಮದ 25 ಫಲಾನುಭವಿಗಳು ಉಣ್ಣೆಯ ಕಂಬಳಿ ತಯಾರಿಕೆಗಾಗಿ 3.25 ಲಕ್ಷ ರೂಪಾಯಿಗಳನ್ನು ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಪಡೆದಿರುತ್ತಾರೆ. ಇದೇ ನಿಗಮವು ಚಿಕ್ಕನರಗುಂದದ 1 ಘಟಕಕ್ಕೆ (50 ಫಲಾನುಭವಿಗಳು) ಕಂಬಳಿ ನೇಯ್ಗೆಗಾಗಿ 5 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಖಾದಿ ಗ್ರಾಮೋದ್ಯೋಗ ಮಂಡಳಿಯು ಕೊಣ್ಣೂರ 25 ಫಲಾನುಭವಿಗಳಿಗೆ ಕಂಬಳಿ ಉದ್ಯಮಕ್ಕಾಗಿಯು, ಶಿರೋಳದ 10 ಫಲಾನುಭವಿಗಳಿಗೆ ವಿದ್ಯುತ್ ಮಗ್ಗ ನಡೆಸುವುದಕ್ಕೂ ಅನುಕ್ರಮವಾಗಿ 2.50 ಲಕ್ಷ ರೂಪಾಯಿ ಮತ್ತು 7.50 ಲಕ್ಷ ರೂಪಾಯಿ ಸಾಲ ಒದಗಿಸಿದೆ. ಮುಂಡರಗಿ ತಾಲೂಕಿನ ಮುಂಡರಗಿಯ 1 ಘಟಕಕ್ಕೆ (60 ಫಲಾನುಭವಿಗಳು) ಖಾದಿ ನೂಲುವುದು ಮತ್ತು ನೇಯ್ಗೆಗಾಗಿ ಖಾದಿ ಗ್ರಾಮೋದ್ಯೋಗ ಮಂಡಳಿಯು 2.40 ಲಕ್ಷ ರೂಪಾಯಿ ಸಾಲ ಕೊಟ್ಟಿದೆ. ಇದೇ ಗ್ರಾಮದ 40 ಫಲಾನುಭವಿಗಳಿಗೆ ಕಸೂತಿ ಕೆಲಸಕ್ಕಾಗಿ ರಾಷ್ಟ್ರೀಕೃತ ಬ್ಯಾಂಕು 1.60 ಲಕ್ಷ ರೂಪಾಯಿ ಕೊಟ್ಟಿದೆ. ಹಿರೇವಡ್ಡರಟ್ಟಿಯಲ್ಲಿ ಖಾದಿ ನೂಲು ತಯಾರಿಕೆಗಾಗಿ 30 ಫಲಾನುಭವಿಗಳಿಗೆ ಬ್ಯಾಂಕ್ ಮತ್ತು ಕರ್ನಾಟಕ ರಾಜ್ಯ ಹಣಕಾಸು ನಿಗಮ ಇವೆರಡೂ ಸೇರಿ 2.40 ಲಕ್ಷ ರೂಪಾಯಿ ಸಾಲ ಒದಗಿಸಿವೆ.

ಕರ್ನಾಟಕ ಹಣಕಾಸು ನಿಗಮವು ಹಾವೇರಿ ತಾಲೂಕಿನ ಇಜಾರಿಲಕಮಾಪುರದ ಒಂದು ಕಸೂತಿ ಘಟಕಕ್ಕೆ (25 ಫಲಾನುಭವಿಗಳು) 50 ಸಾವಿರ ರೂಪಾಯಿಗಳನ್ನೂ, ಇದೇ ಗ್ರಾಮದ ಒಂದು ಅಗರಬತ್ತಿ ಘಟಕಕ್ಕೆ (25 ಫಲಾನುಭವಿಗಳು) 1.25 ಲಕ್ಷ ರೂಪಾಯಿಗಳನ್ನು ಒದಗಿಸಿದೆ. ಖಾದಿ ಮಂಡಳಿಯು ಗುತ್ತಲ ಗ್ರಾಮದ 1 ಘಟಕಕ್ಕೆ, ತೋಟದಯಲ್ಲಾಪುರದ 1 ಘಟಕಕ್ಕೆ (ಎರಡರಲ್ಲೂ 25 ಫಲಾನುಭವಿಗಳು) ಖಾದಿ ನೂಲು ಉತ್ಪಾದನೆಗಾಗಿ ಪ್ರತಿಯೊಂದಕ್ಕೂ 2 ಲಕ್ಷ ರೂಪಾಯಿಯಂತೆ ಸಾಲ ನೀಡಿದೆ. ಯಲ್ಲಾಪುರದ 5 ಫಲಾನುಭವಿಗಳಿಗೆ ಕುಸುಬಿ ಎಣ್ಣೆ ಉತ್ಪಾದನೆಗಾಗಿ 5 ಲಕ್ಷ ರೂಪಾಯಿ ಒದಗಿಸಿದೆ. ಬ್ಯಾಡಗಿ ತಾಲೂಕಿನ ಕೆಂಗೊಂಡದ 20 ಫಲಾನುಭವಿಗಳ ಕುಂಬಾರಿಕೆಗಾಗಿ ಮತ್ತು ಬುಡಪನಹಳ್ಳಿಯ 15 ಫಲಾನುಭವಿಗಳ ಸುಣ್ಣಗಾರಿಕೆಗಾಗಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಅನುಕ್ರಮವಾಗಿ 2 ಲಕ್ಷ ರೂಪಾಯಿ ಮತ್ತು 3.75 ಲಕ್ಷ ರೂಪಾಯಿ ಒದಗಿಸಿದೆ. ಬಡಗಿತನಕ್ಕಾಗಿ ಬ್ಯಾಡಗಿಯ 10 ಫಲಾನುಭವಿಗಳಿಗೆ ಬ್ಯಾಂಕು 5 ಲಕ್ಷ ರೂಪಾಯಿಗಳನ್ನು ಒದಗಿಸಿದೆ. ಛತ್ರತಾಂಡಾದ 50 ಫಲಾನುಭವಿಗಳಿಗೆ ಲಂಬಾಣಿ ಉಡುಪು ತಯಾರಿಕೆಗಾಗಿ ಬ್ಯಾಂಕು ಮತ್ತು ಕರ್ನಾಟಕ ರಾಜ್ಯ ಹಣಕಾಸು ನಿಗಮವು 2 ಲಕ್ಷ ರೂಪಾಯಿ ಸಾಲ ನೀಡಿವೆ. ಇದೇ ನಿಗಮವು ಮೋಟೆಬೆನ್ನೂರಿನ 2 ಫಲಾನುಭವಿಗಳಿಗೆ ಮೆಣಸಿನಕಾಯಿ ಪುಡಿ ತಯಾರಿಕೆಗಾಗಿ 5 ಲಕ್ಷ ರೂಪಾಯಿ ನೀಡಿದೆ. ಹಿರೇಕೆರೂರು ತಾಲೂಕು ಹಳ್ಳೂರು ಗ್ರಾಮದ 10 ಫಲಾನುಭವಿಗಳಿಗೆ ಕುಂಬಾರಿಕೆಗಾಗಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು 1 ಲಕ್ಷ ರೂಪಾಯಿ ಒದಗಿಸಿದೆ. ಬೆಟ್ಟಹಳ್ಳಿ ಗ್ರಾಮದ 10 ಫಲಾನುಭವಿಗಳು ಸುಣ್ಣ ತಯಾರಿಕೆಗಾಗಿ ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ 1 ಲಕ್ಷ ರೂಪಾಯಿ ಪಡೆದಿರುತ್ತಾರೆ. ಹಿರೇಕೆರೂರಿನ 5 ಫಲಾನುಭವಿಗಳು ಇಟ್ಟಿಗೆ, ಸಿಮೆಂಟ್, ಗ್ರಿಲ್ ಮೊದಲಾದವುಗಳ ತಯಾರಿಕೆಗಾಗಿ ರಾಜ್ಯ ಹಣಕಾಸು ನಿಗಮದಿಂದ 1.25 ಲಕ್ಷ ರೂ. ಸಾಲ ಪಡೆದಿರುತ್ತಾರೆ.

ಕರ್ನಾಟಕ ರಾಜ್ಯ ಹಣಕಾಸು ನಿಗಮವು ರಾಣೆಬೆನ್ನೂರು ತಾಲೂಕಿನ ದೇವರಗುಡ್ಡ ಗ್ರಾಮದ 2 ಅಗರಬತ್ತಿ ಉದ್ಯಮಿಗಳಿಗೆ (ಒಟ್ಟು 50 ಫಲಾನುಭವಿಗಳು) 2.50 ಲಕ್ಷ ರೂಪಾಯಿ ಸಾಲ ಒದಗಿಸಿದೆ. ಇದರಿಂದ ಹಿರೇಬಿದರಿ ಗ್ರಾಮದ 20 ಫಲಾನುಭವಿಗಳು ಉಣ್ಣೆ ನೂಲು ತಯಾರಿಕೆಗಾಗಿ 1.60 ಲಕ್ಷ ರೂ. ಸಾಲ ಪಡೆದಿರುವರು. ಐರಣಿಯ 10 ಫಲಾನುಭವಿಗಳು ಪಾದರಕ್ಷೆ ತಯಾರಿಕೆಗಾಗಿ

ಖಾದಿ ಮಂಡಳಿಯಿಂದ 50 ಸಾವಿರ ರೂಪಾಯಿ ಸಾಲ ಪಡೆದಿರುತ್ತಾರೆ. ಇದೇ ಗ್ರಾಮದ 2 ಘಟಕಗಳು (20 ಫಲಾನುಭವಿಗಳು) ಮೆಣಸಿನಕಾಯಿಪುಡಿ ಮತ್ತು ಮಸಾಲೆಪುಡಿ ತಯಾರಿಕೆಗಾಗಿ ಖಾದಿ ಮಂಡಳಿಯಿಂದ 2 ಲಕ್ಷ ರೂ. ಸಾಲ ಪಡೆದಿರುವರು. ಶಿರಹಟ್ಟಿ ತಾಲೂಕಿನ ಶಿರಹಟ್ಟಿಯ 25 ಫಲಾನುಭವಿಗಳು ಪಾದರಕ್ಷೆ ತಯಾರಿಕೆಗಾಗಿ ಖಾದೀ ಮಂಡಳಿಯಿಂದ 1.25 ಲಕ್ಷ ರೂಪಾಯಿ ಸಾಲ ಪಡೆದಿರುತ್ತಾರೆ. ಇದೇ ಗ್ರಾಮದ 1 ಘಟಕವು (50 ಫಲಾನುಭವಿಗಳು) ಉಣ್ಣೆನೂಲು ತಯಾರಿಕೆಗಾಗಿ ಬ್ಯಾಂಕ್ ಮತ್ತು ಹಣಕಾಸು ಸಂಘದಿಂದ 1.25 ಲಕ್ಷ ರೂಪಾಯಿ ಸಾಲ ಪಡೆದಿದೆ. ಶಿಗ್ಲಿ ಗ್ರಾಮದ 25 ಫಲಾನುಭವಿಗಳು ವಿದ್ಯುತ್ ಮಗ್ಗ ಸ್ಥಾಪನೆಗಾಗಿ ಬ್ಯಾಂಕ್ ಮತ್ತು ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ 18.75 ಲಕ್ಷ ರೂ. ಸಾಲ ಪಡೆದಿರುತ್ತಾರೆ. ಬಾಲೆ ಹೊಸೂರು ಗ್ರಾಮದ 1 ಘಟಕವ 50 ಫಲಾನುಭವಿಗಳು ಉಣ್ಣೆ ನೂಲು ತಯಾರಿಕೆಗಾಗಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ 2 ಲಕ್ಷ ರೂಪಾಯಿ ಸಾಲ ಪಡೆದಿರುವರು. ಸವಣೂರು ತಾಲೂಕಿನ ಯಲವಿಗಿ ಗ್ರಾಮದ 1 ಘಟಕ (25 ಫಲಾನುಭವಿಗಳು) ಅಗರಬತ್ತಿ ಉದ್ಯಮಕ್ಕಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ 1.25 ಲಕ್ಷ ರೂ. ಸಾಲ ಪಡೆದಿರುವರು. ಹುರಳಿಕುಪ್ಪಿ ಗ್ರಾಮದ 20 ನೇಕಾರರು ಉಣ್ಣೆ ನೇಕಾರಿಕೆಗಾಗಿ ಬ್ಯಾಂಕ್ ಮತ್ತು ಹಣಕಾಸು ಸಂಘದಿಂದ 2 ಲಕ್ಷ ರೂಪಾಯಿ ಸಾಲ ಪಡೆದಿರುತ್ತಾರೆ. ಸವಣೂರಿನ ಎರಡು ಘಟಕಗಳ 20 ಫಲಾನುಭವಿಗಳು ಕರ್ನಾಟಕ ಬ್ಯಾಂಕು ಮತ್ತು ಹಣಕಾಸು ಸಂಘದಿಂದ ಖಾದಿ ನೇಯುವುದಕ್ಕಾಗಿ 1.60 ಲಕ್ಷ ರೂಪಾಯಿ ಪಡೆದಿರುವರು.

ಶಿಗ್ಗಾಂವಿ ಊರಿನ 20 ಫಲಾನುಭವಿಗಳು ಕುಂಬಾರಿಕೆಗಾಗಿ ಸಿಂಡಿಕೇಟ್ ಬ್ಯಾಂಕಿನಿಂದ 1 ಲಕ್ಷ ರೂಪಾಯಿ ಪಡೆದಿರುತ್ತಾರೆ. ಇದೇ ಊರಿನ 10 ಫಲಾನುಭವಿಗಳು ನಾರಿನ ಹಗ್ಗ ತಯಾರಿಕೆಗಾಗಿ 80 ಸಾವಿರ ರೂಪಾಯಿಗಳನ್ನು, ಪತ್ರಾವಳಿಯನ್ನು ತಯಾರಿಸುವುದಕ್ಕಾಗಿ 20 ಫಲಾನುಭವಿಗಳು 60 ಸಾವಿರ ರೂಪಾಯಿಗಳನ್ನು ಸ್ಥಳೀಯ ಬ್ಯಾಂಕಿನಿಂದ ಪಡೆದಿರುತ್ತಾರೆ. ಬಂಕಾಪುರದ 10 ಫಲಾನುಭವಿಗಳು ಚರ್ಮಗಾರಿಕೆಗಾಗಿ 1.80 ಲಕ್ಷ ರೂಪಾಯಿಗಳನ್ನು, ಮಂಡಕ್ಕಿ ಭಟ್ಟಿಗಾಗಿ 10 ಫಲಾನುಭವಿಗಳು 1.50 ಲಕ್ಷ ರೂಪಾಯಿಗಳನ್ನು ಸ್ಥಳೀಯ ಬ್ಯಾಂಕಿನಿಂದ ಸಾಲ ಪಡೆದಿರುವರು. ತಡಸ ಗ್ರಾಮದ 25 ಫಲಾನುಭವಿಗಳು ನಾರಿನ ಹಗ್ಗ ತಯಾರಿಕೆಗಾಗಿ 2ಲಕ್ಷ ರೂಪಾಯಿಗಳನ್ನು ಪಡೆದಿರುವರು. ಹಾನಗಲ್ ತಾಲೂಕಿನ 8ಫಲಾನುಭವಿಗಳು ಮತ್ತು ತಿಳವಳ್ಳಿ ಗ್ರಾಮದ 17ಫಲಾನುಭವಿಗಳು ಉಣ್ಣೆ ಹೆಣಿಗೆ ಕಾರ್ಯಕ್ಕಾಗಿ ಬ್ಯಾಂಕಿನಿಂದ ಅನುಕ್ರಮವಾಗಿ 1.04 ಲಕ್ಷ ರೂಪಾಯಿ ಮತ್ತು 2.21 ಲಕ್ಷ ರೂಪಾಯಿ ಪಡೆದಿರುವರು. ಆಡೂರು ಗ್ರಾಮದ 20 ಫಲಾನುಭವಿಗಳು ಕಂಬಳಿ ನೇಕಾರಿಕೆಗಾಗಿ ಹಣಕಾಸು ಸಂಸ್ಥೆಯಿಂದ 2 ಲಕ್ಷ ರೂಪಾಯಿ ಪಡೆದಿರುತ್ತಾರೆ. ಕುಂದಗೋಳ ತಾಲೂಕಿನ ಹಿರೇನರ್ತಿ ಗ್ರಾಮದ 20 ಫಲಾನುಭವಿಗಳು ಉಣ್ಣೆ ನೂಲು ಮತ್ತು ನೇಯ್ಗೆಗಾಗಿ 2 ಲಕ್ಷ ರೂ.ಗಳನ್ನು, ರಾಮಕೊಪ್ಪದ 10 ಫಲಾನುಭವಿಗಳು ಮೆಣಸಿನಕಾಯಿಪುಡಿ ತಯಾರಿಕೆಗಾಗಿ 4 ಲಕ್ಷ ರೂ.ಗಳನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಪಡೆದಿರುವರು. ಯರಗುಪ್ಪಿಯ 1 ಘಟಕ (25 ಫಲಾನುಭವಿಗಳು) ಪಪ್ಪಡ (ಹಪ್ಪಳ) ತಯಾರಿಕೆಗಾಗಿ 1.25 ಲಕ್ಷ ರೂಪಾಯಿಗಳನ್ನು ಮತ್ತು ಮತ್ತೊಂದು ಘಟಕ (25 ಫಲಾನುಭವಿಗಳು) ಮಸಾಲೆ ಪುಡಿಯನ್ನು ತಯಾರಿಸುವುದಕ್ಕಾಗಿ 4 ಲಕ್ಷ ರೂಪಾಯಿಗಳನ್ನು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಸಾಲ ಪಡೆದಿರುತ್ತವೆ.

**ಕೋಷ್ಟಕ 5.12**

1993-94 ನೇ ಸಾಲಿನ ವಿಶ್ವ ಕಾರ್ಯಕ್ರಮದ ಕ್ರಿಯಾ ಯೋಜನೆಯ ಪಟ್ಟಿ

(ಲಕ್ಷ ರೂ.ಗಳಲ್ಲಿ)

| ಅ.ಸಂ. | ತಾಲೂಕು | ಬೆಳವಣಿಗೆಯ ಕೇಂದ್ರಗಳ ಸಂಖ್ಯೆ | ಘಟಕಗಳ ಸಂಖ್ಯೆ | ಫಲಾನುಭವಿಗಳು ತರಬೇತಿ | ಫಲಾನುಭವಿಗಳು ಉತ್ಪಾದನೆ | ಒಟ್ಟು ಉದ್ಯೋಗ ಅವಕಾಶ | ತರಬೇತಿ ವೆಚ್ಚ | ಯೋಜನಾ ವೆಚ್ಚ |
|---|---|---|---|---|---|---|---|---|
| 1 | ಧಾರವಾಡ | 3 | 110 | 25 | 85 | 165 | 0.47 | 7.28 |
| 2 | ಹುಬ್ಬಳ್ಳಿ | 3 | 65 | 50 | 15 | 150 | 0.32 | 4.25 |
| 3 | ನವಲಗುಂದ | 2 | 13 | 12 | 20 | 56 | 0.09 | 3.96 |
| 4 | ಕಲಘಟಗಿ | 3 | 20 | 25 | 19 | 140 | 0.13 | 5.50 |

| ಅ.ಸಂ. | ತಾಲೂಕು | ಬೆಳವಣಿಗೆಯ ಕೇಂದ್ರಗಳ ಸಂಖ್ಯೆ | ಘಟಕಗಳ ಸಂಖ್ಯೆ | ಫಲಾನುಭವಿಗಳು ತರಬೇತಿ | ಫಲಾನುಭವಿಗಳು ಉತ್ಪಾದನೆ | ಒಟ್ಟು ಉದ್ಯೋಗ ಅವಕಾಶ | ತರಬೇತಿ ವೆಚ್ಚ | ಯೋಜನಾ ವೆಚ್ಚ |
|---|---|---|---|---|---|---|---|---|
| 5 | ಗದಗ | 5 | 91 | 100 | 30 | 350 | 1.23 | 36.05 |
| 6 | ರೋಣ | 2 | 36 | 35 | 100 | 215 | 0.50 | 10.30 |
| 7 | ನರಗುಂದ | 4 | 81 | 60 | 75 | 305 | 1.20 | 20.75 |
| 8 | ಮುಂಡರಗಿ | 2 | 71 | - | 130 | 130 | - | 6.40 |
| 9 | ಹಾವೇರಿ | 3 | 9 | 75 | 30 | 125 | 1.09 | 10.75 |
| 10 | ಬ್ಯಾಡಗಿ | 5 | 97 | 50 | 47 | 214 | 0.71 | 17.75 |
| 11 | ಹಿರೇಕೆರೂರು | 3 | 25 | - | 25 | 150 | - | 3.25 |
| 12 | ರಾಣೆಬೆನ್ನೂರು | 3 | 34 | 25 | 75 | 160 | 0.16 | 6.60 |
| 13 | ಸವಣೂರು | 3 | 34 | 45 | 20 | 170 | 0.47 | 4.85 |
| 14 | ಶಿಗ್ಗಾಂವಿ | 3 | 85 | - | 85 | 170 | - | 7.70 |
| 15 | ಶಿರಹಟ್ಟಿ | 3 | 52 | 100 | 50 | 225 | 0.74 | 23.25 |
| 16 | ಹಾನಗಲ್ | 3 | 45 | 17 | 28 | 85 | 0.26 | 5.25 |
| 17 | ಕುಂದಗೋಳ | 3 | 42 | 80 | 10 | 190 | 0.82 | 19.50 |
| | ಒಟ್ಟು | 53 | 910 | 699 | 844 | 3000 | 8.19 | 193.39 |

ಆಧಾರ: ಜಿಲ್ಲಾ ಕೈಗಾರಿಕಾ ಕೇಂದ್ರ ಧಾರವಾಡ

**ಅಂತರಿಕ ಸಾಧನ ಸೌಕರ್ಯಗಳು**

ಜಿಲ್ಲಾ ಕೈಗಾರಿಕಾ ಬೆಳವಣಿಗೆಯು ಅಲ್ಲಿ ದೊರಕುವ ಅಂತರಿಕ ಸಾಧನ ಸೌಕರ್ಯಗಳಾದ (ಇನ್‌ಫ್ರಾಸ್ಟ್ರಕ್ಚರ್), ಸಾರಿಗೆ ಸಂಪರ್ಕ, ಬ್ಯಾಂಕಿಂಗ್, ವಿದ್ಯುತ್, ಕಚ್ಚಾಸರಕುಗಳು, ತರಬೇತಿ ಸಂಸ್ಥೆಗಳು, ಕೈಗಾರಿಕಾ ವಸಾಹತು ಮತ್ತು ನಿವೇಶನಗಳು, ಮಾರುಕಟ್ಟೆ ಮೊದಲಾದವುಗಳ ಸೌಲಭ್ಯವನ್ನು ಅವಲಂಬಿಸಿರುತ್ತದೆ. ಧಾರವಾಡ ಜಿಲ್ಲೆಯಲ್ಲಿ ಈ ಎಲ್ಲಾ ಸೌಲಭ್ಯಗಳ ಲಭ್ಯವಿದೆ. ಅಂತರಿಕ ಸಾಧನ ಸೌಕರ್ಯಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ಈ ಸಂಪುಟದ ತತ್ಸಂಬಂಧ ಅಧ್ಯಾಯಗಳಲ್ಲಿ ಕೊಟ್ಟಿರುವುದರಿಂದ ಅವುಗಳ ಸಂಕ್ಷಿಪ್ತ ಮಾಹಿತಿಯನ್ನೂ ಹಾಗೂ ಈ ಸಂಪುಟದ ಯಾವ ಅಧ್ಯಾಯದಲ್ಲೂ ಬಾರದೇ ಇರುವವುಗಳ ಮಾಹಿತಿಯನ್ನು ವಿವರವಾಗಿಯೂ ಇಲ್ಲಿ ಕೊಟ್ಟಿದೆ.

ಧಾರವಾಡ ಜಿಲ್ಲೆಯಲ್ಲಿ 1992-93 ರಲ್ಲಿ ಒಟ್ಟು 9,382 ಕಿ.ಮೀ. ಉದ್ದದಷ್ಟು ರಸ್ತೆ ಸೌಲಭ್ಯವಿತ್ತು. ಬೆಂಗಳೂರು-ಪುಣೆ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 4, ಜಿಲ್ಲೆಯ ರಾಣೆಬೆನ್ನೂರು, ಹಾವೇರಿ, ಶಿಗ್ಗಾಂವಿ, ಹುಬ್ಬಳ್ಳಿ ಮತ್ತು ಧಾರವಾಡ ತಾಲೂಕು ಕೇಂದ್ರಗಳ ಮೂಲಕ ಹಾದು ಹೋಗುತ್ತದೆ. ಜಿಲ್ಲೆಯ ರೈಲು ರಸ್ತೆಯ ಉದ್ದ 321 ಕಿ.ಮೀ.ಗಳಷ್ಟಿದ್ದು, 41 ರೈಲ್ವೆ ಸ್ಟೇಷನ್‌ಗಳನ್ನು ಮತ್ತು ಮೂರು ಜಂಕ್ಷನ್‌ಗಳನ್ನು ಹೊಂದಿತ್ತು. ಇವು ಜಿಲ್ಲೆಯಲ್ಲಿ ಮತ್ತು ಜಿಲ್ಲೆಯ ಹೊರಭಾಗದಲ್ಲಿ ದೊರಕುವ ಕಚ್ಚಾ ಸರಕುಗಳನ್ನು ಉತ್ಪಾದನಾ ಸ್ಥಳಗಳಿಗೆ ಸಾಗಿಸುವುದಕ್ಕೆ, ಸಿದ್ಧ ವಸ್ತುಗಳನ್ನು ಮಾರುಕಟ್ಟೆಗಳಿಗೆ ಸಾಗಿಸುವುದಕ್ಕೆ ಮತ್ತು ಕಾರ್ಮಿಕರ ಹಾಗೂ ಜನ ಸಾಮಾನ್ಯರ ಸಾಗಾಟಕ್ಕೆ ಸಹಕಾರಿಯಾಗಿವೆ. ಜಿಲ್ಲೆಯ ಸಂಪರ್ಕವು 641 ಅಂಚೆ ಕಛೇರಿಗಳು, 364 ತಂತಿ ಕಛೇರಿಗಳು, 122 ದೂರವಾಣಿ ವಿನಿಮಯ ಕೇಂದ್ರಗಳು ಮತ್ತು 24,900 ಬಳಕೆಯಲ್ಲಿರುವ ದೂರವಾಣಿಗಳ ಮೂಲಕ ನಡೆಯುತ್ತಿತ್ತು. ದೂರದರ್ಶನ ರಿಲೆ

ಕಾರ್ಯವು ಹುಬ್ಬಳ್ಳಿ, ಧಾರವಾಡ ಮತ್ತು ಗದಗ ಕೇಂದ್ರಗಳ ಮೂಲಕ ಪ್ರಸಾರ ಮಾಡಲಾಗುತ್ತಿದೆ. ಇವುಗಳ ಜೊತೆಗೆ ಟೆಲೆಕ್ಸ್ ಮತ್ತು ಎಸ್.ಟಿ.ಡಿ. ಸೌಲಭ್ಯವೂ ಜಿಲ್ಲೆಯಲ್ಲಿದೆ.

ಜಿಲ್ಲೆಯಲ್ಲಿ 1993 ರ ಮಾರ್ಚ್ ಅಂತ್ಯದವರೆಗೂ ಬ್ಯಾಂಕಿಂಗ್ ಸೌಲಭ್ಯವನ್ನು 203 ವಾಣಿಜ್ಯ ಬ್ಯಾಂಕುಗಳು, 122 ಗ್ರಾಮೀಣ ಬ್ಯಾಂಕುಗಳು, 35 ಸಹಕಾರ ಬ್ಯಾಂಕುಗಳು, 121 ಸಹಕಾರಿ ಬ್ಯಾಂಕುಗಳ ಶಾಖೆಗಳು, 17 ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು, 414 ವ್ಯವಸಾಯ ಕ್ರೆಡಿಟ್ ಸಹಕಾರ ಸಂಘಗಳು ಮತ್ತು 220 ವ್ಯವಸಾಯೇತರ ಕ್ರೆಡಿಟ್ ಸಹಕಾರ ಸಂಘಗಳ ನೆರವಿನಿಂದ ಪಡೆಯಲಾಗುತ್ತಿತ್ತು. ವಾಣಿಜ್ಯ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳು ಒಟ್ಟಿಗೆ ಸೇರಿ 1993 ರ ಮಾರ್ಚ್ ಅಂತ್ಯದ ವೇಳೆಗೆ ನೀಡಿದ್ದ ಸಾಲ 392.03 ಕೋಟಿ ರೂಪಾಯಿಗಳು. 1992 ರ ಮಾರ್ಚ್ ಅಂತ್ಯದವರೆಗೂ ಸಹಕಾರ ಬ್ಯಾಂಕುಗಳು ಮತ್ತು ಅವುಗಳ ಶಾಖೆಗಳು ಒಟ್ಟಿಗೆ ಸೇರಿ ನೀಡಿದ್ದ ಸಾಲ 6,446 ಲಕ್ಷ ರೂಪಾಯಿಗಳು; ಭೂ ಅಭಿವೃದ್ಧಿ ಬ್ಯಾಂಕುಗಳು ನೀಡಿದ್ದ ಸಾಲ 684 ಲಕ್ಷ ರೂಪಾಯಿಗಳು. ಕರ್ನಾಟಕ ರಾಜ್ಯ ಹಣಕಾಸು ನಿಗಮವು ಜಿಲ್ಲೆಯಲ್ಲಿ ತನ್ನ ವಲಯ ಕಛೇರಿ ಮತ್ತು ಶಾಖಾ ಕಛೇರಿಗಳನ್ನು ಹೊಂದಿದ್ದು ಕೈಗಾರಿಕಾ ಘಟಕಗಳಿಗೆ ಸಾಲ ಸೌಲಭ್ಯ ಒದಗಿಸುತ್ತಿದೆ.

ಜಿಲ್ಲೆಯಲ್ಲಿ ವಿದ್ಯುತ್ತನ್ನು ಉತ್ಪಾದಿಸದೇ ಇದ್ದರೂ ವಿದ್ಯುತ್ ಪೂರೈಕೆಯ ಕಾರ್ಯವನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ನಿರ್ವಹಿಸುತ್ತಿದೆ. 1993 ರ ಮಾರ್ಚ್ ಅಂತ್ಯದವರೆಗೂ ಜಿಲ್ಲೆಯ 20 ಪಟ್ಟಣಗಳು, 1,320 ಗ್ರಾಮಗಳು, 120 ಉಪ ಗ್ರಾಮಗಳು ಮತ್ತು 40,244 ಪಂಪು ಸೆಟ್ಟುಗಳಿಗೆ ವಿದ್ಯುತ್ ಸೌಲಭ್ಯವನ್ನು ಒದಗಿಸಲಾಗಿತ್ತು. ಜಿಲ್ಲೆಯಲ್ಲಿ ನೀರು ಅತೀ ಕೆಳಮಟ್ಟದಲ್ಲಿದ್ದರೂ ಬೋರ್‌ವೆಲ್‌ಗಳ ಮೂಲಕ ನೀರಿನ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಹುಬ್ಬಳ್ಳಿ ಮತ್ತು ಧಾರವಾಡಗಳಿಗೆ ಮಲಪ್ರಭಾ ನೀರಾವರಿ ಯೋಜನೆಯ ಮೂಲಕ ನೀರನ್ನು ಒದಗಿಸಲಾಗುತ್ತಿದೆ. ಇದರ ಸ್ವಲ್ಪಭಾಗವನ್ನು ಕೈಗಾರಿಕೆಗೂ ಮೀಸಲಿಡಲಾಗಿದೆ.

ಧಾರವಾಡ ಜಿಲ್ಲೆಯಲ್ಲಿ ಲಭ್ಯವಾಗುವ ಮ್ಯಾಂಗನೀಸ್ ಅದಿರು 1,415 ಮೆ.ಟನ್, ಕಬ್ಬಿಣದ ಅದಿರು 3,275 ಮೆ.ಟನ್, ಮೌಲ್ಡಿಂಗ್ ಸ್ಯಾಂಡ್ 3,446 ಮೆ.ಟನ್‌ಗಳಷ್ಟೆಂದು ಅಂದಾಜು ಮಾಡಲಾಗಿದೆ. ಇವುಗಳ ಪ್ರಮಾಣವು ಅತ್ಯಲ್ಪವಾಗಿರುವುದರಿಂದ ಜಿಲ್ಲೆಯಲ್ಲಿ ಖನಿಜ ಆಧಾರಿತ ಕೈಗಾರಿಕೆಗಳ ಬೆಳವಣಿಗೆಗೆ ಹೆಚ್ಚು ಅವಕಾಶವಿರುವುದಿಲ್ಲ, ಆದರೆ ವ್ಯವಸಾಯೋತ್ಪಾದನೆಗಳಾದ ಹತ್ತಿ, ಎಣ್ಣೆ ಬೀಜಗಳು, ಬತ್ತ ಮೊದಲಾದವುಗಳ ಉತ್ಪಾದನೆಯು ಜಿಲ್ಲೆಯಲ್ಲಿ ಅಧಿಕವಾಗಿದ್ದು ಕೈಗಾರಿಕಾ ಬೆಳವಣಿಗೆಗೆ ಪೂರಕವಾಗಿವೆ. ಜಾನುವಾರು ಆಧಾರಿತ ಪೇಡಾ, ಚರ್ಮ ಹದಮಾಡುವುದು, ಚರ್ಮದ ವಸ್ತುಗಳ ಉದ್ಯಮದಲ್ಲಿ ಜಿಲ್ಲೆಯು ಹೆಸರು ಗಳಿಸಿದೆ.

ಕರ್ನಾಟಕ ಸಣ್ಣ ಕೈಗಾರಿಕಾ ಮಾರುಕಟ್ಟೆ ನಿಗಮವು ನೋಂದಣಿ ಪಡೆದ ಸಣ್ಣ ಕೈಗಾರಿಕಾ ಘಟಕಗಳ ಉತ್ಪಾದನೆಗಳಿಗೆ ಮಾರುಕಟ್ಟೆ ಸೌಲಭ್ಯವನ್ನು ಒದಗಿಸುತ್ತಿದೆ. 1993-94 ನೇ ಸಾಲಿನಲ್ಲಿ ಜಿಲ್ಲೆಯ 48 ಘಟಕಗಳು ತಮ್ಮ ಉತ್ಪಾದನೆಯ ದರ ಒಪ್ಪಂದದ ಯೋಜನೆಯಡಿಯಲ್ಲಿ 100.58 ಲಕ್ಷ ರೂಪಾಯಿಗಳ ಮಾರುಕಟ್ಟೆ ಪ್ರಯೋಜನ ಪಡೆದಿರುತ್ತವೆ. ಮಾರುಕಟ್ಟೆ ಸಹಾಯ ಯೋಜನೆಯಡಿಯಲ್ಲಿ ವಿವಿಧ ಘಟಕಗಳು ಪಾಲ್ಗೊಂಡು 200.87 ಲಕ್ಷ ರೂಪಾಯಿಗಳಷ್ಟು ಮಾರುಕಟ್ಟೆ ಪ್ರಯೋಜನ ಪಡೆದುಕೊಂಡಿದ್ದವು. ಬಿಲ್ ಡಿಸ್‌ಕೌಂಟಿಂಗ್ ಸೌಲಭ್ಯದಡಿಯಲ್ಲಿ 5 ಘಟಕಗಳು 22.40 ಲಕ್ಷ ರೂಪಾಯಿಗಳ ಪ್ರಯೋಜನ ಪಡೆದಿರುತ್ತವೆ. ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮವು ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಸುಬುದಾರರಿಗೆ ಚರ್ಮ ಹದಗೊಳಿಸುವುದು, ಪಾದರಕ್ಷೆಗಳ ತಯಾರಿಕೆ, ಚರ್ಮ ವಸ್ತುಗಳ ತಯಾರಿಕೆ, ಮೊದಲಾದವುಗಳಿಗೆ ತರಬೇತಿ, ಉಚಿತ ಉಪಕರಣಗಳ ಪೆಟ್ಟಿಗೆಗಳ ಸರಬರಾಜು,ರಸ್ತೆ ಬದಿಯ ಚರ್ಮ ಕುಟೀರಗಳ ಸರಬರಾಜು, ಪಾದರಕ್ಷೆ ತಯಾರಿಕೆಯ ಕಸುಬುದಾರರಿಗೆ ಕಚ್ಚಾ ಸಾಮಾಗ್ರಿ ಸರಬರಾಜು ಮೊದಲಾದ ಸೌಲಭ್ಯವನ್ನು ಒದಗಿಸುತ್ತಿದೆ. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ, ಬೆಂಗಳೂರು, ಇದು ಹುಬ್ಬಳ್ಳಿಯಲ್ಲಿ ವಲಯ ಕಛೇರಿಯನ್ನು, ಹುಬ್ಬಳ್ಳಿಯ ಕೈಗಾರಿಕಾ ವಸಾಹತಿನಲ್ಲಿ ಕಚ್ಚಾ ಸಾಮಾಗ್ರಿಗಳ ಮಳಿಗೆಯನ್ನು ಹೊಂದಿದೆ. ಇದು ಸಣ್ಣ ಕೈಗಾರಿಕೆಗಳ ವಾರ್ಷಿಕ ಬೇಡಿಕೆಗಳಿಗನುಗುಣವಾಗಿ ಕಚ್ಚಾ ಸಾಮಗ್ರಿಗಳನ್ನು ದಾಸ್ತಾನುಮಾಡಿ ನಿರಂತರವಾಗಿ ಪೂರೈಕೆಮಾಡುತ್ತಿದೆ.

ರಾಜ್ಯ ಸರ್ಕಾರವು ತನ್ನ ಅನುದಾನ ಸೌಲಭ್ಯದ ಯೋಜನೆಯಡಿಯಲ್ಲಿ ಸ್ಥಿರಾಸ್ತಿ ಬಂಡವಾಳದ ಮೇಲೆ ಸಹಾಯಧನ, ಬಡ್ಡಿ ಅನುದಾನ, ವಿದ್ಯುತ್ ಅನುದಾನ ಮೊದಲಾದ ನೆರವನ್ನು ಸಣ್ಣ ಕೈಗಾರಿಕಾ ಘಟಕಗಳಿಗೆ ಒದಗಿಸುವ ಉದ್ದೇಶದಿಂದ ರಾಜ್ಯದ ಎಲ್ಲಾ

ಜಿಲ್ಲೆಗಳನ್ನು 4 ವಲಯಗಳ ವ್ಯಾಪ್ತಿಗೆ ಸೇರಿಸಿ ವಲಯವಾರು ರಿಯಾಯಿತಿ ಸೌಲಭ್ಯವನ್ನು ಘೋಷಿಸಿದೆ. ಧಾರವಾಡ ಜಿಲ್ಲೆಯ ಕೆಲವು ತಾಲೂಕುಗಳು ವಲಯ 2 ಕ್ಕೂ ಮತ್ತೆ ಕೆಲವು ತಾಲೂಕುಗಳು ವಲಯ 3 ಕ್ಕೂ ಮತ್ತು ಧಾರವಾಡ ಬೆಳವಣಿಗೆ ಕೇಂದ್ರವು ವಲಯ 4 ಕ್ಕೂ ಸೇರಿಸಲ್ಪಟ್ಟಿದ್ದು ನಿಗದಿತ ಅನುದಾನ ಸೌಲಭ್ಯವನ್ನು ಪಡೆಯಲು ಅರ್ಹತೆ ಪಡೆದಿವೆ.

## ಕೋಷ್ಟಕ 5.13

1993-94ರಲ್ಲಿನ ತಾಲೂಕುವಾರು ಸ್ಟ್ಯಾಂಪ್ ಡ್ಯೂಟಿ ಹಾಗೂ ಬಿನ್‌ಶೇತ್ಕಿ ಪರಿವರ್ತನಾ ದಂಡ ವಿನಾಯತಿ ಪ್ರಕರಣಗಳ ಪಟ್ಟಿ

| ಕ್ರಸಂ. | ತಾಲೂಕು | ಸ್ಟಾಂಪ್ ಡ್ಯೂಟಿ ವಿನಾಯತಿ ಪತ್ರಗಳು | ಬಿನ್‌ಶೇತ್ಕಿ ಪರಿವರ್ತನಾ ದಂಡ ವಿನಾಯತಿ ಪ್ರಕರಣಗಳು | ಕ್ರಸಂ. | ತಾಲೂಕು | ಸ್ಟಾಂಪ್ ಡ್ಯೂಟಿ ವಿನಾಯತಿ ಪತ್ರಗಳು | ಬಿನ್‌ಶೇತ್ಕಿ ಪರಿವರ್ತನಾ ದಂಡ ವಿನಾಯತಿ ಪ್ರಕರಣಗಳು |
|---|---|---|---|---|---|---|---|
| 1 | ಧಾರವಾಡ | 45 | - | 10 | ರಾಣೆಬೆನ್ನೂರು | 18 | 3 |
| 2 | ಹುಬ್ಬಳ್ಳಿ | 87 | 5 | 11 | ಬ್ಯಾಡಗಿ | 3 | 1 |
| 3 | ಕಲಘಟಗಿ | 15 | 6 | 12 | ಹಿರೇಕೆರೂರು | 18 | 1 |
| 4 | ನವಲಗುಂದ | 10 | - | 13 | ಸವಣೂರು | 8 | - |
| 5 | ಗದಗ | 65 | 1 | 14 | ಶಿಗ್ಗಾಂವಿ | 5 | - |
| 6 | ಮುಂಡರಗಿ | 12 | - | 15 | ಶಿರಹಟ್ಟಿ | 7 | 2 |
| 7 | ರೋಣ | 16 | - | 16 | ಹಾನಗಲ್ | 12 | 2 |
| 8 | ನರಗುಂದ | 6 | - | 17 | ಕುಂದಗೋಳ | 9 | - |
| 9 | ಹಾವೇರಿ | 21 | - | | ಒಟ್ಟು | 357 | 21 |

ಆಧಾರ: 1993-94ನೇ ಸಾಲಿನ ಪ್ರಗತಿ ವರದಿ, ಜಿಲ್ಲಾ ಕೈಗಾರಿಕಾ ಕೇಂದ್ರ, ಧಾರವಾಡ.

## ಕೋಷ್ಟಕ 5.14

1993-94 ನೇ ಸಾಲಿನಲ್ಲಿ ದೊರಕಿದ ತಾಲೂಕುವಾರು ಪ್ರೋತ್ಸಾಹ ಮತ್ತು ರಿಯಾಯತಿಗಳ ವಿವರ.

| ಕ್ರಮ ಸಂಖ್ಯೆ | ತಾಲೂಕು | ಸ್ಥಿರಾಸ್ತಿ ಮೇಲಿನ ಸಹಾಯ ಧನ | | ಸ್ಥಿರಾಸ್ತಿ ಬೆಲೆಯ ಪ್ರಮಾಣ ಪತ್ರಗಳ | |
|---|---|---|---|---|---|
| | | ಸಂಖ್ಯೆ | ಮೊತ್ತ (ರೂಗಳಲ್ಲಿ) | ಸಂಖ್ಯೆ | ಮೊತ್ತ (ರೂಗಳಲ್ಲಿ) |
| 1 | ಧಾರವಾಡ | 39 | 1,25,31,000 | 15 | 3,23,78,000 |
| 2 | ಹುಬ್ಬಳ್ಳಿ | 141 | 1,38,15,200 | 14 | 5,75,91,000 |
| 3 | ನವಲಗುಂದ | 4 | 58,800 | - | - |
| 4 | ಕಲಘಟಗಿ | 9 | 5,20,700 | 6 | 78,20,000 |
| 5 | ಗದಗ | 40 | 45,84,200 | 19 | 1,61,48,000 |

| ಕ್ರಮ ಸಂಖ್ಯೆ | ತಾಲೂಕು | ಸ್ಥಿರಾಸ್ತಿ ಮೇಲಿನ ಸಹಾಯ ಧನ | | ಸ್ಥಿರಾಸ್ತಿ ಬೆಲೆಯ ಪ್ರಮಾಣ ಪತ್ರಗಳ | |
|---|---|---|---|---|---|
| | | ಸಂಖ್ಯೆ | ಮೊತ್ತ (ರೂ.ಗಳಲ್ಲಿ) | ಸಂಖ್ಯೆ | ಮೊತ್ತ (ರೂ.ಗಳಲ್ಲಿ) |
| 6 | ರೋಣ | 9 | 9,09,200 | 06 | 64,87,000 |
| 7 | ನರಗುಂದ | 1 | 51,800 | - | - |
| 8 | ಮುಂಡರಗಿ | 1 | 15,100 | - | - |
| 9 | ಹಾವೇರಿ | 20 | 16,45,600 | 3 | 2,85,000 |
| 10 | ಬ್ಯಾಡಗಿ | 5 | 1,86,700 | 1 | 1,54,000 |
| 11 | ಹಿರೇಕೆರೂರು | 5 | 3,28,200 | - | - |
| 12 | ರಾಣೆಬೆನ್ನೂರು | 21 | 55,43,500 | 8 | 1,22,00,000 |
| 13 | ಸವಣೂರು | 8 | 3,90,200 | 1 | 6,54,000 |
| 14 | ಶಿಗ್ಗಾಂವಿ | 7 | 88,800 | - | - |
| 15 | ಶಿರಹಟ್ಟಿ | 4 | 2,89,900 | 2 | 8,74,000 |
| 16 | ಹಾನಗಲ್ | 7 | 10,26,300 | - | - |
| 17 | ಕುಂದಗೋಳ | 5 | 66,500 | - | - |
| | ಒಟ್ಟು | 326 | 4,20,51,700 | 135 | 13,45,91,000 |

ಆಧಾರ: 1993-94 ನೇ ಸಾಲಿನ ಪ್ರಗತಿ ವರದಿ, ಜಿಲ್ಲಾ ಕೈಗಾರಿಕಾ ಕೇಂದ್ರ, ಧಾರವಾಡ.

**ಬೇಲೂರು ಬೆಳವಣಿಗೆ ಕೇಂದ್ರ**

ಬೇಲೂರು ಬೆಳವಣಿಗೆ ಕೇಂದ್ರವು ಧಾರವಾಡ ಮತ್ತು ಬೆಳಗಾವಿ ನಗರಗಳ ಮಧ್ಯೆ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 4 ರ ಪಕ್ಕದಲ್ಲಿ ಧಾರವಾಡದಿಂದ ಸುಮಾರು 13 ಕಿ.ಮೀ ದೂರದ ಬೇಲೂರಿನಲ್ಲಿ 1989 ರಲ್ಲಿ ಪ್ರಾರಂಭಿಸಲ್ಪಟ್ಟಿತು. ಇದು ರಾಜ್ಯದ ಮೂರು ಬೆಳವಣಿಗೆ ಕೇಂದ್ರಗಳ ಪೈಕಿ ಒಂದಾಗಿದೆ. ರಾಜ್ಯದ ಉಳಿದೆರಡು ಬೆಳವಣಿಗೆ ಕೇಂದ್ರಗಳು ಹಾಸನ ಮತ್ತು ರಾಯಚೂರುಗಳಾಗಿವೆ. ಬೇಲೂರು ಬೆಳವಣಿಗೆ ಕೇಂದ್ರಕ್ಕೆ 1,250 ಎಕರೆ ಭೂಮಿಯನ್ನು ವಶಪಡಿಸಿಕೊಂಡು, ಅದನ್ನು ಮೂರು ಬ್ಲಾಕುಗಳಾಗಿ ವಿಂಗಡಿಸಿ ಅವುಗಳಿಗೆ ಎಲ್ಲಾ ಸಾಧನ ಸೌಲಭ್ಯಗಳನ್ನೊದಗಿಸಲು 30 ಕೋಟಿ ರೂ.ಗಳನ್ನು ವೆಚ್ಚ ಮಾಡುವ ಗುರಿಯನ್ನು ಹೊಂದಲಾಗಿದೆ. ಮೊದಲ ಬ್ಲಾಕಿನ 500 ಎಕರೆ ಭೂಮಿಯ ಪೈಕಿ 182 ಎಕರೆಯಷ್ಟು ಭೂಮಿಯಲ್ಲಿ 175 ಕೈಗಾರಿಕಾ ನಿವೇಶನಗಳನ್ನು ನಿರ್ಮಿಸಿ 84 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಈ 84 ಕೈಗಾರಿಕಾ ನಿವೇಶನಗಳ ಪೈಕಿ 13 ನಿವೇಶನಗಳಲ್ಲಿ ಕೈಗಾರಿಕೆಗಳು ಸ್ಥಾಪನೆಯಾಗಿ ಉತ್ಪಾದನಾ ಕಾರ್ಯದಲ್ಲಿ ತೊಡಗಿವೆ. ಉಳಿದ 19 ನಿವೇಶನಗಳಲ್ಲಿ ಕೈಗಾರಿಕೆಗಳು ಸ್ಥಾಪನೆಯ ವಿವಿಧ ಹಂತದಲ್ಲಿವೆ. ಉತ್ಪಾದನಾ ಕಾರ್ಯದಲ್ಲಿ ತೊಡಗಿರುವ ಕಾರ್ಖಾನೆಗಳ ಪೈಕಿ ಐದು ಕಾರ್ಖಾನೆಗಳು ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಗುಂಪಿಗೂ ಉಳಿದ ಎಂಟು ಕಾರ್ಖಾನೆಗಳು ಸಣ್ಣ ಪ್ರಮಾಣದ ಕೈಗಾರಿಕೆಗಳ ಗುಂಪಿಗೂ ಸೇರಿದವುಗಳಾಗಿವೆ.

ಈ ಬೆಳವಣಿಗೆ ಕೇಂದ್ರವು 4 ನೇ ವಲಯಕ್ಕೆ ಸೇರಿರುವುದರಿಂದ 25 ಲಕ್ಷ ರೂ.ಗಳವರೆಗಿನ ಹೊಸ ಬಂಡವಾಳಕ್ಕೆ ಅನುದಾನದ ಪ್ರಮಾಣ ಶೇ 25 ರಷ್ಟಿರುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು, ಅಲ್ಪ ಸಂಖ್ಯಾತರು, ಮಹಿಳಾ ಉದ್ಯಮಿಗಳು, ಅಂಗವಿಕಲರು ಮತ್ತು ನಿವೃತ್ತ ಸೈನಿಕರು ಇವರಿಗೆ ಇದು ಶೇ 30 ರಷ್ಟಿದ್ದು 1 ಲಕ್ಷ ರೂ.ಗಳವರೆಗೆ ವಿಶೇಷ ಅನುದಾನ ಸೌಲಭ್ಯವಿರುತ್ತದೆ. ಇಲ್ಲಿ ಸರಕುಗಳ ಉತ್ಪಾದನೆ ಪ್ರಾರಂಭಗೊಂಡಂದಿನಿಂದ ಐದು ವರ್ಷಗಳವರೆಗೆ ಮಾರಾಟ ತೆರಿಗೆ ಸಂಪೂರ್ಣ ರಿಯಾಯಿತಿ ಇರುತ್ತದೆ. ಇಲ್ಲಿ ಕೆಲವು ಆಯ್ದ ಸರಕುಗಳ ಉತ್ಪಾದನೆಗೆ ವಿಶೇಷ ರಿಯಾಯಿತಿ ಮತ್ತು ಪ್ರೋತ್ಸಾಹ ಧನ ಸೌಲಭ್ಯಗಳಿರುತ್ತವೆ. ಮಾಲಿನ್ಯ ತಡೆ

ಸೌಲಭ್ಯಗಳೊಡನೆ ಇಲ್ಲಿ ಪ್ರಾರಂಭಿಸಲ್ಪಟ್ಟಿರುವ ಘಟಕಗಳಿಗೆ 5 ಲಕ್ಷ ರೂ. ಬಂಡವಾಳದವರೆಗೂ ಶೇ 5 ರಷ್ಟು ವಿಶೇಷ ಅನುದಾನ ಸೌಲಭ್ಯವಿರುತ್ತದೆ. ಇಲ್ಲಿ ಸ್ಥಾಪನೆಗೊಳ್ಳುವ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳವರೆಗೆ ಸ್ಟಾಂಪ್ ತೆರಿಗೆಯ ಸಂಪೂರ್ಣ ರಿಯಾಯತಿಯ ಜೊತೆಗೆ ರಿಯಾಯಿತಿ ದರದ ನೋಂದಣಿ ಸೌಲಭ್ಯವಿರುತ್ತದೆ. 1993 ರ ಮಾರ್ಚ್ ಅಂತ್ಯದ ನಂತರ ಉತ್ಪಾದನೆಯಲ್ಲಿ ತೊಡಗಿರುವ ಕೈಗಾರಿಕೆಗಳಿಗೆ ಬರುವ ಕಚ್ಚಾ ಸರಕುಗಳಿಗೆ ಉತ್ಪಾದನೆಯ ಐದು ವರ್ಷಗಳು ತುಂಬುವವರೆಗೂ ಪ್ರವೇಶ ಶುಲ್ಕವಿರುವುದಿಲ್ಲ. ಈ ಕೇಂದ್ರವು ಈ ಎಲ್ಲಾ ಸೌಲಭ್ಯ ಮತ್ತು ನೆರವನ್ನು ಪಡೆಯುತ್ತಲ್ಲಿದ್ದು ತ್ವರಿತ ಗತಿಯಲ್ಲಿ ಬೆಳೆಯುತ್ತಲಿದೆ.

**ಕೈಗಾರಿಕೆ ವಸಾಹತು ಮತ್ತು ನಿವೇಶನಗಳು:** ಕೈಗಾರಿಕೆಯು ಬೆಳವಣಿಗೆಯನ್ನು ಹೊಂದಬೇಕಾದರೆ ಅಭಿವೃದ್ಧಿಪಡಿಸಿದ ವಸಾಹತು ಮತ್ತು ನಿವೇಶನಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಕರ್ನಾಟಕ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮವು ಜಿಲ್ಲೆಯ ಆಯ್ದ ಪ್ರದೇಶಗಳಲ್ಲಿ ವಸಾಹತುಗಳ ನಿರ್ಮಾಣ ಹಾಗೂ ವಿತರಣೆಯ ಹೊಣೆಯನ್ನು ನಿರ್ವಹಿಸುತ್ತಿದೆ. ಇದು ಕೈಗಾರಿಕಾ ವಸಾಹತು ನಿರ್ಮಾಣ ಯೋಜನೆಯಡಿಯಲ್ಲಿ ಇಚ್ಛಿತ ಉದ್ದಿಮೆದಾರರಿಗೆ ಸಿದ್ಧಪಡಿಸಿದ ಹಾಗೂ ನಿರ್ಮಿತ ಕೈಗಾರಿಕಾ ಮಳಿಗೆಗಳನ್ನು ಬಾಡಿಗೆ ಹಂತದಲ್ಲಿ ಮಾಲಿಕತ್ವದ ತಳಹದಿಯ ಮೇಲೆ ಎ, ಬಿ, ಸಿ, ಡಿ ಮಳಿಗೆಗಳು ಹಾಗೂ ಮಾದರಿ ಮಳಿಗೆಗಳನ್ನು ನಿರ್ಮಿಸಿ ಸಣ್ಣ ಕೈಗಾರಿಕೋದ್ಯಮಿಗಳಿಗೆ ವಿತರಿಸಿದೆ. 1993-94 ನೇ ಸಾಲಿನ ಅಂತ್ಯದವರೆಗೂ ಇದ್ದ ಕೈಗಾರಿಕಾ ವಸಾಹತುಗಳ ಮಾಹಿತಿ ಪಟ್ಟಿಯನ್ನು ಮುಂದಿನ ಪುಟದಲ್ಲಿ ಕೊಡಲಾಗಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಜಿಲ್ಲೆಯ ಲಕಮನಹಳ್ಳಿ, ಸತ್ತೂರು, ರಾಯಾಪುರ, ಕೆಲಗೇರಿ, ಗೋಕುಲ, ತಾರೀಹಾಳ ಮತ್ತು ಬೇಲೂರುಗಳಲ್ಲಿ ಕೈಗಾರಿಕಾ ನಿವೇಶನಗಳನ್ನು ಅಭಿವೃದ್ಧಿಪಡಿಸಿದೆ. ಒಟ್ಟು ನಿವೇಶನಗಳ ಪೈಕಿ ತಾರೀಹಾಳದ 9 ನಿವೇಶನಗಳು ಮತ್ತು ಬೇಲೂರಿನ 46 ನಿವೇಶನಗಳನ್ನು ಬಿಟ್ಟು ಉಳಿದ ಎಲ್ಲಾ ನಿವೇಶನಗಳನ್ನು ಹಂಚಿಕೆಮಾಡಿದೆ. 1993-94 ರ ಅಂತ್ಯದವರೆಗೂ ಜಿಲ್ಲೆಯಲ್ಲಿ ಅಭಿವೃದ್ಧಿಪಡಿಸಿದ್ದ ನಿವೇಶನಗಳಿರುವ ಸ್ಥಳ, ನಿವೇಶನಕ್ಕಾಗಿ ವಶಪಡಿಸಿಕೊಂಡಿರುವ ಭೂಮಿ (ಎಕರೆಗಳಲ್ಲಿ) ಮತ್ತು ನಿವೇಶನಗಳ ಸಂಖ್ಯೆ (ಆವರಣದಲ್ಲಿ ಕೊಟ್ಟಿರುವಂತೆ)ಯನ್ನು ಈ ಮುಂದೆ ಕೊಡಲಾಗಿದೆ: ಲಕಮನಹಳ್ಳಿ 73.18 (36) ಸತ್ತೂರು 78.4 (21), ರಾಯಾಪುರ 10.00 (1), ಕೆಲಗೇರಿ 194.5 (1), ಗೋಕುಲ 35.00 (4), ತಾರೀಹಾಳ 256.00 (246) ಮತ್ತು ಬೇಲೂರು 50.00 (175).

1993-94 ರವರೆಗೂ ಧಾರವಾಡ ಜಿಲ್ಲೆಯಲ್ಲಿ ಕೈಗಾರಿಕಾ ಪ್ರದೇಶದ ನಿರ್ಮಾಣಕ್ಕಾಗಿ ತಾಲೂಕುವಾರು ಸ್ವಾಧೀನಪಡಿಸಿಕೊಂಡು ಹಂಚಿಕೆ ಮಾಡಿರುವ ಭೂಮಿಯ ವಿಸ್ತೀರ್ಣವನ್ನು ಹೆಕ್ಟೇರುಗಳಲ್ಲಿ ಈ ಮುಂದೆ ಕೊಡಲಾಗಿದೆ. ಧಾರವಾಡ ತಾಲೂಕಿನ ಲಕಮನಹಳ್ಳಿಯಲ್ಲಿ 29.25 ಹೆ., ಸತ್ತೂರಿನಲ್ಲಿ 330.19 ಹೆ., ರಾಯಾಪುರದಲ್ಲಿ 153.94 ಹೆ., ಮುಮ್ಮಿಗಟ್ಟಿ, ಬೇಲೂರು, ನೇರಲಕಟ್ಟಿ ಮತ್ತು ನರೇಂದ್ರಗಳಲ್ಲಿ 948.36 ಹೆ., ನವಲೂರಿನಲ್ಲಿ 6.71 ಹೆ.ಗಳನ್ನು ವಶಪಡಿಸಿಕೊಂಡು ಹಂಚಿಕೆ ಮಾಡಲಾಗಿದೆ. ಹುಬ್ಬಳ್ಳಿ ತಾಲೂಕಿನ ತಾರೀಹಾಳದಲ್ಲಿ 129.80 ಹೆ., ಎಂ.ಟಿ. ಸಾಗರದಲ್ಲಿ 44.27 ಹೆ., ಗೋಕುಲದಲ್ಲಿ 0.44 ಹೆ. ಮತ್ತು ಕೃಷ್ಣಾಪುರದಲ್ಲಿ 10.51 ಹೆ.ಗಳನ್ನು ಕೆಲವು ಖಾಸಗಿ ಕಾರ್ಖಾನೆಗಳಿಗೆ ಮತ್ತು ಕೆ.ಎಸ್.ಎಸ್.ಐ.ಡಿ.ಸಿಗಳಿಗೆ ಹಂಚಿಕೆ ಮಾಡಲಾಗಿದೆ. 12.60 ಹೆ. ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಕೆ.ಎಸ್.ಎಸ್.ಐ.ಡಿ.ಸಿ ಗೆ ಕೊಡಲಾಗಿದೆ. ಗದಗಿನಲ್ಲಿ 11.13 ಹೆ. ವಶಪಡಿಸಿಕೊಂಡು ಹಂಚಿಕೆ ಮಾಡಲಾಗಿದೆ. ರೋಣ ಮತ್ತು ಅದೇ ತಾಲೂಕಿನ ಉಮಚಗಿಗಳಲ್ಲಿ 2.02ಹೆ.ಗಳಷ್ಟನ್ನು ಪ್ರತೀ ಸ್ಥಳದಿಂದಲೂ ಸ್ವಾಧೀನ ಪಡಿಸಿಕೊಂಡು ಹಂಚಿಕೆ ಮಾಡಲಾಗಿದೆ. ರಾಣೆಬೆನ್ನೂರು ತಾಲೂಕಿನ ಕವಲೆತ್ತು, ನೆಲವಾಗಿಲು ಮತ್ತು ಕೊಡಿಯಾಲಗಳಲ್ಲಿ ಒಟ್ಟು 364.98 ಹೆ. ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಫಲಾನುಭವಿಗಳಿಗೆ ವಿತರಿಸಲಾಗಿದೆ. ಕಲಘಟಗಿ ತಾಲೂಕಿನ ಚಲಮಟ್ಟಿಯಲ್ಲಿ 9.74 ಹೆ., ಮುಂಡರಗಿ ತಾಲೂಕಿನ ಬ್ಯಾಲವಾಡಗಿಯಲ್ಲಿ 6.29 ಹೆ. ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಹಂಚಲಾಗಿದೆ.

1994-95 ರಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಚಲಮಟ್ಟಿ ಗ್ರಾಮದಲ್ಲಿ 23.21 ಹೆ. ಭೂಮಿಯನ್ನು ವಶಪಡಿಸಿಕೊಂಡು ಹಂಚಿಕೆ ಮಾಡುವ ಉದ್ದೇಶವನ್ನು ಹೊಂದಿದೆ. ಇದೇ ಕಾಲಾವಧಿಯಲ್ಲಿ ಹುಬ್ಬಳ್ಳಿ ತಾಲೂಕಿನ ಭೈರಿದೇವರಕೊಪ್ಪದಲ್ಲಿ 45.35 ಹೆ., ಗಾಮನಗಟ್ಟಿಯಲ್ಲಿ 116.63 ಹೆ. ಪಾಳೆ ಮತ್ತು ಶೆರೇವಾಡಗಳಲ್ಲಿ 114.76 ಹೆ; ಹಾವೇರಿ ತಾಲೂಕಿನ ಇಜಾರಿಲಕಮಾಪುರದಲ್ಲಿ 1.59 ಹೆ., ಕುಂದಗೋಳ ತಾಲೂಕಿನ ರಾಮನಕೊಪ್ಪದಲ್ಲಿ 8.37

ಹೆ., ನವಲಗುಂದ ತಾಲೂಕಿನ ಅಣ್ಣಿಗೇರಿಯಲ್ಲಿ 9.54 ಹೆ. ಮತ್ತು ಬ್ಯಾಡಗಿ ತಾಲೂಕಿನ ಬ್ಯಾಡಗಿಯಲ್ಲಿ 4.47 ಹೆ. ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಉದ್ದೇಶವನ್ನು ಹೊಂದಿದೆ.

## ಕೋಷ್ಟಕ 5.15

### 1993-94 ನೇ ಸಾಲಿನ ಅಂತ್ಯದಂತೆ ಇದ್ದ ಕೈಗಾರಿಕಾ ವಸಾಹತುಗಳ ವಿವರ

| ಅ.ಸಂ. | ಕೈಗಾರಿಕಾ ವಸಾಹತಿನ ಹೆಸರು | ಮಳಿಗೆಯ ಮಾದರಿ | ಕಟ್ಟಿದ ಮಳಿಗೆಗಳ ಸಂಖ್ಯೆ | ಹಂಚಿಕೆ ಮಾಡಲಾದ ಮಳಿಗೆಗಳ ಸಂಖ್ಯೆ | 1993-94 ನೇ ಸಾಲಿನಲ್ಲಿ ಹಂಚಿಕೆ ಆದ ಮಳಿಗೆಗಳು |
|---|---|---|---|---|---|
| 1 | ಗೋಕುಲ, ಹುಬ್ಬಳ್ಳಿ | ಬಿ | 119 | 110 | 9 |
| | | ಸಿ | 153 | 142 | 11 |
| | | ಡಿ | 99 | 99 | - |
| | | ಮಿನಿ | 16 | 16 | - |
| | | ಸುಪರ ಮಿನಿ | 32 | 26 | 6 |
| | | ವಿಶೇಷ | 1 | 1 | - |
| | | ಒಟ್ಟು | 420 | 394 | 26 |
| 2 | ಲಕಮನಹಳ್ಳಿ | ಸಿ | 8 | 8 | - |
| | | ಡಿ | 8 | 8 | - |
| | | ಒಟ್ಟು | 16 | 16 | - |
| 3 | ಗದಗ | ಸಿ | 6 | 3 | 3 |
| | | ಡಿ | 4 | 4 | - |
| | | ಮಿನಿ | 6 | 6 | - |
| | | ಒಟ್ಟು | 16 | 13 | 3 |
| 4 | ರಾಣೆಬೆನ್ನೂರು | ಸಿ | 2 | 2 | - |
| | | ಡಿ | 2 | 2 | - |
| | | ಒಟ್ಟು | 4 | 4 | - |
| 5 | ರಾಮನಕೊಪ್ಪ | ಸಿ | 6 | - | 6 |
| | | ಸುಪರಮಿನಿ | 5 | - | 5 |
| | | ಒಟ್ಟು | 11 | - | 11 |
| 6 | ಹಾವೇರಿ | ಸಿ | 2 | - | 2 |
| | | ಸುಪರಮಿನಿ | 4 | - | 4 |
| | | ಒಟ್ಟು | 6 | - | 6 |

ಆಧಾರ: ಜಿಲ್ಲಾ ಕೈಗಾರಿಕಾ ಕೇಂದ್ರ, ಧಾರವಾಡ.

**ತರಬೇತಿ ಸಂಸ್ಥೆಗಳು**

ಕೈಗಾರಿಕಾ ಪ್ರಗತಿಯು ಪ್ರಧಾನವಾಗಿ ಕುಶಲ ಹಾಗೂ ಪರಿಣತ ಕಾರ್ಮಿಕರನ್ನು ಅವಲಂಭಿಸಿರುತ್ತದೆ. ಕುಶಲಕರ್ಮಿ ತರಬೇತಿ ಸಂಸ್ಥೆಗಳು ಹಾಗೂ ಕೈಗಾರಿಕಾ ತರಬೇತಿ ಸಂಸ್ಥೆಗಳು ಕಾರ್ಮಿಕರ ನೈಪುಣ್ಯವನ್ನು ಹೆಚ್ಚಿಸಿಕೊಳ್ಳಲು ಮತ್ತು ಆಧುನಿಕ ಯಂತ್ರಗಳ ಬಳಕೆಗೆ ನೆರವನ್ನೊದಗಿಸುವುದರ ಮೂಲಕ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ. ಧಾರವಾಡ ಜಿಲ್ಲೆಯಲ್ಲಿ ಎರಡು ಕುಶಲಕರ್ಮಿ ತರಬೇತಿ ಸಂಸ್ಥೆಗಳು ಹುಬ್ಬಳ್ಳಿ ಮತ್ತು ಗದಗಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಕಮ್ಮಾರಿಕೆ, ಬಡಗಿತನ, ಚರ್ಮೋದ್ಯಮ, ಹತ್ತಿನೇಯ್ಗೆ, ಬಿದಿರು, ಬೆತ್ತಗಳ ವಸ್ತುಗಳು, ತೆಂಗಿನ ನಾರಿನ ವಸ್ತುಗಳು ಮೊದಲಾದ ಉತ್ಪಾದಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ತರಬೇತಿ ಯನ್ನೊದಗಿಸುತ್ತವೆ. ಇವುಗಳಲ್ಲಿ ಪ್ರತೀ ವಿಷಯಕ್ಕೆ ಸಂಬಂಧಿಸಿದಂತೆ ಪ್ರತೀವರ್ಷವೂ 15 ಅಭ್ಯರ್ಥಿಗಳು ತರಬೇತಿ ಪಡೆಯುತ್ತಾರೆ. ಹುಬ್ಬಳ್ಳಿಯ ಕುಶಲಕರ್ಮಿ ತರಬೇತಿ ಸಂಸ್ಥೆಯಲ್ಲಿ ಮೇಲೆ ಹೇಳಿರುವ ಆರು ವಿಷಯಗಳಲ್ಲೂ ತರಬೇತಿ ನೀಡಲಾಗುತ್ತದೆ. ಗದಗದ ಕುಶಲಕರ್ಮಿ ತರಬೇತಿ ಸಂಸ್ಥೆಯಲ್ಲಿ ಬಡಗಿತನ, ಕಮ್ಮಾರಿಕೆ ಮತ್ತು ಹತ್ತಿ ನೇಯ್ಗೆಗೆ ತರಬೇತಿ ನೀಡಲಾಗುತ್ತದೆ. ಈ ತರಬೇತಿ ಸಂಸ್ಥೆಗಳಲ್ಲೂ ಟ್ರೈಸಂ (ಗ್ರಾಮೀಣ ತರುಣರಿಗೆ ಸ್ವಉದ್ಯೋಗ ತರಬೇತಿ), ಆರ್.ಐ.ಪಿ (ಗ್ರಾಮೀಣ ಕೈಗಾರಿಕಾ ಯೋಜನೆ) ಮತ್ತು ಆರ್.ಎ.ಪಿ. (ಗ್ರಾಮೀಣ ಉದ್ಯೋಗ ಕಾರ್ಯಕ್ರಮ) ಯೋಜನೆಯಡಿಯಲ್ಲಿ ಬರುವ ಅಭ್ಯರ್ಥಿಗಳಿಗೂ ತರಬೇತಿ ಕೊಡಲಾಗುತ್ತದೆ.

ಟ್ರೈಸಂ (ಟ್ರೇನಿಂಗ್ ರೂರಲ್ ಯೂತ್ ಫಾರ್ ಸೆಲ್ಫ್ ಎಂಪ್ಲಾಯ್‌ಮೆಂಟ್) ಕಾರ್ಯಕ್ರಮದನ್ವಯ ಗ್ರಾಮೀಣ ಪ್ರದೇಶದಲ್ಲಿ 18 ರಿಂದ 35 ವರ್ಷಗಳ ವರೆಗಿನರಾಗಿದ್ದು ಬಡತನ ರೇಖೆಗಿಂತಲೂ ಕೆಳಗಿರುವ ಯುವಕರಿಗೆ ಹಾಗೂ ಯುವತಿಯರಿಗೆ ಮತ್ತು ಕುಶಲ ಕೆಲಸಗಾರರಿಗೆ ಸ್ವಯಂ ಉದ್ಯೋಗಸ್ಥರನ್ನಾಗಿ ಮಾಡುವ ತರಬೇತಿಯನ್ನು ನೀಡಲಾಗುವುದು. ತರಬೇತಿ ಅವಧಿಯು 6 ತಿಂಗಳಿಂದ 9 ತಿಂಗಳ ಕಾಲಾವಧಿಯದಾಗಿರುತ್ತದೆ. ತರಬೇತಿಯ ಕಾಲಾವಧಿಯಲ್ಲಿ ರೂ. 75 ರಿಂದ ರೂ.200 ರವರೆಗೆ ಮಾಸಿಕ ತರಬೇತಿ ಭತ್ಯವನ್ನು ಕೊಡಲಾಗುವುದು. ಇವರಿಗೆ ಆಟೋಮೊಬೈಲ್ ರಿಪೇರಿ, ದರ್ಜಿ ಕೆಲಸ, ಉಣ್ಣೆ ನೇಯುವುದು, ಹತ್ತಿ ನೇಯುವುದು, ಪುಸ್ತಕಕ್ಕೆ ರಟ್ಟು ಹಾಕುವುದು, ಅಗರಬತ್ತಿ ತಯಾರಿಕೆ, ದೂರದರ್ಶನ ದುರಸ್ತಿ, ಕೊಳವೆಬಾವಿ ದುರಸ್ತಿ, ಚರಕದಿಂದ ನೂಲು ತೆಗೆಯುವುದು, ಕೃಷಿ ಉಪಕರಣಗಳನ್ನು ರಿಪೇರಿ ಮಾಡುವುದು ಮೊದಲಾದ ತರಬೇತಿಯನ್ನು ಕೊಡಲಾಗುವುದು. ಜಿಲ್ಲೆಯಲ್ಲಿ ಟ್ರೈಸಂ ಯೋಜನೆಯನ್ವಯ ತರಬೇತಿ ಕೊಡಲು ಅಂಗೀಕೃತ ಸಂಸ್ಥೆಗಳನ್ನು ಈ ಮುಂದೆ ಕೊಡಲಾಗಿದೆ. ಸಣ್ಣ ಕೈಗಾರಿಕಾ ಸೇವಾ ಸಂಸ್ಥೆ, ಹುಬ್ಬಳ್ಳಿ; ಇಂಡಿಯಾ ಡೆವಲಪ್‌ಮೆಂಟ್ ಸರ್ವಿಸ್, ಧಾರವಾಡ, ಮೆಡಲೇರಿ ಮತ್ತು ಗದಗ; ಬ್ಯಾಹಟ್ಟಿ ಗ್ರಾಮಾಭಿವೃದ್ಧಿ ಸಂಘ, ಬ್ಯಾಹಟ್ಟಿ; ಜೆ.ಎಸ್.ಎಸ್.ವೊಕೇಶನಲ್ ಸ್ಕೂಲ್ ಆಫ್ ಆರ್ಟ್ಸ್ ಅಂಡ್ ಕ್ರಾಫ್ಟ್, ಧಾರವಾಡ; ಆರ್ಟಿಸಾನ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, ಹುಬ್ಬಳ್ಳಿ ಮತ್ತು ಗದಗ; ಅಮನ್ ರೇಡಿಯೋ ಇನ್‌ಸ್ಟಿಟ್ಯೂಟ್ ಹುಬ್ಬಳ್ಳಿ; ಖಾದಿ ಗ್ರಾಮೋದ್ಯೋಗ ಸಂಘ, ಬಿ. ಅರಳಿಕಟ್ಟೆ, ಹುಬ್ಬಳ್ಳಿ; ಧಾರವಾಡ ತಾಲೂಕು ಸೇವಾ ಸಂಘ, ಧಾರವಾಡ; ಖಾದಿ ಗ್ರಾಮೋದ್ಯೋಗ ಸಂಘ, ಶಿರಹಟ್ಟಿ ಮತ್ತು ಉಪ್ಪಿನ ಬೆಟಗೇರಿ; ಹಾನಗಲ್ ತಾಲೂಕು ಮಹಿಳಾ ಫೆಡರೇಷನ್, ಹಾನಗಲ್; ರೀಸರ್ಚ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್ ಮತ್ತು ಟೆಕ್ನಾಲಜಿ, ಧಾರವಾಡ; ಅಗ್ರಿಕಲ್ಚರಲ್ ಮಿಶನರಿ ಸೆಂಟರ್, ಗದಗ; ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಘ, ಹುಬ್ಬಳ್ಳಿ, ಮತ್ತು ವಿನಯ ಹ್ಯಾಂಡಿಕ್ರಾಫ್ಟ್ ವರ್ಕರ್ಸ್ ಅಸೋಸಿಯೇಶನ್. ಇವು ಟ್ರೈಸಂ ಅಡಿಯಲ್ಲಿ ತರಬೇತಿಯನ್ನು ಕೊಡಲು ನಿಯೋಜಿಸಲ್ಪಟ್ಟಿರುವ ಸಂಸ್ಥೆಗಳಾಗಿವೆ.

1993-94 ರ ಅಂತ್ಯದ ವೇಳೆಯಲ್ಲಿ ಜಿಲ್ಲೆಯಲ್ಲಿ 22 ಕೈಗಾರಿಕಾ ತರಬೇತಿ ಸಂಸ್ಥೆಗಳು ಸೆಕ್ರೆಟೇರಿಯಲ್ ಪ್ರಾಕ್ಟೀಸ್, ವೆಲ್ಡರ್, ಶೀಟ್ ಮೆಟಲ್, ಮೆಕ್ಯಾನಿಕ್ ಡೀಸಲ್, ಬಿಲ್ಡಿಂಗ್ ಕನ್‌ಸ್ಟ್ರಕ್ಷನ್, ಡ್ರಾಫ್ಟ್‌ಮೆನ್ ಮೆಕ್ಯಾನಿಕ್, ಡ್ರಾಫ್ಟ್‌ಮೆನ್ ಸಿವಿಲ್, ಎಲೆಕ್ಟ್ರೀಷಿಯನ್ ಫಿಟ್ಟರ್, ಮೆಷಿನಿಸ್ಟ್, ಮೆಷಿನಿಸ್ಟ್ ಗ್ರೈಂಡರ್, ಟರ್ನರ್, ಜನರಲ್ ಎಲೆಕ್ಟ್ರಾನಿಕ್ಸ್, ಕಟ್ಟಿಂಗ್ ಅಂಡ್ ಟೈಲರಿಂಗ್ ಮೊದಲಾದವುಗಳಿಗೆ ತರಬೇತಿಯನ್ನೊದಗಿಸುತ್ತವೆ. ಜಿಲ್ಲೆಯಲ್ಲಿ 22 ಕೈಗಾರಿಕಾ ತರಬೇತಿ ಸಂಸ್ಥೆಗಳ ಪೈಕಿ ಎರಡು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಮಹಿಳಾ) ಗದಗ ಮತ್ತು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಹುಬ್ಬಳ್ಳಿ, ಇವು ಸರ್ಕಾರಿ ವಲಯಕ್ಕೆ ಸೇರಿದವುಗಳಾಗಿದ್ದು ಉಳಿದ 20ಕೈಗಾರಿಕಾ ತರಬೇತಿ ಸಂಸ್ಥೆಗಳು ಖಾಸಗಿ ವಲಯಕ್ಕೆ ಸೇರಿದವುಗಳಾಗಿವೆ. ಶೇಡಜಿ ಚಿಡ್ಡಾ ಕೈಗಾರಿಕಾ ತರಬೇತಿ ಸಂಸ್ಥೆ, ರಾಜಾಜಿನಗರ, ಹುಬ್ಬಳ್ಳಿ; ಎಸ್.ಜೆ.ಎಂ.ವಿ.ಸಂಘ ಕೈಗಾರಿಕಾ ತರಬೇತಿ ಸಂಸ್ಥೆ (ಮಹಿಳೆಯರು) ಮೂರು ಸಾವಿರದ ಮಠ ಕಾಂಪೌಂಡ್, ಹುಬ್ಬಳ್ಳಿ; ಕೆ.ಎಸ್.ಆರ್.ಟಿ.ಸಿ ಕೈಗಾರಿಕಾ ತರಬೇತಿ ಸಂಸ್ಥೆ, ಗೋಕುಲ ರಸ್ತೆ, ಹುಬ್ಬಳ್ಳಿ; ಜೀವೇಶ್ವರ ಶಿಕ್ಷಣ ಸಮಿತಿ ಕೈಗಾರಿಕಾ ತರಬೇತಿ ಸಂಸ್ಥೆ, ಹಳೇ ಹುಬ್ಬಳ್ಳಿ, ಹುಬ್ಬಳ್ಳಿ; ಎಸ್.ಎಸ್.ಕೆ. ಹಿತವರ್ಧಕ ಸಂಘ, ವೈಟಿ. ಮಿಸ್ಕಿನ್ ಕೈಗಾರಿಕಾ ತರಬೇತಿ ಸಂಸ್ಥೆ, ದಾಜೀಬಾನ ಪೇಟೆ,

ಹುಬ್ಬಳ್ಳಿ; ಕೆ.ಹೆಚ್. ಪಾಟೀಲ್ ಕೈಗಾರಿಕಾ ತರಬೇತಿ ಸಂಸ್ಥೆ,ವಿದ್ಯಾನಗರ, ಹುಬ್ಬಳ್ಳಿ; ಸರ್ ಸಿದ್ದಪ್ಪ ಕಂಬಳಿ ಮೆಮೋರಿಯಲ್ ಕೈಗಾರಿಕಾ ತರಬೇತಿ ಸಂಸ್ಥೆ, ಗದಗ; ಶ್ರೀ ಕೊಟ್ಟೂರ ಸ್ವಾಮಿ ಕೈಗಾರಿಕಾ ತರಬೇತಿ ಸಂಸ್ಥೆ, ನರೇಗಲ್, ರೋಣ ತಾಲೂಕು; ಶ್ರೀ ಜಗದ್ಗುರು ತೋಂಟದಾರ್ಯ ಕೈಗಾರಿಕಾ ತರಬೇತಿ ಸಂಸ್ಥೆ, ಡಂಬಳ, ಮುಂಡರಗಿ ತಾಲೂಕು; ಎಸ್.ಇ.ಎ. ಅಪ್ಪಣ್ಣ ಅತ್ತಿಗೇರಿ ಕೈಗಾರಿಕಾ ತರಬೇತಿ ಸಂಸ್ಥೆ, ಟೌನ್‌ಹಾಲ್, ಧಾರವಾಡ; ಶ್ರೀ ಜಗದ್ಗುರು ಅಜಾತನಾಗಲಿಂಗ ಮಹಾಸ್ವಾಮಿ ವಿದ್ಯಾಪೀಠ ಕೈಗಾರಿಕಾ ತರಬೇತಿ ಸಂಸ್ಥೆ, ನವಲಗುಂದ; ಸಂಜಯ ಗ್ರಾಮೀಣ ವಿದ್ಯಾ ಸಂಸ್ಥೆ ಕೈಗಾರಿಕಾ ತರಬೇತಿ ಸಂಸ್ಥೆ, ಹೊಳೆ ಆಲೂರು; ಟಿ.ಎಂ.ಎ.ಇ. ಸೊಸೈಟೀಸ್ ಟೊಂಕದ ವೀರಪ್ಪ ಕೈಗಾರಿಕಾ ತರಬೇತಿ ಸಂಸ್ಥೆ, ಹಾವೇರಿ; ಟಿ.ಎಂ.ಎ.ಇ.ಎಸ್. ಶ್ರೀ ಮಹರ್ಷಿ ವಾಲ್ಮೀಕಿ ಕೈಗಾರಿಕಾ ತರಬೇತಿ ಸಂಸ್ಥೆ, ರಾಣೆಬೆನ್ನೂರು; ಬಾಪೂಜಿ ಕೈಗಾರಿಕಾ ತರಬೇತಿ ಸಂಸ್ಥೆ, ಲಕ್ಷ್ಮೇಶ್ವರ, ಶಿರಹಟ್ಟಿ ತಾಲೂಕು; ಮಾದರ ಚೆನ್ನಯ್ಯ ಕೈಗಾರಿಕಾ ತರಬೇತಿ ಸಂಸ್ಥೆ, ಶಿರೋಳ, ನರಗುಂದ ತಾಲೂಕು; ಡಾ: ಅಂಬೇಡ್ಕರ್ ಶಿಕ್ಷಣ ಸಮಿತಿ ಕೈಗಾರಿಕಾ ತರಬೇತಿ ಸಂಸ್ಥೆ, ಮಿಶ್ರಿಕೋಟೆ, ಕಲಘಟಗಿ ತಾಲೂಕು; ಪ್ರೊ: ಕೆ.ಎಸ್. ಶರ್ಮಾ ಕೈಗಾರಿಕಾ ತರಬೇತಿ ಸಂಸ್ಥೆ, ಗೋಕುಲ ರಸ್ತೆ, ಹುಬ್ಬಳ್ಳಿ; ನವಲಗುಂದ ಶಿಕ್ಷಣ ಸಮಿತಿ ಕೈಗಾರಿಕಾ ತರಬೇತಿ ಸಂಸ್ಥೆ, ನವಲಗುಂದ; ಮತ್ತು ಮಹಿಳಾ ವಿದ್ಯಾಪೀಠ ಕೈಗಾರಿಕಾ ತರಬೇತಿ ಸಂಸ್ಥೆ ಹೊಸೂರ, ಹುಬ್ಬಳ್ಳಿ ಇವು ಜಿಲ್ಲೆಯಲ್ಲಿನ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು.

ಜಿಲ್ಲಾ ಕೈಗಾರಿಕಾ ಕೇಂದ್ರವು ಉದ್ಯಮಶೀಲತೆಯ ಅಭಿವೃದ್ಧಿ ಯೋಜನೆಯನ್ನು ಹಮ್ಮಿಕೊಂಡು ಪ್ರತೀ ವರ್ಷವೂ ಉದ್ದಿಮೆದಾರರಿಗೆ ತರಬೇತಿ ನೀಡುತ್ತಿದೆ.

## ಜೈವಾನಿಲ ಮತ್ತು ಅಸ್ತ್ರ ಒಲೆಗಳು

ಜೈವಾನಿಲವನ್ನು ದನಗಳ ಗೊಬ್ಬರದಿಂದ ಉತ್ಪಾದಿಸಲಾಗುತ್ತದೆ. ಜಿಲ್ಲೆಯಲ್ಲಿ ದನಗಳ ಸಂಖ್ಯೆ ಅಧಿಕವಾಗಿರುವುದರಿಂದಲೂ, ಅನಿಲ ಘಟಕದಿಂದ ಹೊರಬರುವ ಬಗ್ಗಡ ಫಲವತ್ತಾಗಿರುತ್ತದೆ ಎಂಬುದು ಸಂಶೋಧನೆಯಿಂದ ತಿಳಿದು ಬಂದಿರುವುದರಿಂದಲೂ ಇದರ ಉಪಯೋಗವನ್ನು ಗ್ರಾಮಾಂತರ ಪ್ರದೇಶದ ಜನಗಳು ಪಡೆದುಕೊಳ್ಳಬಹುದಾಗಿದೆ. ಇದು ಸೌದೆ ಕೊರತೆಯನ್ನು ನಿವಾರಿಸುತ್ತದೆ. ಇದರ ಸೌಲಭ್ಯವು ಗ್ರಾಮಾಂತರ ಜನಗಳಿಗೆ ದೊರಕುವಂತೆ ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರವು ಪ್ರತೀಘಟಕದ ಅಂದಾಜು ವೆಚ್ಚಕ್ಕೆ ಸಹಾಯ ಧನವನ್ನು ಕೊಡುವುದರ ಜೊತೆಗೆ ಬ್ಯಾಂಕುಗಳಿಂದ ಸಾಲ ಸೌಲಭ್ಯ ದೊರಕುವಂತೆ ಮಾಡಿದೆ. ಜಿಲ್ಲಾ ಪರಿಷತ್ ಮತ್ತು ರಾಜ್ಯದ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ತಾಂತ್ರಿಕ ನೆರವಿನೊಂದಿಗೆ ಇವುಗಳ ಮೇಲ್ವಿಚಾರಣೆ ನಡೆಸುತ್ತವೆ. 1994 ರ ಮಾರ್ಚ್ ಅಂತ್ಯದ ವೇಳೆಗೆ ಜಿಲ್ಲೆಯಲ್ಲಿ ಒಟ್ಟು 4,600 ಅನಿಲ ಘಟಕಗಳಿದ್ದವು. ಇವುಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 275 ಲಕ್ಷ ರೂಪಾಯಿ ಅನುದಾನ ಸೌಲಭ್ಯವನ್ನೊದಗಿಸಿವೆ.

ಕಡಿಮೆ ಸೌದೆಯನ್ನು ಬಳಸಿ ಹೆಚ್ಚು ಶಾಖವನ್ನು ಪಡೆಯುವುದಕ್ಕೆ ಮತ್ತು ಕಡಿಮೆ ಹೊಗೆಯನ್ನು ಉಗುಳುವಂತೆ ವಿನ್ಯಾಸಗೊಂಡಿರುವ ಅಸ್ತ್ರ (ಎ.ಎಸ್.ಟಿ.ಆರ್.ಎ.) ಒಲೆಗಳು ಗ್ರಾಮಾಂತರ ಪ್ರದೇಶದಲ್ಲಿ ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಬಳಕೆಯಲ್ಲಿವೆ. ಪ್ರತಿ ಅಸ್ತ್ರ ಒಲೆಯ ಉತ್ಪಾದನಾ ವೆಚ್ಚ 120 ರೂಪಾಯಿಗಳಾದರೆ ಚರ ಒಲೆಯ ವೆಚ್ಚ 135 ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಇವುಗಳಿಗೂ ಸರ್ಕಾರದ ಅನುದಾನ ಸೌಲಭ್ಯವಿದೆ.

### ಕೋಷ್ಟಕ 5.16

ಧಾರವಾಡ ಜಿಲ್ಲೆಯಲ್ಲಿ 1994 ರ ಮಾರ್ಚ್ ಅಂತ್ಯದವರೆಗೂ ಇದ್ದ ತಾಲೂಕುವಾರು ಗೋಬರ್ ಗ್ಯಾಸ್, ಅಸ್ತ್ರ ಒಲೆ ಮತ್ತು ಚರ ಒಲೆಗಳ ಸಂಖ್ಯೆ.

| ಕ್ರಮ ಸಂಖ್ಯೆ | ತಾಲೂಕಿನ ಹೆಸರು | ಗೋಬರ ಗ್ಯಾಸ ಸಂಖ್ಯೆ | ಅಸ್ತ್ರ ಒಲೆಗಳ ಸಂಖ್ಯೆ | ಚರ ಒಲೆಗಳ ಸಂಖ್ಯೆ | ಕ್ರಮ ಸಂಖ್ಯೆ | ತಾಲೂಕಿನ ಹೆಸರು | ಗೋಬರ ಗ್ಯಾಸ್ ಸಂಖ್ಯೆ | ಅಸ್ತ್ರ ಒಲೆಗಳ ಸಂಖ್ಯೆ | ಚರ ಒಲೆಗಳ ಸಂಖ್ಯೆ |
|---|---|---|---|---|---|---|---|---|---|
| 1 | ಧಾರವಾಡ | 39 | 250 | - | 3 | ಮುಂಡರಗಿ | 73 | 315 | 67 |
| 2 | ಬ್ಯಾಡಗಿ | 514 | 1961 | - | 4 | ಹುಬ್ಬಳ್ಳಿ | 408 | 1623 | 75 |

| ಕ್ರಮ ಸಂಖ್ಯೆ | ತಾಲೂಕಿನ ಹೆಸರು | ಗೋಬರ ಗ್ಯಾಸ ಸಂಖ್ಯೆ | ಅಸ್ತ ಒಲೆಗಳ ಸಂಖ್ಯೆ | ಚರ ಒಲೆಗಳ ಸಂಖ್ಯೆ | ಕ್ರಮ ಸಂಖ್ಯೆ | ತಾಲೂಕಿನ ಹೆಸರು | ಗೋಬರ ಗ್ಯಾಸ್ ಸಂಖ್ಯೆ | ಅಸ್ತ ಒಲೆಗಳ ಸಂಖ್ಯೆ | ಚರ ಒಲೆಗಳ ಸಂಖ್ಯೆ |
|---|---|---|---|---|---|---|---|---|---|
| 5 | ರಾಣೆಬೆನ್ನೂರ | 411 | 850 | 450 | 12 | ಕುಂದಗೋಳ | - | 250 | - |
| 6 | ಸವಣೂರ | 105 | 200 | 75 | 13 | ಕಲಘಟಗಿ | 288 | 190 | 75 |
| 7 | ನರಗುಂದ | 212 | 1012 | 45 | 14 | ರೋಣ | 193 | 816 | 90 |
| 8 | ಶಿಗ್ಗಾಂವಿ | 369 | 225 | 70 | 15 | ಹಿರೇಕೆರೂರ | 368 | 350 | 100 |
| 9 | ಹಾವೇರಿ | 440 | 300 | 125 | 16 | ಹಾನಗಲ್ | 47 | 75 | 100 |
| 10 | ನವಲಗುಂದ | 107 | 495 | 75 | 17 | ಶಿರಹಟ್ಟಿ | 75 | 675 | 150 |
| 11 | ಗದಗ | 13 | 200 | - | | ಒಟ್ಟು | 3,662 | 9,787 | 1,497 |

ಆಧಾರ: ಜಿಲ್ಲಾ ಪಂಚಾಯತ್, ಧಾರವಾಡ

## ಹೋಟೇಲುಗಳು

ಧಾರವಾಡ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮ (ಕಾನೂನುಭಂಗ ಚಳವಳಿ) ಹಾಗೂ ಹೋಟೇಲು ಉದ್ಯಮಗಳೆರಡೂ ಒಟ್ಟಿಗೆ ಪ್ರಾರಂಭಗೊಂಡವೆಂದು ಹೇಳಬಹುದು. ಅದಕ್ಕೂ ಪೂರ್ವದಲ್ಲಿ ಸಣ್ಣ ಖಾನಾವಳಿಗಳು ಮುಖ್ಯವಾಗಿ ವೀರಶೈವರಿಂದ ನಡೆಸಲ್ಪಡುತ್ತಿದ್ದವು. ಕಾಫೀ, ಟೀ, ಒದಗಿಸುವ ಉದ್ಯಮವು ದಕ್ಷಿಣ ಕನ್ನಡ ಹಾಗೂ ಮುಂದೆ ಉತ್ತರ ಕನ್ನಡದಿಂದ ಬಂದವರಿಂದ ಹೆಚ್ಚಾಗಿ ಆರಂಭವಾಯಿತು. 1930ರ ಸುಮಾರಿಗೆ ಡಾ|| ಹರ್ಡೀಕರರ ಮಿತ್ರ ಕಡೆಕಾರ್ ಗುರುರಾವ್ ಹುಬ್ಬಳ್ಳಿಯಲ್ಲಿ ಸ್ಥಾಪಿಸಿದ ಹೋಟೇಲು ಪ್ರಸಿದ್ಧ. ಅಂದಿನಿಂದ ಅನೇಕ ಹೋಟೇಲುಗಳಾಗಿ, ಹೋಟೇಲ ಮಾಲಿಕರ ಸಂಘ ಆರಂಭ ಆಯಿತು. 1949ರಲ್ಲಿ ಉಚ್ಚಿಲ ಅನಂತ ಭಟ್ಟರು ಹುಬ್ಬಳ್ಳಿಯಲ್ಲಿ ಊಟ, ಉಪಹಾರ ಮತ್ತು ವಸತಿ ಗೃಹದ ಸೌಲಭ್ಯವಿರುವ ಶ್ರೀ ಕೃಷ್ಣಭವನವನ್ನೂ 1959ರಲ್ಲಿ ವುಡ್‌ಲ್ಯಾಂಡ್ಸ್ ಹೋಟೇಲನ್ನು ಪ್ರಾರಂಭಿಸಿದರು. ಇದೇ ಕಾಲಾವಧಿಯಲ್ಲಿಯೇ ಶ್ರೀ ರಂಗಪ್ಪಾ ಕಾಮತರು ತಮ್ಮ ಬಂಧುಗಳೊಡನೆ ಹೋಟೇಲ್ ಉದ್ಯಮ ರಂಗಕ್ಕಿಳಿದು ಹುಬ್ಬಳ್ಳಿಯ ರೈಲ್ವೆ ಸ್ಟೇಷನ್ ಸಮೀಪ ವಸಂತ ಕೆಫೆಯನ್ನು ರೈಲ್ವೆ ಕಾರ್ಯಾಗಾರದ (ವರ್ಕ್‌ಶಾಪ್) ಸಮೀಪ ಕ್ಯಾಂಟೀನನ್ನು, ಬ್ರಾಡ್‌ವೇಯಲ್ಲಿ ಎರಡು ಕಾಮತ್ ಹೋಟೇಲು ಹಾಗೂ ರೆಸ್ಟೋರೆಂಟ್ ಪ್ರಾರಂಭಿಸಿದರು. ಧಾರವಾಡದಲ್ಲಿ ಬ್ರಾಹ್ಮಣರ ಟೀ ಕ್ಲಬ್ಬಿನ ಕಿದಿಯೂರು ಹರಿದಾಸ ಭಟ್ಟ, ಕಿದಿಯೂರು ರಂಗರಾಯ (ಟೂರಿಸ್ಟ್ ಹೋಟೇಲ್), ಅವರ ಬಂಧುಗಳಾದ ಜನಾರ್ದನರಾವ್ ಮತ್ತು ಸರ್ವೋತ್ತಮರಾವ್ (ಧಾರವಾಡ ರೆಸ್ಟೋರೆಂಟ್) ಇವರುಗಳು ಸಂಘಕಟ್ಟಿ ಈ ಉದ್ದಿಮೆಯನ್ನು ಬೆಳೆಸಿದರು. ಹುಬ್ಬಳ್ಳಿ, ಧಾರವಾಡ ಮತ್ತು ಗದಗ ಇವುಗಳು ವಿದ್ಯಾ ಹಾಗೂ ವ್ಯಾಪಾರ ಕೇಂದ್ರಗಳಾಗಿರುವುದರಿಂದ ಮತ್ತು ಜಿಲ್ಲೆಯ ಅನೇಕ ಸ್ಥಳಗಳ ಪ್ರವಾಸಿಗಳನ್ನು ಆಕರ್ಷಿಸುತ್ತಿರುವುದರಿಂದ ಜಿಲ್ಲೆಯಲ್ಲಿ ಹೋಟೇಲ ಉದ್ಯಮವು ತ್ವರಿತ ಗತಿಯಲ್ಲಿ ಪ್ರಗತಿ ಹೊಂದುತ್ತಿದೆ.

## ಕೈಗಾರಿಕಾ ಬೆಳವಣಿಗೆಯ ಅವಕಾಶಗಳು

ಸಣ್ಣ ಕೈಗಾರಿಕೆಯ ಸೇವಾ ಸಂಸ್ಥೆ ನಡೆಸಿದ ಸಮೀಕ್ಷೆಯಂತೆ ಧಾರವಾಡ ಜಿಲ್ಲೆಯಲ್ಲಿ ಅನೇಕ ಸಣ್ಣ ಕೈಗಾರಿಕೆಗಳ ಬೆಳವಣಿಗೆಗೆ ವಿಪುಲ ಅವಕಾಶವಿದೆ. ಜಿಲ್ಲೆಯು ವ್ಯವಸಾಯ ಕ್ಷೇತ್ರದಲ್ಲಿ ತೀವ್ರ ಸುಧಾರಣೆಯನ್ನು ಪಡೆದುಕೊಂಡರೆ ವ್ಯವಸಾಯೋತ್ಪನ್ನಗಳಾದ ಹತ್ತಿ, ಜೋಳ, ಎಣ್ಣೆ ಬೀಜಗಳು, ಬತ್ತ, ಮೆಣಸಿನಕಾಯಿ, ಮೊದಲಾದವುಗಳನ್ನು ಉಪಯೋಗಿಸಿಕೊಂಡು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಬಹುದು. ಹತ್ತಿ ಬೀಜ ಬಿಡಿಸುವ, ಒತ್ತುವ ಮತ್ತು ಬಟ್ಟೆ ತಯಾರಿಸುವ ಉದ್ಯಮಗಳನ್ನು ಸ್ಥಾಪಿಸಲು ಅವಕಾಶವಿದೆ. ಬತ್ತದ ಹುಲ್ಲನ್ನು ರಟ್ಟುಗಳ ತಯಾರಿಕೆಗೆ ಬಳಸಬಹುದಾಗಿದೆ. ಜೋಳದ ದಂಟನ್ನು ಚಾಪೆ ಹೆಣೆಯಲು, ಅದರ ಮಧ್ಯಭಾಗದ ಬೆಂಡಿನಿಂದ ಮಕ್ಕಳ ಆಟದ ಸಾಮಾನುಗಳನ್ನು ಮಾಡಬಹುದು. ಜೋಳದ ಕಾಳನ್ನು ಪಿಷ್ಟ, ಹಿಟ್ಟು, ಡಕೋಸ್ಟ, ಖಾದ್ಯ ಎಣ್ಣೆ ಮತ್ತು ಬ್ಯೂಟೈಲ್ ಆಲ್ಕೊಹಾಲ್ ತಯಾರಿಸಲು ಉಪಯೋಗಿಸಬಹುದು. ಹತ್ತಿಬೀಜದ ದ್ರಾವಕ ತೆಗೆಯುವ ಘಟಕ, ಹಣ್ಣಿನ ರಸ ತೆಗೆಯುವ ಘಟಕ, ಮೊದಲಾದವುಗಳನ್ನು ಸ್ಥಾಪಿಸಬಹುದು. ರವೆ, ಹಿಟ್ಟು, ಮೆಣಸಿನಕಾಯಿ ಪುಡಿ, ಆಲೂಗಡ್ಡೆ ಚಿಪ್ಸ್, ಮೊದಲಾದ ವ್ಯವಸಾಯ

ಆಧಾರಿತ ಕೈಗಾರಿಕೆಗಳನ್ನು ತೆರೆಯಬಹುದು. ಮಾವಿನ ಹಣ್ಣಿನ ರಸ, ಮಾವಿನ ಹಣ್ಣಿನ ಮತ್ತು ತರಕಾರಿಗಳ ಉಪ್ಪಿನಕಾಯಿ ತಯಾರಿಕಾ ಘಟಕಗಳನ್ನು ಹಾವೇರಿ, ಕಲಘಟಗಿ, ಹುಬ್ಬಳ್ಳಿ, ಧಾರವಾಡ, ಶಿಗ್ಗಾಂವಿ, ಕೊಣ್ಣೂರು ಮತ್ತು ಹೊಳೆ ಆಲೂರುಗಳಲ್ಲಿ ಸ್ಥಾಪಿಸಬಹುದು.

ಧಾರವಾಡ, ಹುಬ್ಬಳ್ಳಿ, ರೋಣ ಮತ್ತು ಕುಂದಗೋಳಗಳಲ್ಲಿ ಚರ್ಮೋದ್ಯಮ ಘಟಕಗಳನ್ನೂ, ಅಳ್ನಾವರದಲ್ಲಿ ಮರದ ಪೀಠೋಪಕರಣಗಳನ್ನು ತಯಾರಿಸುವ ಘಟಕಗಳನ್ನು ತೆರೆಯಬಹುದು. ಹುಬ್ಬಳ್ಳಿ, ಧಾರವಾಡ, ಗದಗ ಮತ್ತು ಹಾವೇರಿಗಳಲ್ಲಿ ಆಸ್ಪತ್ರೆಗಳು ಶುಶ್ರೂಷಾ ಕೇಂದ್ರಗಳು ಹೆಚ್ಚು ಹೆಚ್ಚಾಗಿ ಸ್ಥಾಪನೆಗೊಳ್ಳುತ್ತಿರುವುದರಿಂದ ಅವುಗಳಿಗೆ ಬೇಕಾಗುವ ಪೀಠೋಪಕರಣಗಳು, ಹಾಸಿಗೆಗಳು, ಮೊದಲಾದವುಗಳನ್ನು ತಯಾರಿಸುವ ಉದ್ಯಮಗಳ ಸ್ಥಾಪನೆಗೆ ಅವಕಾಶವಿದೆ. ಜಿಲ್ಲೆಯ ಅನೇಕ ನಗರಗಳು ವಿದ್ಯಾ ಕೇಂದ್ರಗಳಾಗಿರುವುದರಿಂದ ನೋಟು ಪುಸ್ತಕಗಳು, ಡ್ರಾಯಿಂಗ್ ಪುಸ್ತಕಗಳು, ಶಾಲಾ ಸಮವಸ್ತ್ರಗಳು, ಶಾಲಾ ಬ್ಯಾಗುಗಳು, ಸ್ಲೇಟುಗಳು, ಕ್ಯಾನ್‌ವಾಸ್ ಷೂಸ್, ಮೊದಲಾದವುಗಳ ಘಟಕಗಳನ್ನು ಸ್ಥಾಪಿಸಬಹುದು.

ಜಿಲ್ಲೆಯಲ್ಲಿ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಅಧಿಕ ಪ್ರಮಾಣದಲ್ಲಿ ಬೆಳೆಯುತ್ತಿರುವುದರಿಂದ ಅವುಗಳಿಗೆ ಬೇಕಾಗುವ ಸರಕುಗಳನ್ನು ಉತ್ಪಾದಿಸುವ ಪೂರಕ ಕೈಗಾರಿಕೆಗಳ ಬೆಳವಣಿಗೆಗೆ ಅವಕಾಶವಿದೆ. ಕುರಿ ಮತ್ತು ಆಡುಗಳ ಚರ್ಮವನ್ನು ಸಂಸ್ಕರಿಸುವ ಉದ್ಯಮವನ್ನು ಸ್ಥಾಪಿಸುವುದಕ್ಕೂ ಚೀನೀ ಮಣ್ಣನ್ನು ಶುದ್ಧೀಕರಿಸಿ ಪಿಂಗಾಣಿಯ ವಿದ್ಯುತ್ ನಿರೋಧಕಗಳನ್ನು ತಯಾರಿಸುವುದಕ್ಕೂ ಹೆಚ್ಚಿನ ಅವಕಾಶವಿದೆ. ಚಪ್ಪಡಿಗಳನ್ನು ಹೊಳಪುಪಡಿಸುವುದು, ಗಾಜು ತಯಾರಿಕೆ, ಗುಲಾಬಿ ಎಣ್ಣೆ, ಹಿಂಡಿಯಿಂದ ಗೊಬ್ಬರ, ತೈಲದ ಶುದ್ಧೀಕರಣ, ಮೊದಲಾದ ಸಣ್ಣ ಉದ್ಯಮವನ್ನು ಜಿಲ್ಲೆಯಲ್ಲಿ ಸ್ಥಾಪಿಸಬಹುದು.